ನಗೆಗಡಲು

ಪ್ರಾಕ್ತನ ವಿಮರ್ಶ ವಿಚಕ್ಷಣ, ರಾವ್ ಬಹಾದುರ್

ಆರ್. ನರಸಿಂಹಾಚಾರ್ಯ, ಎಂ.ಎ., ಎಂ.ಆರ್.ಎ.ಎಸ್.

ಇವರಿಂದ ವಿರಚಿತವಾದುದು

ಬೆಂಗಳೂರು ಸಿಟಿ:

ಬಿ. ಸುಬ್ಬಯ್ಯ ಅಂಡ್ ಸನ್ಸ್, ಪ್ರಿಂಟರ್ಸ್, ಅವೆನ್ಯೂ ರೋಡ್

೧೯೩೩

NAGEGADALU

BY

PRAKTANA-VIMARSA-VICHAKSHANA

RAO BAHADUR R. NARASIMHACHARYA

M. A., M. R. A. S.

ನ ಗೆ ಗ ಡ ಲು

ಪ್ರಾಕ್ತನ ವಿಮರ್ಶ ವಿಚಕ್ಷಣ, ರಾವ್ ಬಹಾದುರ್

ರಾ. ನರಸಿಂಹಾಚಾರ್ಯ, ಎಂ.ಎ., ಎಂ.ಆರ್.ಎ.ಎಸ್.

ಅವರಿಂದ ವಿರಚಿತವಾದುದು

Sixth Edition

BANGALORE :

PRINTED BY V. B. SOOBBIAH & SONS, PRINTERS

1933

All Rights Reserved] [**Price As. 6**

ಸೂಚನೆ

ಕನ್ನಡ ಭಾಷೆಯಲ್ಲಿ ಹಾಸ್ಯರಸಪ್ರಧಾನವಾಗಿಯೂ ಕಥಾರೂಪವಾಗಿಯೂ ಇರುವ ಗ್ರಂಥಗಳು ಅತಿವಿರಳ ಎಂಬಂಶವು ಎಲ್ಲರಿಗೂ ವೇದ್ಯವಾಗಿಯೇ ಇದೆ. ಈ ಕೊರತೆಯನ್ನು ಸ್ವಲ್ಪಮಟ್ಟಿಗಾದರೂ ನಿವಾರಣೆ ಮಾಡಬೇಕೆಂಬ ಅಭಿಪ್ರಾಯದಿಂದ "ನಗೆಗಡಲು" ಎಂಬ ಹೆಸರನ್ನಿಟ್ಟು ಈ ಕಥೆಯನ್ನು ಬರೆದಿದ್ದೇನೆ. ಇದು ಹಾಸ್ಯರಸಪ್ರಧಾನವಾಗಿದ್ದರೂ ಅಸಭ್ಯವಾದ ಮಾತಾಗಲಿ ಅಭಿಪ್ರಾಯವಾಗಲಿ ಇಲ್ಲದೆ ಬಹಳ ಮಟ್ಟಿಗೆ ಕನ್ನಡ ಶಬ್ದಗಳನ್ನೇ ಉಪಯೋಗಿಸಿ ಬರೆಯಲ್ಪಟ್ಟಿರುವುದರಿಂದ ಹುಡುಗರು ಹುಡುಗಿಯರು ಮೊದಲಾಗಿ ಎಲ್ಲರೂ ಓದಿ ಆನಂದಿಸಲು ಅರ್ಹವಾಗಿರಬಹುದು ಎಂದು ನಂಬುತ್ತೇನೆ.

ಈ ಗ್ರಂಥವನ್ನು ಮದರಾಸ್, ಮೈಸೂರು, ಬಾಂಬೆ ವಿಶ್ವವಿದ್ಯಾಲಯಗಳ ಅಧಿಕಾರಿಗಳು ಆಗಾಗ್ಗೆ ಪರೀಕ್ಷೆಗಳಿಗೆ ಪಠ್ಯಪುಸ್ತಕವನ್ನಾಗಿ ಏರ್ಪಡಿಸಿ ಪ್ರೋತ್ಸಾಹಿಸಿದುದಕ್ಕಾಗಿ ಅವರುಗಳಿಗೆ ಈ ಮೂಲಕ ನನ್ನ ಕೃತಜ್ಞತೆಯನ್ನು ತಿಳಿಯಪಡಿಸುತ್ತೇನೆ.

ಇದು ಈ ಪುಸ್ತಕದ ಆರನೆಯ ಮುದ್ರಣ. ಹಿಂದಣ ಮುದ್ರಣಕ್ಕೂ ಇದಕ್ಕೂ ಹೆಚ್ಚು ವ್ಯತ್ಯಾಸಗಳಿಲ್ಲ: ಪ್ರಕರಣಗಳ ಹೆಸರುಗಳು ಮಾತ್ರ ಪುಟಗಳ ಮೇಲುಗಡೆಯೂ ಕೊಟ್ಟಿವೆ.

ರಾ. ನರಸಿಂಹಾಚಾರ್ಯ.

ನಗೆಗಡಲು

೧ನೆಯ ಪ್ರಕರಣ.

ಅವತರಣಿಕೆ.

ಕೃಷ್ಣಾನದಿಯ ತಡಿಯಲ್ಲಿ ಗಾಂಪರೊಡೆಯರು ಎಂಬ ಹೆಸರುಳ್ಳ ಗುರುಗಳೊಬ್ಬರು ಒಂದು ಮಠವನ್ನು ಮಾಡಿಕೊಂಡು ಅದರಲ್ಲಿ ವಾಸ ಮಾಡುತ್ತಿದ್ದರು. ಅವರ ಮಠದಲ್ಲಿ ಹೇಳಿದ ಕೆಲಸವನ್ನು ಮಾಡುತ್ತ, ಮೂಳ, ಮಂಕ, ಮುಟ್ಟಾಳ, ಮಡೆಯ, ಮಡ್ಡಿ ಎಂಬ ಬಿರುದುಗಳನ್ನು ಹೊಂದಿದ ಐವರು ಶಿಷ್ಯರಿದ್ದರು.

ಈ ಬಿರುದುಗಳು ಇವರಿಗೆ ಸುಮ್ಮನೆ ಬಂದುವೆಂದು ತಿಳಿಯ ಕೂಡದು. ಒಮ್ಮೆ ಗುರುಗಳೊಬ್ಬರು ದಾರಿಯಲ್ಲಿ ಬರುತ್ತಿರಲು, ಈ ಐವರೂ ಅವರಿದಿರಿಗೆ ಬಂದು ಒಂದೇಕಾಲದಲ್ಲಿ ಕಾಲಿಗೆರಗಿದರು. ಅವರು “ಶುಭಮಸ್ತು’’ ಎಂದು ಹರಸಿ, ಬೇಗನೆ ಮುಂದೆ ಹೋಗುತ್ತಿರಲು, ಇವರು 'ಗುರುಗಳು ಯಾರನ್ನು ಹರಸಿದರು' ಎಂದು ವಿವಾದಮಾಡುತ್ತ, ನನಗೆ ತನಗೆಂದು ಗಟ್ಟಿಯಾಗಿ ಕೂಗಿಕೊಂಡು ಜಗಳವಾಡಿ, ಒಬ್ಬರನ್ನೊಬ್ಬರು ಹೊಡೆದು ಗುದ್ದಾಡಿ, ಬಳಿಕ 'ಈ ಕೋಟಲೆಯೇತಕ್ಕೆ? ಆ ಗುರುಗಳನ್ನೇ ಕೇಳುವ' ಎಂದು ಓಡಿಹೋಗಿ ಅವರನ್ನು ಕೇಳಿದರು. ಗುರುಗಳು ಇವರು ಮುಟ್ಟಾಳರೆಂದು ನಿಶ್ಚಯಿಸಿ, 'ಐವರಲ್ಲಿ ಒಬ್ಬನಿಗೆ ಎಂದರೆ ನಾಲ್ವರು ಮುನಿವರು, ಅದರಿಂದ ನಮಗೆ ಕೇಡಾಗುವುದು' ಎಂದು ಎಣಿಸಿ, ತಮ್ಮನ್ನು ಕಾಪಾಡಿಕೊಳ್ಳುವ ಉಪಾಯವನ್ನು ಆಲೋಚಿಸಿ, 'ನಿಮ್ಮಲ್ಲಿ ಯಾವನು ಅತಿಮೂರ್ಖನೋ ಅವನನ್ನು ಹರಸಿದೆನು' ಎಂದು ಹೇಳಿ ನಿಲ್ಲದೆ ಹೊರಟುಹೋದರು. ಬಳಿಕ ಈ ಐವರೂ

"ಆಂ ಮೂರ್ಖಂ ತಾಂ ಮೂರ್ಖಂ ।
ನೀಂ ಮೂರ್ಖನಯಲ್ಲ ನಿನ್ನ ನಾಲ್ವಡಿಯೆನಿಸ ॥
ಲ್ಯಾಂ ಮೂರ್ಖನೆಂದು ತಮ್ಮೊಳ ।
ಗೋಂನೇಂದೊಡೆ ಶೋಂಮೆನುತ್ತೆ ಬಂದರ್ ಪಥದೊಳ್ ॥"

ಎಂದರೆ—ನಾನು ಮೂರ್ಖ, ತಾನು ಮೂರ್ಖ; ನೀನು ಮೂರ್ಖನಲ್ಲ, ನಾನು ನಿನಗಿಂತ ನಾಲ್ಕರಷ್ಟು ಮೂರ್ಖ; ಎಂದು ತಮ್ಮತಮ್ಮೊಳಗೆ ವಿವಾದಮಾಡುತ್ತ ಒಬ್ಬನು ಓಂ ಎಂದರೆ ಮತ್ತೊಬ್ಬನು ಶೋಂ ಎನ್ನುತ್ತ ದಾರಿಯಲ್ಲಿ ಬಂದರು. ಹೀಗೆ ಬಂದು ಒಂದು ಮರದ ಕೆಳಗೆ ಕುಳಿತಿದ್ದ ಕೆಲವು ಮಂದಿ ಜನರನ್ನು ನೋಡಿ, ಅವರಲ್ಲಿ ತಮ್ಮ ಜಗಳವನ್ನು ಹೇಳಿ ಕೊಂಡು, 'ನಮ್ಮೈವರಲ್ಲಿ ಯಾರತಿಮೂರ್ಖರು? ಹೇಳಬೇಕು' ಎಂದು ಕೇಳಿಕೊಳ್ಳಲು, ಅವರು 'ನಿಮ್ಮ ನಿಮ್ಮ ಮೂರ್ಖತನವನ್ನು ತೋರಿಸುವ ಯಾವುದಾದರೂ ಕೆಲಸಗಳನ್ನು ಮಾಡಿದ್ದರೆ ಹೇಳಿ' ಎಂದು ಕೇಳಿದರು. ಆಗ ಆ ಐವರಲ್ಲಿ ಒಬ್ಬನು ಸಭೆಯ ಇದಿರಿಗೆ ನಿಂತು—

"ನನಗೆ ಇಬ್ಬರು ಹೆಂಡಿರು. ನಾನು ಅವರಿಬ್ಬರಲ್ಲಿಯೂ ಎಳ್ಳಷ್ಟು ಭೇದವಿಲ್ಲದೆ ಒಂದೇರೀತಿಯಾದ ಪ್ರೇಮವನ್ನು ತೋರಿಸಿ ಅನುಕೂಲ ನಾಗಿದ್ದೆನು. ಒಂದು ದಿನ ನಾನು ಇಬ್ಬರು ಹೆಂಡಿರ ಮೇಲೆಯೂ ಕೈಗಳನ್ನು ಹಾಕಿಕೊಂಡು ನಿದ್ದೆಮಾಡುತ್ತಿದ್ದಾಗ ಒಂದಿಲಿ ದೀಪದಲ್ಲಿ ಉರಿಯುತ್ತಿದ್ದ ಬತ್ತಿಯನ್ನು ಕಚ್ಚಿಕೊಂಡು ಮೇಲಕ್ಕೆ ಹೋಯಿತು. ಬತ್ತಿಯ ಜ್ವಾಲೆ ತಗಲಿ ಬಾಯಿ ಸುಡಲು, ಇಲಿ ಬಾಯಿತೆರೆದು ಬತ್ತಿ ಯನ್ನು ಕೆಳಕ್ಕೆ ಕೆಡಹಿತು. ಆ ಉರಿವ ಬತ್ತಿ ನನ್ನ ಕಣ್ಣಮೇಲೆ ಸರಿ ಯಾಗಿ ಗುರಿಕಟ್ಟಿ ಹಾಕಿದಂತೆ ಬಿದ್ದಿತು. ನಾನು ಅದನ್ನು ನಂದಿಸು ವುದಕ್ಕೆ ಯಾವ ಕೈಯೆತ್ತಿದರೂ ಹೆಂಡಿರಿಗೆ ಭೇದಮಾಡಿದಂತಾಗುವುದು; ಹಾಗಿಲ್ಲದೆ ಎರಡು ಕೈಗಳನ್ನೂ ಎತ್ತಿದರೆ ಇಬ್ಬರಿಗೂ ನಿದ್ರಾಭಂಗವಾಗ ಬಹುದು; ಎಂದೆಣಿಸಿ ಸುಮ್ಮನೆ ನೋವನ್ನು ಸೈರಿಸಿಕೊಂಡಿದ್ದೆನು. ಅದ ರಿಂದ ಕಣ್ಣು ದೊಳ್ಳಾಯಿತು. ಆಮೇಲೆ ನನಗೆ ದೊಳ್ಳೆಗಣ್ಣ ಎಂಬ ಹೆಸರು ಬಂದಿತು. ಇದೇ ನನ್ನ ಮೂರ್ಖತನ" ಎಂದು ಹೇಳಿ ಒಂದು ಕಡೆಗೆ ಹೋಗಿ ನಿಂತುಕೊಂಡನು.

ಮತ್ತೊಬ್ಬನು ಸಭೆಯಿದಿರಿಗೆ ಬಂದು ನಿಂತುಕೊಂಡು—"ನನಗೆ ಒಬ್ಬಳೇ ಹೆಂಡತಿ. ಒಂದುದಿನ ಇರುಳು ನಾವು ಗಂಡಹೆಂಡಿರು ಸಂತಸದಿಂದ ಮಾತನಾಡಿಕೊಂಡು ನಗುತ್ತಿದ್ದಾಗ, ನಮ್ಮಿಬ್ಬರಲ್ಲಿ ಬೆಳಗಾಗುವವರೆಗೂ ಯಾರು ಮೌನವಾಗಿ ಇರುವುದಿಲ್ಲವೋ ಅವರು ಮತ್ತೊಬ್ಬರಿಗೆ ಹನ್ನೆರಡು ಕಜ್ಜಾಯಗಳನ್ನು ತೆರಬೇಕು ಎಂದು ಪ್ರತಿಜ್ಞೆ ಮಾಡಿಕೊಂಡೆವು. ಆಗ ಒಬ್ಬ ಕಳ್ಳನು ಕನ್ನವನ್ನಿಕ್ಕಿ ಮನೆಯೊಳಗೆ ಹೊಕ್ಕು, ನಾವು ಏನೂ ಮಾತನಾಡದೆ ಇರಲು, ನಿದ್ದೆಮಾಡುತ್ತಾರೆ ಎಂದು ನಿಶ್ಚಯಿಸಿ ಮನೆಯಲ್ಲಿದ್ದ ಒಡವೆಯನ್ನೆಲ್ಲಾ ತೆಗೆದುಕೊಂಡು, ಅಟ್ಟಿದ್ದ ಊಟವನ್ನೆಲ್ಲಾ ಉಂಡು, ಬಳಿಕ ನಾನು ಉಟ್ಟಿದ್ದ ಬಟ್ಟೆಯನ್ನೂ ಹೆಂಡತಿಯ ಬಟ್ಟೆಯನ್ನೂ ಸುಲಿದುಕೊಂಡನು. ಮಾತನಾಡಿದರೆ ಕಜ್ಜಾಯಗಳನ್ನು ತೆರಬೇಕಾಗುವುದೆಂದು ನಾನು ಬಾಯಿ ಬಿಡಲೇ ಇಲ್ಲ. ಹೆಂಡತಿಯ ಹಚ್ಚಡವನ್ನು ಸುಲಿವಾಗ ಅವಳು ಕಳ್ಳನನ್ನು ಕುರಿತು 'ಕೇಳಣ್ಣ, ನೀನು ನನ್ನ ಕಿವಿಯ ಕೊಪ್ಪನ್ನು ತೆಗೆದುಕೊಳ್ಳುವುದಾದರೆ ನೋಯದಂತೆ ತೆಗೆದುಕೊಳ್ಳಬೇಕು' ಎನ್ನಲು, 'ಇವಳು ಸೋತಳು, ನಾನು ಗೆದ್ದೆನು!' ಎಂದು ಆನಂದದಿಂದ ಕುಣಿದಾಡುತ್ತ, ಹನ್ನೆರಡು ಕಜ್ಜಾಯಗಳನ್ನು ತೆರಬೇಕು ಎಂದು ಹೆಂಡತಿಗೆ ಹೇಳಿ, ಹೋದ ಒಡವೆಗಳನ್ನು ಲೆಕ್ಕಿಸದೆ ಇದೇ ದೊಡ್ಡದೆಂದಿದ್ದೆನು. ಕಳ್ಳನು ಎಲ್ಲವನ್ನೂ ತೆಗೆದುಕೊಂಡು ಹೊರಟುಹೋದನು. ಇದೇ ನನ್ನ ಮೂರ್ಖತನ" ಎಂದು ನುಡಿದು ಕೆಲಕ್ಕೆ ಹೋಗಿ ನಿಂತನು.

ಇನ್ನೊಬ್ಬನು ಬಂದು—"ನನ್ನ ತಂದೆ ನನಗೆ ಒಬ್ಬ ಹಣಗಾರನ ಮಗಳನ್ನು ಮದುವೆಮಾಡಿದ್ದನು. ಆ ಹೆಣ್ಣು ದೊಡ್ಡವಳಾದರೂ ತಂದೆ ತಾಯಿಗಳನ್ನು ಅಗಲಿ ಇರಲಾರದೆ ತವರುಮನೆಯಲ್ಲಿಯೇ ಹಲವುಕಾಲ ಇದ್ದಳು. ಅವಳನ್ನು ಒಡಗೊಂಡು ಬರಬೇಕೆಂಬ ಆಸೆ ನನ್ನ ಮನದಲ್ಲಿ ಹುಟ್ಟಿ, ನನ್ನ ತಾಯಿತಂದೆಗಳಿಗೆ ಈ ಸಂಗತಿಯನ್ನು ತಿಳಿಸಿದೆನು ಅವರು 'ಮಗನೆ, ನೀನು ಹೊಟ್ಟೆಬಾಕನು; ಹಗಲು ಐದಾರು ಸೂಳು ಉಂಡಲ್ಲದೆ ನಿಲ್ಲಲಾರೆ. ಬಿಯ್ಯಗರ ಮನೆಯಲ್ಲಿ ಇದನ್ನು ಕಂಡರೆ

ಪರಿಹಾಸಮಾಡುವರು. ಆದುದರಿಂದ ಸ್ವಲ್ಪವಾಗಿಯೇ ಉಣ್ಣಬೇಕು. ಅಲ್ಲದೆ ಬಹಳವಾಗಿ ಕರೆಯಿಸಿಕೊಂಡೇ ಊಟಕ್ಕೆ ಹೋಗಬೇಕು' ಎಂದು ಬುದ್ಧಿಹೇಳಿದರು. ಹಾಗೆಯೇ ಮಾಡುವೆನು ಎಂದು ಹೇಳಿ, ನಾನು ಪಯಣಮಾಡಿ, ಹೊತ್ತು ಬೀಳುವ ವೇಳೆಗೆ ಸರಿಯಾಗಿ ಬಿಯ್ಯಗರ ಮನೆಗೆ ಹೋಗಿ ಸೇರಿದೆನು. ದಾರಿನಡೆದು ಬಳಲಿದ್ದುದರಿಂದ ಮಲಗಿ ನಿದ್ದೆಹೋದೆನು. ರಾತ್ರಿ ಊಟಕ್ಕೆ ಎಬ್ಬಿಸಲು ಹಸಿವಾಗಿದ್ದರೂ ಉಂಡು ಬಂದೆನು ಎಂದು ಹೇಳಿಬಿಟ್ಟೆನು. ಬೆಳಗಿನ ಜಾವದಲ್ಲಿ ಎಚ್ಚರವಾಗಲು, ಹಸಿವನ್ನು ತಾಳಲಾರದೆ ಏನಾದರೂ ಇದೆಯೋ ಎಂದು ಸುತ್ತಲೂ ಹುಡುಕಿ ನೋಡಿದೆನು. ಒಂದು ಚೀಲದಲ್ಲಿ ಅಕ್ಕಿಯಿದ್ದುದನ್ನು ಕಂಡು ಅದನ್ನು ಬಾಯಿತುಂಬ ತುಂಬಿಕೊಂಡ ಕೂಡಲೆ ನನ್ನ ಹೆಂಡತಿ ಬಂದು ಮಾತನಾಡಿಸಿದಳು. ಬಾಯಿ ಬಿರಿವಂತೆ ಅಕ್ಕಿ ತುಂಬಿದ್ದುದರಿಂದ ನಾನು ಮಾತಾಡಲಿಲ್ಲ. ಆಗ ನನ್ನ ಹೆಂಡತಿ ಹೆದರಿ, ಇದೇನು ಸೋಜಿಗ ಎಂದು ನನ್ನನ್ನು ಚೆನ್ನಾಗಿ ನಿಟ್ಟಿಸಿ ನೋಡಿ ಗಲ್ಲವು ಉಬ್ಬಿರುವುದನ್ನು ಕಂಡು, ಇದೇನೋ ಕೆಟ್ಟ ರೋಗವು ನನ್ನ ಗಂಡನಿಗೆ ಉಂಟಾಗಿದೆ ಎಂದು ಕೂಗಿ ಅತ್ತಳು. ಅದನ್ನು ಕೇಳಿ ಮನೆಯವರೆಲ್ಲರೂ ಎದ್ದು ಓಡಿ ಬಂದು, ನೋಡಿ, ತಟ್ಟನೆ ಹುಟ್ಟಿದ ಈ ಬೇನೆಗೆ ಮದ್ದೇನು ಎಂದು ಆಲೋಚಿಸುತ್ತಿರಲು, ಅಷ್ಟು ಹೊತ್ತಿಗೆ ಬೆಳಗಾಯಿತು. ಆ ವೇಳೆಗೆ ಸರಿಯಾಗಿ ಒಬ್ಬನು ವಾತ, ಪಿತ್ತ, ಕಫ, ಶ್ಲೇಷ್ಮ, ತಲೆಬೇನೆ, ಕಣ್ಣು ಬೇನೆ, ಗುಲ್ಮ, ಕ್ಷಯ, ಕಾಮಾಲೆ, ಪಾಂಡು, ಕುಷ್ಠ ಇವಾದಿಯಾದ ರೋಗವೆಲ್ಲವನ್ನೂ ನಾಸಿಮಾಡುವೆನು ಎನ್ನುತ್ತ, ಕೇರಿಕೇರಿಯಲ್ಲಿ ಸುತ್ತಿ ಬರುತ್ತಿರಲು, ಕಂಡು ಕರೆದು ಆ ವೈದ್ಯನಿಗೆ ತೋರಿಸಲು, ಅವನು ನನ್ನನ್ನು ಚೆನ್ನಾಗಿ ನೋಡಿ, ರೋಗವಲ್ಲವೆಂದು ತನ್ನ ಮನದಲ್ಲಿ ತಿಳಿದುಕೊಂಡು, ಇವನು ಹಸಿದು ಏನನ್ನಾದರೂ ಮುಕ್ಕಿರಬೇಕು ಎಂದು ನನ್ನ ಗಲ್ಲವನ್ನು ಸವರಿ ನೋಡಿ, ಅಕ್ಕಿ ತುಂಬಿರುವುದನ್ನು ಅರಿತು, 'ಈ ರೋಗಕ್ಕೆ ಕೂಡಲೆ ಮದ್ದನ್ನು ಮಾಡದಿದ್ದರೆ ಇವನು ಸಾವನು' ಎಂದನು. ಆಗ ಮನೆಯವರೆಲ್ಲಾ ವೈದ್ಯನ ಕಾಲಮೇಲೆ ಬಿದ್ದು, ನೂರು ಹೊನ್ನನ್ನು ಕೊಟ್ಟು, ಇವನ ಜೀವವನ್ನುಳಿಸಬೇಕು

ಎಂದು ಬೇಡಿಕೊಳ್ಳಲು, ಆತನು ಕೆನ್ನೆಗೆ ಶಸ್ತ್ರವನ್ನು ಹಾಕಿ, ರಕ್ತಮಿಶ್ರವಾದ ಕೆಲವು ಅಕ್ಕಿಯಕಾಳುಗಳನ್ನು ತೆಗೆದು ತೋರಿಸಿ, ಇದು ತಂಡುಲ ವ್ಯಾಧಿ ಎಂದು ಹೆಸರಿಟ್ಟು, ಮನೆಯವರೆಲ್ಲರನ್ನೂ ತೊಲಗಿ ಹೋಗುವಂತೆ ಅಪ್ಪಣೆಮಾಡಿ ಒಂದು ಕಂಬಳಿಯನ್ನು ನನಗೆ ಹೊದೆಯಿಸಲು, ಆ ಅಕ್ಕಿಯನ್ನೆಲ್ಲಾ ತಟ್ಟನೆ ನುಂಗಿಬಿಟ್ಟೆನು. ಮನೆಯವರು ವೈದ್ಯನಿಗೆ ಮನ್ನಣೆಮಾಡಿ ಕಳುಹಿದರು. ಅಂದಿನಿಂದ ನನ್ನನ್ನು ಎಲ್ಲರೂ ಗಲ್ಲಪೋಟ ಎಂದು ಕರೆಯುತ್ತಾರೆ. ಇದೇ ನನ್ನ ಮೂರ್ಖತನ'' ಎಂದು ಒಂದು ಕಡೆಗೆ ತೊಲಗಿ ನಿಂತನು.

ಮುಗುದೊಬ್ಬನು ಬಂದು ನಿಂತು—''ನಾನು ಒಂದೂರಿಗೆ ಹೋಗಬೇಕೆಂದು ಹೊರಟು, ನಡುವೆ ದಾರಿ ತಿಳಿಯದೆ ಅಲೆಯುತ್ತಿದ್ದೆನು. ಆಗ ಅಲ್ಲಿ ಬರುತ್ತಿದ್ದ ಒಬ್ಬ ದಾರಿಗನನ್ನು ಕೇಳಲು ಅವನು ದೂರದಲ್ಲಿದ್ದ ಒಂದು ಮರವನ್ನು ಕೈಯಿಂದ ತೋರಿಸಿ, ಆ ಮರದಮೇಲೆ ದಾರಿ ಹೋಗುತ್ತದೆ ಎಂದನು. ಬಳಿಕ ನಾನು ಆ ಮರದಮೇಲೆ ಹತ್ತಿ ನದಿಯ ಮೇಲೆ ಬಾಗಿದ್ದ ಒಂದು ಕೊಂಬೆಯನ್ನು ತಬ್ಬಿಕೊಂಡಿದ್ದೆನು. ಆಗ ಆನೆಯ ಮೇಲೆ ಕುಳಿತುಕೊಂಡು ಒಬ್ಬ ಮಾವಟಿಗನು ಅಲ್ಲಿಗೆ ಬರಲು, ನನ್ನನ್ನು ಇಳಿಸಿಕೊಳ್ಳಬೇಕು ಎಂದು ಅವನನ್ನು ಬಹಳವಾಗಿ ಬೇಡಿಕೊಂಡೆನು. ಅವನು ನನ್ನನ್ನು ಎರಡು ಕೈಗಳಿಂದಲೂ ಹಿಡಿದುಕೊಳ್ಳಲಿಕ್ಕೆ ಅಂಕುಶವನ್ನು ಬೀಸಾಡಿ ಕೈಗಳನ್ನೆತ್ತಲು, ಆನೆ ಮುಂದಕ್ಕೆ ಹೊರಟುಹೋಯಿತು. ಮಾವಟಿಗನು ನನ್ನನ್ನು ಹಿಡಿದುಕೊಂಡು ಜೋಲಾಡುತ್ತಿದ್ದನು. ಆಗ ನಾನು ಜೋದನನ್ನು ಕುರಿತು 'ನೀನು ಹಾಡು, ನಾನು ತಾಳಹಾಕುತ್ತೇನೆ' ಎಂದು ಹೇಳಿ, ತಾಳ ಹಾಕುವುದಕ್ಕಾಗಿ ಕೈಗಳನ್ನು ಬಿಡಿಸಿಕೊಂಡೆನು. ಒಡನೆ ಇಬ್ಬರೂ ಧಪ್ಪನೆ ನದಿಯಲ್ಲಿ ಬಿದ್ದೆವು. ನನ್ನ ಹಣೆಬರಹವು ಚೆನ್ನಾಗಿದ್ದುದರಿಂದ ಮೆಲ್ಲಗೆ ಈಸಿಕೊಂಡು ಜೀವದೊಡನೆ ದಡಕ್ಕೆ ಬಂದು ಸೇರಿದೆನು. ಇದೇ ನನ್ನ ಮೂರ್ಖತನ'' ಎಂದು ಹೇಳಿ ಪಕ್ಕಕ್ಕೆ ಹೋಗಿ ನಿಂತನು.

ಬಳಿಕ ಐದನೆಯವನು ಬಂದು—''ನಾನು ಒಬ್ಬ ವರ್ತಕನಲ್ಲಿ ಆಳಾಗಿದ್ದೆನು. ಒಮ್ಮೆ ವರ್ತಕನೂ ನಾನೂ ಒಂದೆತ್ತಿನಮೇಲೆ

ಜವಳಿಯ ಹೇರನ್ನು ಹಾಕಿಕೊಂಡು ಒಂದು ಕಾಡಿನಲ್ಲಿ ಹೋಗುತ್ತಿದ್ದಾಗ ಆ ಎತ್ತು ಎಡವಿ ಬಿದ್ದು ಸತ್ತುಹೋಯಿತು. ಆಗ ವರ್ತಕನು ವ್ಯಸನಪಟ್ಟು ನನ್ನನ್ನು ನೋಡಿ, 'ನಾನು ಹೋಗಿ ಇನ್ನೊಂದೆತ್ತನ್ನು ಕೊಂಡುಕೊಂಡು ಬರುತ್ತೇನೆ. ಅದುವರೆಗೆ ಈ ಹೇರಿನ ಗೋಣಿ ನೀರಿನಿಂದ ನೆನೆಯದಹಾಗೆ ಜೋಕೆಯಾಗಿ ನೋಡಿಕೊಂಡಿರು' ಎಂದು ಹೇಳಿ ಹೊರಟುಹೋದನು. ಅವನು ಹೋದ ಸ್ವಲ್ಪಹೊತ್ತಿನ ಮೇಲೆ ದೊಡ್ಡ ಮಳೆ ಬಂದಿತು. ಆಗ ನಾನು ಹೇರಿನ ಗೋಣಿ ನೆನೆಯದಂತೆ ಹೇರಿನೊಳಗಿದ್ದ ಬಹಳ ಬೆಲೆಯುಳ್ಳ ಬಟ್ಟೆಗಳನ್ನೆಲ್ಲಾ ಕಿತ್ತು ಕಿತ್ತು ಹೊರಗೆ ತೆಗೆದು ಗೋಣಿಗೆ ಚೆನ್ನಾಗಿ ಹೊದೆಯಿಸಿದೆನು. ವರ್ತಕನು ಬಂದು ನೋಡಿ ಎದೆಯನ್ನು ಬಡಿದುಕೊಂಡು ಗೋಳಾಡಿ ನನ್ನನ್ನು ಬೈದನು.

ಮತ್ತೊಮ್ಮೆ ವರ್ತಕನು 'ಅಂಗಡಿಯ ಬಾಗಿಲನ್ನು ಭದ್ರವಾಗಿ ಕಾದುಕೊಂಡಿರು. ನಾನು ನೆರೆಯೂರಿಗೆ ಹೋಗಿ ನಾಳೆ ಬರುತ್ತೇನೆ' ಎಂದು ನನಗೆ ಹೇಳಿ ಹೋದನು. ಆ ಇರುಳು ಆಚೆಯ ಬೀದಿಯಲ್ಲಿ ಆಟವಾಡುತ್ತಾರೆ ಎಂದು ತಿಳಿಯಿತು. ಬಾಗಿಲನ್ನು ಇಡಿದು ಕಳಚಿ ಬೆನ್ನಮೇಲೆ ಹೊತ್ತುಕೊಂಡು ಆಟವನ್ನು ನೋಡುವುದಕ್ಕೆ ಹೋದೆನು. ನಾನು ಮರಳಿ ಬಂದಾಗ, ಕೆಲವು ಮಂದಿ ಅಂಗಡಿಯೊಳಗಣಿಂದ ಮೂಟೆಗಳನ್ನು ಹೊತ್ತುಕೊಂಡು ಈಚೆಗೆ ಬರುತ್ತಿದ್ದರು. ಬಾಗಿಲು ಮಾತ್ರ ನನ್ನ ಬೆನ್ನಮೇಲೆಯೇ ಇದ್ದಿತು. ವರ್ತಕನು ಬಂದು ಅಂಗಡಿಯೊಳಗೆ ಹೋಗಿ ನೋಡಿ ಕಳವಳಗೊಂಡು ಅಳುತ್ತ ಈಚೆಗೆ ಬಂದು ನನ್ನನ್ನು ಬೈದನು. ಇದೇ ನನ್ನ ಮೂರ್ಖತನ'' ಎಂದು ಹೇಳಿದನು.

ಇದನ್ನೆಲ್ಲಾ ಕೇಳಿ ಸಭೆಯವರು 'ನಿಮ್ಮ ಕೆಲಸಗಳನ್ನು ನೋಡಿದರೆ ನಿಮ್ಮಲ್ಲಿ ಒಬ್ಬರೂ ಮತ್ತೊಬ್ಬರಿಗೆ ಕಡಮೆಯಾಗಿರುವಂತೆ ತೋರುವುದಿಲ್ಲ. ಮೂರ್ಖತನದಲ್ಲಿ ಎಲ್ಲರೂ ಸಮವಾಗಿಯೇ ಇದ್ದೀರಿ. ಆದುದರಿಂದ ಆ ಹರಕೆಯನ್ನು ಎಲ್ಲರೂ ಸಮವಾಗಿ ಹಂಚಿಕೊಳ್ಳಿ. ನಿಮಗೆ ಮರುಳ, ಮಂಕ, ಮುಟ್ಠಾಳ, ಮಡೆಯ, ಮಡ್ಡಿ ಎಂಬ ಬಿರುದುಗಳನ್ನು ಕೊಟ್ಟಿದ್ದೇವೆ' ಎಂದು ತೀರ್ಪನ್ನು ಹೇಳಿದರು.

ಈ ರೀತಿಯಾಗಿ ಬಿರುದುಗಳನ್ನು ಹೊಂದಿದ ಈ ಐವರೂ ಗಾಂಪ ರೊಡೆಯರಲ್ಲಿ ಬಂದು ಸೇರಿ ಅವರಿಗೆ ಆಪ್ತಶಿಷ್ಯರು ಎನಿಸಿಕೊಂಡಿದ್ದರು.

೨ನೆಯ ಪ್ರಕರಣ.

ಹೊಳೆಯನ್ನು ದಾಟಿದುದು.

ಗಾಂಪರೊಡೆಯರು ಆಡಿಗಡಿಗೆ ಈ ಶಿಷ್ಯರನ್ನು ಸಂಗಡ ಕರೆದು ಕೊಂಡು ಉಳಿದ ಶಿಷ್ಯರನ್ನು ವಿಚಾರಿಸುವುದಕ್ಕೆ ಹೋಗುವ ವಾಡಿಕೆ ಯುಂಟು. ಅದೇಮೇರೆಗೆ ಒಂದು ದಿವಸ ಅವರು ಬೆಳಗ್ಗೆ ಎದ್ದು ಶಿಷ್ಯ ರೊಡನೆ ಸುತ್ತಮುತ್ತ ಇರುವ ಹಳ್ಳಿಗಳಿಗೆ ಕಾಲುನಡೆಯಾಗಿ ಪಯಣ ಮಾಡಿ ಹೋದರು. ತಿರುಗಿ ಬರುವಾಗ ದಾರಿಯ ನಡುವೆ ಇರುವ ಒಂದು ಹೊಳೆಯ ತಡಿಯಲ್ಲಿ ಮೂರನೆಯ ಜಾವಕ್ಕೆ ಸರಿಯಾಗಿ ಬಂದು ಸೇರಿ, ಹೊಳೆಯನ್ನು ನೋಡಿ, ಇಳಿವುದಕ್ಕೆ ಹೆದರಿ, 'ಈ ಹೊಳೆ ಮೋಸದ ಬೆಳೆ; ಬಹಳ ವಂಚನೆಯುಳ್ಳುದು ; ಆದುದರಿಂದ ಇದು ಎಚ್ಚರವಾಗಿರುವಾಗ ಇದನ್ನು ದಾಟಿಹೋಗಕೂಡದು' ಎಂದು ಹೇಳಿ, ಗುರುಗಳು 'ಹೊಳೆ ಮಲಗಿದೆಯೋ ಎಚ್ಚರವಾಗಿದೆಯೋ ಪರಿಕಿಸಿ ನೋಡು' ಎಂದು ಮಡ್ಡಿಗೆ ಬೆಸಸಿದರು. ಅವನು ಗುರುಗಳ ಅಪ್ಪಣೆ ಯನ್ನು ತಲೆಯಮೇಲೆ ತಳೆದು, ಆಗ ಹೊಗೆಯಬತ್ತಿಯನ್ನು ಹೊತ್ತಿ ಸುವುದಕ್ಕೆ ತನ್ನ ಕೈಯಲ್ಲಿ ಇಟ್ಟುಕೊಂಡಿದ್ದ ಕೊಳ್ಳಿಯನ್ನು ತೆಗೆದು ಕೊಂಡು ಹೋಗಿ ತಾನು ಹೊಳೆಯಲ್ಲಿಳಿಯದೆ ಹಿಂದಕ್ಕೆ ನಿಂತು ಕೊಂಡು, ಕೈಯನ್ನು ನೀಡಿ ಕೊಳ್ಳಿಯ ತುದಿಯನ್ನು ತಣ್ಣೀರಿನಲ್ಲಿ ನನೆಯಿಸಿದ ಕೂಡಲೆ ನೀರು ಬುಸ್ಸೆಂದು ಹೊಗೆಯಾದುದನ್ನು ಕಂಡು, ಎದೆನಡುಗಿ ಕಾಲುಜಾರಿ ಕೆಳಗೆ ಬಿದ್ದು ಕಳವಳಿಸಿ ಒದೆದುಕೊಂಡು, ಮೆಲ್ಲಗೆ ಎದ್ದು ನಡುಗಿ ಬೆಚ್ಚಿ ಬಾಯಾರಿ ಬಸವಳಿದು ಹಲುಬಿಕೊಂಡು ಅಳುತ್ತ ಓಡಿಬಂದು, ಅಯ್ಯೊ! ಅಯ್ಯೊ! ಹೊಳೆಯನ್ನು ದಾಟು ವುದಕ್ಕೆ ಇದು ವೇಳೆಯಲ್ಲ. ಅದು ಎಚ್ಚರವಾಗಿದೆ. ನಾನು ಮುಟ್ಟಿದ

ಕೂಡಲೆ ನಂಜುಳ್ಳ ಹಾವಿನಂತೆ ಬುಸ್ಸೆಂದು ಕೂಗಿ ರೇಗಿ ಹೊಗೆಯಾಗಿ ಕುದಿದು ಎದ್ದು ಹಾರಿ ನನ್ನನ್ನು ಕೊಲ್ಲುವುದಕ್ಕೆ ಬಂದಿತು. ಅದರ ಉರವಣೆಗೆ ಗುರಿಯಾಗದೆ ತಮ್ಮ ಪರಮಕೃಪೆಯಿಂದಲೂ ನನ್ನ ತಾಯಿ ಮಾಡಿದ ಪುಣ್ಯದಿಂದಲೂ ತಪ್ಪಿ, ನಾನು ಬದುಕಿ ಮರಳಿ ಬಂದುದು ಬಹಳ ಆಶ್ಚರ್ಯವೇ ಸರಿ' ಎಂದನು. ಅದನ್ನು ಕೇಳಿ ಗುರುಗಳು ಬೆಚ್ಚಿ ಮೂರ್ಛೆಹೋಗಿ ಸ್ವಲ್ಪ ಹೊತ್ತಿನ ಮೇಲೆ ತಿಳಿದು, 'ಅಪ್ಪಾ! ಹಣೆ ಬರೆಹವನ್ನು ಯಾರರಿಯಬಲ್ಲರು! ಆ ಹೊಳೆ ಮಳುಗುವವರೆಗೂ ಸ್ವಲ್ಪ ಹೊತ್ತು ಕಾದಿರುವ' ಎಂದು ಹೇಳಿ, ಅವರೂ ಶಿಷ್ಯರೂ ಹೊಳೆಯ ಬಳಿಯಲ್ಲಿ ಗಿಡಗಳ ನೆಳಲಿಂದ ಕತ್ತಲೆಯಾಗಿದ್ದ ಒಂದು ಹೂದೋಟ ದೊಳಗೆ ಮರೆಯಾಗಿ ತಂಗಿದ್ದರು. ಅಲ್ಲಿ ಹೊತ್ತುಹೋಗುವಂತೆ ಆ ಹೊಳೆಯ ಸಂಬಂಧವಾದ ವಿಶೇಷ ಸಂಗತಿಗಳನ್ನು ಕುರಿತು ಒಬ್ಬೊ ಬ್ಬನೂ ಅವನವನಿಗೆ ತಿಳಿದುದನ್ನು ಹೇಳುತ್ತ ಬರುವಾಗ ಮಡೆಯನೆಂಬ ಶಿಷ್ಯನು—

"ಸ್ವಾಮಿಾ! ಈ ಹೊಳೆಯ ತಂತ್ರ, ಮೋಸ, ಕ್ರೂರಸ್ವಭಾವ ಇವುಗಳನ್ನು ಕುರಿತು ನನ್ನ ಅಜ್ಜಂದಿರು ಹಲವುಬಾರಿ ಮಾತಾಡುತ್ತಿರು ವುದನ್ನು ನಾನು ಚೆನ್ನಾಗಿ ಕೇಳಿದ್ದೇನೆ. ನನ್ನ ಅಜ್ಜಂದಿರು ದೊಡ್ಡ ವರ್ತಕರು. ಅವರು ಒಂದು ದಿನ ಉಪ್ಪಿನ ಚೀಲಗಳನ್ನು ಹೇರಿದ ಕತ್ತೆಗಳನ್ನು ತಾವೂ ತಮ್ಮ ಜತೆಗಾರರೂ ಕೂಡಿ ಹೊಡೆದುಕೊಂಡು ನಡುಹೊಳೆಯಲ್ಲಿ ಇಳಿದು ಬರುವಾಗ, ಬೇಸಗೆಯ ಕಾಲವಾಗಿದ್ದು ದರಿಂದ, ಚೇಗೆಯಡಗುವ ಹಾಗೆ ಸೊಂಟದವರೆಗೂ ಹರಿವ ತಣ್ಣೀ ರಿನಲ್ಲಿ ತಾವೂ ಮುಳುಗಿ ಕತ್ತೆಗಳನ್ನೂ ನಿಲ್ಲಿಸಿ ತೊಳೆದರು. ತರುವಾಯ ಆಚೆಯ ತಡಿಗೆ ಹೋಗಿ ನೋಡಿದಾಗ, ಸೂಜಿಯಿಂದ ಒತ್ತಾಗಿಯೂ ಬಿಗಿಯಾಗಿಯೂ ಸಂದಿಲ್ಲದೆ ಹೊಲಿದಿದ್ದ ಗೋಣಿಯ ಚೀಲದ ಬಾಯಿ ರವೆಯಷ್ಟೂ ತೆರೆಯದೆ ಇದ್ದರೂ ಅದರೊಳಗಿದ್ದ ಉಪ್ಪನ್ನೆಲ್ಲಾ ಹೊಳೆ 'ಸಿಪ್ಪೆಯಿದ್ದಂತೆಯೇ ತಿರುಳನ್ನು ತಿಂದಹಾಗೆ' ಉಪಾಯವಾಗಿ ಕದ್ದು ತಿಂದುಬಿಟ್ಟದ್ದುದನ್ನು ಕಂಡು, 'ಅಯ್ಯೊ ಅಯ್ಯೊ! ಈ ಹೊಳೆ ಉಪ್ಪನ್ನು ಕೊಳ್ಳೆಹೊಡೆದು ತಿಂದ ಮತ್ತಿನಿಂದಲೇ ನಮ್ಮನ್ನು ನುಂಗದೆ ಬಿಟ್ಟು

ಬಿಟ್ಟಿತು. ಉಪ್ಪು ಹೋದರೆ ಹೋಗಲಿ ; ಇಷ್ಟುಮಟ್ಟಿಗೆ ನಮಗೆ ಒಳ್ಳೆಯ ಸಹಾಯವನ್ನು ಮಾಡಿ ಉಸಿರೊಂದಿಗೆ ಬಿಟ್ಟಿತಲ್ಲವೆ ! ಇದೇ ದೊಡ್ಡ ಉಪಕಾರ' ಎಂದೆಣಿಸಿ ಅವರು ಸಂತಸಗೊಂಡರು'' ಎಂದು ಹೇಳಿದನು.

ಹೀಗೆಯೇ ಮಾತನಾಡಿಕೊಂಡಿದ್ದಾಗ, ಅವರು ಅಲ್ಲಿ ಒಬ್ಬನು ಕುದುರೆಯೇರಿಕೊಂಡು ಬರುವುದನ್ನು ಕಂಡರು. ಹೊಳೆಯಲ್ಲಿ ಮಂಡಿಯುದ್ದ ನೀರು ಹರಿದುಬರುತ್ತಿದ್ದರೂ ಸ್ವಲ್ಪವೂ ಅಂಜಿಕೆಯಿಲ್ಲದೆ ಅವನು ಕುದುರೆಯಮೇಲೆ ಇದ್ದಂತೆಯೇ ಹಿಂದೆಗೆಯದೆ ಸರಸರ ಎಂದು ಬೇಗನೆ ಬಂದನು. ಅದನ್ನು ನೋಡಿ, ಇವರು 'ಆಹಾ ! ನಮ್ಮ ಗುರುಗಳಿಗೂ ಕುದುರೆಯಿದ್ದಿದ್ದರೆ ಅವರೂ ಅವರನ್ನು ಸೇರಿದ ನಾವೂ ಅಂಜಿಕೆಯಿಲ್ಲದೆ ಹೊಳೆಯಲ್ಲಿ ಇಳಿಯಬಹುದಾಗಿದ್ದಿತಲ್ಲಾ ! ಕುದುರೆ ಇಲ್ಲದುದರಿಂದಲ್ಲವೇ ಹೀಗೆ ಕಳವಳಿಸಿಕೊಂಡಿರಬೇಕಾಗಿ ಬಂದಿತು. ಇನ್ನು ಹೇಗಾದರೂ ಒಂದು ಕುದುರೆಯನ್ನು ಕೊಂಡುಕೊಳ್ಳಬೇಕು' ಎಂದು ತಮ್ಮೊಳಗೆ ನಿಶ್ಚಯಿಸಿಕೊಂಡು ಗುರುಗಳಲ್ಲಿ ಬಿನ್ನವಿಸಿದರು. ಅವರು 'ಈ ವಿಷಯವನ್ನು ಕುರಿತು ಮುಂದೆ ಮಾತನಾಡುವ' ಎಂದು ಹೇಳಿ, 'ಈಗ ಹೊತ್ತು ಮುಳುಗುವ ವೇಳೆಯಾಯಿತು. ಮಠಕ್ಕೆ ಹೋಗಬೇಕು. ಆದುದರಿಂದ ಹೊಳೆ ಮಲಗಿದೆಯೇ ನೋಡಿ' ಎಂದು ಶಿಷ್ಯರಿಗೆ ಬೆಸಸಿದರು.

ಅದೇ ಮೇರೆಗೆ ಮಡ್ಡಿ ಕೊಳ್ಳಿಯನ್ನು ತೆಗೆದುಕೊಂಡು ಹೋಗಿ ನೀರಿನಲ್ಲಿ ನನೆಯಿಸಿ ಪರಿಕಿಸಲು, ಆ ಕೊಳ್ಳಿಯಲ್ಲಿದ್ದ ಬೆಂಕಿ ಆಗಲೇ ಆರಿಹೋಗಿದ್ದುದರಿಂದ ಹೊಳೆಯಲ್ಲಿ ಸ್ವಲ್ಪವೂ ಹೊಗೆಯೇಳದೆ ಇದ್ದುದನ್ನು ಕಂಡು ಅವನು ಬಹಳ ಸಂತಸಗೊಂಡು ಓಡಿಬಂದು 'ಇದೇ ಒಳ್ಳೆಯ ವೇಳೆ ! ಇದೇ ಒಳ್ಳೆಯವೇಳೆ ! ಇಂತಹ ವೇಳೆ ಇನ್ನು ಸಿಕ್ಕಲಾರದು. ಬಾಯನ್ನು ತೆರೆಯದೆ, ಸದ್ದುಮಾಡದೆ ತಟ್ಟನೆ ಎದ್ದು ಬನ್ನಿ ! ಬನ್ನಿ ! ಹೊಳೆಗೆ ಒಳ್ಳೆಯ ನಿದ್ರೆಯ ವೇಳೆಯಾಗಿದೆ. ಈಗ ಎಳ್ಳಷ್ಟೂ ಅಂಜಬೇಕಾದುದಿಲ್ಲ. ತಡವು ಮಾಡಬೇಡಿ, ಏಳಿ !' ಎಂದನು. ಮಡ್ಡಿ ಹೇಳಿದ ಇಂಪಾದ ಮಾತನ್ನು ಕೇಳಿ ಎಲ್ಲರೂ ತಟ್ಟನೆ ಎದ್ದು, ಕಿಮುಕಮು ಎನ್ನ

ಡಂತೆ ಜೋಕೆಯಾಗಿ ಒಬ್ಬರನ್ನೊಬ್ಬರು ಬಿಗಿದು ತಬ್ಬಿಕೊಂಡು ಹೊಳೆ ಯಲ್ಲಿಳಿದು, ರವೆಯಷ್ಟೂ ಸದ್ದಾಗದಂತೆ ಮೆಲ್ಲಗೆ ಕಾಲೆತ್ತಿ ಒಂದೊಂದ ಡಿಯಾಗಿ ನೀರಿನಲ್ಲಿಟ್ಟು ಅಮುಕಿ ತರುವಾಯ ಮೆಲ್ಲಗೆ ಮೇಲಕ್ಕೆತ್ತಿ, ಎದೆಯನ್ನು ಅಡಿಗಡಿಗೆ ಮುಟ್ಟಿನೋಡಿಕೊಂಡು ತಲ್ಲಣಿಸುತ್ತ ಹೊಳೆ ಯನ್ನು ದಾಟಿ ತಡಿಗೆ ಏರಿದರು.

ತಡಿಯೇರಿದ ಕೂಡಲೆ ಅವರು ಹಿಂದೆ ಪಟ್ಟ ಕಷ್ಟವನ್ನೆಲ್ಲಾ ಮರೆತು ಸಂತಸದಿಂದ ಉಕ್ಕಿ ಸೊಕ್ಕಿ ತಲೆ ಕಾಲು ತಿಳಿಯದೆ ನೆಗೆದು ಕುಣಿದಾಡಿಕೊಂಡಿರಲು, ಮುಟ್ಠಾಳನು ಸ್ವಲ್ಪಹೊತ್ತು ಆಲೋಚಿಸಿ 'ನಾವೆಲ್ಲರೂ ಸುಖವಾಗಿ ಬಂದು ಸೇರಿದೆವೋ ? ಎಣಿಸಿ ನೋಡುವ' ಎಂದು ತನ್ನನ್ನು ಸೇರಿಸಿಕೊಳ್ಳದೆ ಉಳಿದವರನ್ನು ಮಾತ್ರ ಲೆಕ್ಕಮಾಡಿ ದನು. ಆಗ ಐವರಿರುವುದನ್ನು ಕಂಡು, 'ಅಪ್ಪಪ್ಪಾ ! ಅಯ್ಯಯ್ಯೋ ! ಇದೇನು ಕೇಡು ? ಇದೇನು ಗ್ರಹಚಾರ ? ಒಬ್ಬನು ಹೊಳೆಯಲ್ಲಿಯೇ ಹೋಗಿಬಿಟ್ಟನು ; ಐವರು ಮಾತ್ರ ಇದ್ದೇವೆ' ಎಂದು ಗುರುಗಳನ್ನು ನೋಡಿ ನಿಟ್ಟುಸಿರು ಬಿಟ್ಟು, ಎದೆಯನ್ನು ಬಡಿದುಕೊಳ್ಳುತ್ತ ಗೊಳೋ ಎಂದು ಅತ್ತನು. ಗುರುಗಳು ಅವನನ್ನು ಅಳಬೇಡ ಎಂದು ಸಂತೈಸಿ, ಎಲ್ಲರನ್ನೂ ವರಿಸೆಯಾಗಿ ನಿಲ್ಲಿಸಿ, ಒಂದುಸಾರಿ ಎರಡುಸಾರಿ ಮೂರುಸಾರಿ ಅವರವರನ್ನು ಬೇರೆಬೇರೆ ತಮ್ಮ ಬೆರಳನ್ನು ನೀಡಿನೀಡಿ ತೋರಿಸಿ ತೋರಿಸಿ ತಾವೇ ಎಣಿಸಿ ಲೆಕ್ಕಮಾಡಿ ನೋಡಿದರು. ಹಾಗೆ ಎಣಿಸುವಾಗಲೆಲ್ಲಾ ಅವರು ತಮ್ಮನ್ನು ಬಿಟ್ಟು ಲೆಕ್ಕಮಾಡಿ 'ಅಹುದಪ್ಪಾ ನೀನು ಹೇಳಿದಂತೆ ಐದುಮಂದಿ ಮಾತ್ರ ಇದ್ದೇವೆ' ಎಂದು ಹೇಳಿ ತಾವೂ ಕಳವಳಿಸುತ್ತ ನಿಂತುಕೊಂಡರು. ಹಾಗೆಯೇ ಒಬ್ಬೊಬ್ಬನೂ ತನ್ನನ್ನು ಬಿಟ್ಟು ಉಳಿದವ ರನ್ನು ಮಾತ್ರ ಎಣಿಸಿ ಎಣಿಸಿ ಆರನೆಯವನನ್ನು ಕಾಣದೆ ಹೋದುದರಿಂದ ಅರುವರಲ್ಲಿ ಒಬ್ಬನನ್ನು ಸಂದೆಗವಿಲ್ಲದೆ ಹೊಳೆ ನುಂಗಿಬಿಟ್ಟಿತೆಂದು ಅವರು ತಮ್ಮೊಳಗೆ ನಿಶ್ಚಯಿಸಿಕೊಂಡರು. ಅದರಮೇಲೆ ಶಿಷ್ಯರು ಗಟ್ಟಿಯಾಗಿ ಅಳುತ್ತ ಕುಯ್ಯೋ ! ಮೊರೆಯೋ ! ಎಂದು ಕೂಗಿಕೊಂಡು, ನದಿಯನ್ನು ನೋಡಿ ಕಣ್ಣೀರನ್ನು ಪಳಪಳ ಎಂದು ಸುರಿಸುತ್ತ, 'ಅಯ್ಯೋ ! ಪಾಪಿಯಾದ ಹೊಳೆಯೇ ! ಪರಮ ಚಂಡಾಲ ನದಿಯೇ !

ದ್ರೋಹಿಯೇ! ಹೆಬ್ಬುಲಿಯೇ! ಹೆಮ್ಮಾರಿಯೇ! ಡಾಕಿನಿಯೇ! ಜಗ ವೆಲ್ಲಾ ಅಡಿಗೆರಗಿ ಹೊಗಳುವಂತೆ ತಪವೆಲ್ಲಾ ಸೇರಿ ಒಂದು ರೂಪಾಂತ ಹಾಗೆ ಎಸೆವ ಮಹಾತ್ಮರಾದ ನಮ್ಮ ಗುರುಗಳ ಮುಖ್ಯ ಶಿಷ್ಯನನ್ನು ರೆಪ್ಪೆಮುಚ್ಚಿ ತೆರೆವಷ್ಟರೊಳಗೆ ಅನ್ಯಾಯವಾಗಿ ಕೊಳ್ಳೆ ಹೊಡೆದೆಯಲ್ಲಾ! ಎಳ್ಳಷ್ಟಾದರೂ ದಯೆಯಿಲ್ಲದೆ ಗೆಳಸಿನಂತೆ ನುಂಗಿಬಿಟ್ಟೆಯಲ್ಲಾ! ಅಂಜಿಕೆ ಯೆಂಬುದು ತುಸವೂ ಇಲ್ಲದೆ ಬಾಳೆಯ ಹಣ್ಣಿನಂತೆ ತಿಂದು ತೇಗಿದೆ ಯಲ್ಲಾ! ನಿನ್ನ ಮನವು ಕರಗದ ಕಬ್ಬಿಣವೋ? ಕಲ್ಲೋ? ನೀನು ಹೆಣ್ಣೊಡನಾದರೂ ಗಂಡೊಡನಾದರೂ ಹುಟ್ಟಲಿಲ್ಲವೋ? ನೀತಿಯಿಲ್ಲದ ನೀಚನದಿಯೇ! ನೀನು ಲೋಕದಲ್ಲಿ ನೆಲೆಯಾಗಿರುವೆಯಾ? ಆಗಸದ ವರೆಗೂ ತೆರೆಗಳನ್ನು ಹಾರಿಸುವೆಯಾ? ಕಡಲಂತೆ ಮೊಳಗಿ ಕರೆಗಣ್ಮು ವೆಯಾ? ಇನ್ನು ನೀನು ನೀರು ಬತ್ತಿ, ಚಿಲುಮೆಗಳಡಗಿ, ಹಳ್ಳಗಳು ಹೂತುಹೋಗಿ ಪ್ರವಾಹವಿಲ್ಲದೆ, ಮನನೊಂದು ರೂಪುತೋರದೆ ನಿರ್ನಾಮವಾಗಿ ಹಾಳಾಗಿಹೋಗುವೆ' ಎಂದು ಹೊಳೆಯನ್ನು ಶಪಿಸಿ ಮತ್ತೆ ಹುಚ್ಚುಹಿಡಿದಂತೆ ಮನಬಂದಹಾಗೆ ಬೈದುಕೊಂಡಿದ್ದರು. ಅದು ವರೆಗೂ ತಮ್ಮೊಳಗೆ ಇಂಥವನು ಹೊಳೆಗೆ ಬಲಿಯಾದನು ಎಂಬುದನ್ನು ಒಬ್ಬನಾದರೂ ತಿಳಿಯಲಿಲ್ಲ; ಅವನು ಯಾರು ಎಂದು ವಿಚಾರಿಸಲೂ ಇಲ್ಲ.

ಆ ವೇಳೆಗೆ ಸರಿಯಾಗಿ ತಿಳಿವಳಿಕೆಯುಳ್ಳ ದಾರಿಗನೊಬ್ಬನು ಆ ಯೆಡೆಗೆ ಬಂದು ಇವರು ತಲ್ಲಣಿಸುವುದನ್ನು ನೋಡಿ 'ಏಕಯ್ಯಾ ತಲ್ಲಣಿ ಸುತ್ತೀರಿ? ನಿಮಗೇನು ಕೇಡುಂಟಾಯಿತು? ಹೇಳಿ' ಎಂದು ಕೇಳಲು, ಅವರು ನಡೆದ ಸಂಗತಿಯನ್ನು ಬಿತ್ತರಿಸಿದ ಮೇಲೆ ಅವನು ಇವರ ಬೆಳ್ತನ ವನ್ನು ತಿಳಿದುಕೊಂಡು: 'ಅಪ್ಪಪ್ಪಾ! ಅಮ್ಮಮ್ಮಾ! ಇದು ಬಹಳ ಕಷ್ಟವಾದ ಕೆಲಸ, ನನ್ನಿಂದಲ್ಲದೆ ಬೇರೊಬ್ಬರಿಂದ ಆಗಲಾರದು. ನಾನು ಮಂತ್ರ ವಿದ್ಯೆಯಲ್ಲಿ ಬಹಳ ಚದುರನು. ಅಥರ್ವಣವೇದವು ನಾನು ನೋಡಿ ಭಿಕ್ಷೆಹಾಕಿದವರಿಗುಂಟು. ನನಗೆ ಯಕ್ಷಿಣಿ ಮೋಹಿನಿ ಮೊದ ಲಾದುವೆಲ್ಲಾ ವಶವಾಗಿವೆ; ಅವು ನಾನು ಹೇಳಿದಂತೆ ಕುಣಿಯುತ್ತವೆ. ನನಗೆ ನೀವು ಒಳ್ಳೆಯ ಬಹುಮಾನವನ್ನು ಕೊಟ್ಟು ಮನ್ನಣೆಮಾಡುವು

ದಾದರೆ, ಹೊಳೆಯಲ್ಲಿ ಹೋದವನನ್ನು ನಿಮಿಷಮಾತ್ರದಲ್ಲಿ ಇಲ್ಲಿಗೆ ಕರೆಯಿಸುತ್ತೇನೆ; ಆಗ ನನ್ನ ಬಲ್ಲತನವನ್ನು ನೋಡುವಿರಿ' ಎಂದನು. ಅವನ ಮಾತಿಗೆ ಗುರುಗಳು ಮೆಚ್ಚಿ ತಲೆಯನ್ನು ತೂಗಿ ಬಹಳ ಸಂತಸಗೊಂಡು 'ಅಯ್ಯಾ! ನಾವು ದಿಕ್ಕಿಲ್ಲದೆ ಕಳವಳಿಸುವಾಗ, ನಾರಾಯ ನೀನು ನಮ್ಮ ಕುಲದೈವದಂತೆ ಎಲ್ಲಿಂದ ಬಂದೆಯೋ ತಿಳಿಯದು. ನೀನು ಈಗ ಮಾಡುವುದಾಗಿ ಒಪ್ಪಿಕೊಂಡ ದೊಡ್ಡ ಉಪಕಾರಕ್ಕೆ ಪ್ರತಿಯಾಗಿ ಬಡವರಾದ ನಾವು ನಿನಗೇನು ಮಾಡಬಲ್ಲೆವು? ನಿನಗೆ ಬಹಳ ಪುಣ್ಯ ಬರುತ್ತದೆ. ಹೇಗಾದರೂ ದೊಡ್ಡ ಮನಸ್ಸು ಮಾಡಿ ಕಾಣದೆ ಮಾಯವಾಗಿ ಹೋಗಿರುವವನನ್ನು ಕರೆಯಿಸಿ ಕೊಟ್ಟರೆ ಮುಯ್ಯಿಲ್ಲದ ಉಪಕಾರವಾಗುತ್ತದೆ. ನಮ್ಮ ದಾರಿಯ ವೆಚ್ಚಕ್ಕಾಗಿ ನಾಲ್ವತ್ತೈದು ಹಣವನ್ನು ಇದೋ! ಈ ಹರಕು ಬಟ್ಟೆಯ ಸೆರಗಿನಲ್ಲಿ ಗಂಟುಹಾಕಿ ಇಟ್ಟುಕೊಂಡಿದ್ದೇವೆ. ಅದನ್ನು ಬೇಕಾದರೆ ನಿನ್ನ ಕೈಯಲ್ಲಿ ಕೊಟ್ಟುಬಿಡುತ್ತೇವೆ. ಕರುಣಿಸಬೇಕು' ಎಂದರು.

ಅದಕ್ಕೆ ಮಂತ್ರವಾದಿ 'ಹಾಗೆಯೇ ಆಗಲಿ' ಎಂದು ಒಪ್ಪಿಕೊಂಡು, ಕಬ್ಬಿಣದ ಕಟ್ಟುಗಳನ್ನು ಹಾಕಿ ಒನಕೆಯ ಹಾಗೆ ದಪ್ಪವಾಗಿಯೂ ಉದ್ದವಾಗಿಯೂ ಇರುವ ತನ್ನ ಕೈಯ ದೊಣ್ಣೆಯನ್ನು ಅವರಿಗೆ ತೋರಿಸಿ 'ನಾನು ಹೇಳಿದ ಮಂತ್ರವಿದ್ಯೆ ಇದರಲ್ಲಿಯೇ ಇದೆ. ನೀವು ವರಿಸೆಯಾಗಿ ನಿಂತು, ಮೊಗದಲ್ಲಿ ಸಿಟ್ಟುದೋರದೆ ಸಂತೋಷವಾಗಿ, ದೇವರಿಗೆ ಹರಕೆಯನ್ನು ಸಲ್ಲಿಸುವಂತೆ ಕೈಮುಗಿದುಕೊಂಡು ಬಾಗಿ, ಈ ದೊಣ್ಣೆಯಿಂದ ಬೆನ್ನಿನ ಮೇಲೆ ಆಳಿಗೆ ಒಂದೇಟನ್ನು ತಿಂದು, ಕೂಡಲೆ ಅವನವನು ತನ್ನ ತನ್ನ ಹೆಸರನ್ನು ಹೇಳಿ ಎಣಿಸಿಕೊಂಡು ಬಂದರೆ, ಆರುಮಂದಿಯೂ ಈಯೆಡೆಯಲ್ಲಿ ಈಗಲೇ ಕಣ್ಣಿದಿರಾಗಿ ಬಂದು ನಿಲ್ಲುವಹಾಗೆ ಮಾಡುವೆನು' ಎಂದನು. ಅವರು 'ಒಳ್ಳೆಯದು' ಎಂದು ಒಪ್ಪಿದರು.

ಬಳಿಕ ಮಂತ್ರವಾದಿ ಅವರನ್ನು ವರಿಸೆಯಾಗಿ ನಿಲ್ಲಿಸಿ, ಆ ದೊಣ್ಣೆಯನ್ನು ಮೇಲಕ್ಕೆತ್ತಿ, ಮೊದಲು ಗುರುಗಳ ನಡುಬೆನ್ನನ್ನು ನೋಡಿ ಬಲವಾಗಿ ಒಂದೇಟನ್ನು ಹಾಕಿದನು. ಅವರು 'ಅಯ್ಯಯ್ಯೋ! ಸಾಕು!

ಸಾಕು! ನಾನೇ ಗಾಂಪರೊಡೆಯ!! ಎಂದರು. ಹೀಗೆಯೇ ಎಲ್ಲರಿಗೂ ಒಂದೊಂದೇಟನ್ನು ಹಾಕಲು, ಅವರಲ್ಲಿ ಒಬ್ಬನು 'ನಾನು ಮರುಳ' ಎಂದೂ, ಇನ್ನೊಬ್ಬನು 'ನಾನು ಮಂಕ' ಎಂದೂ, ಮತ್ತೊಬ್ಬನು 'ನಾನು ಮುಟ್ಠಾಳ' ಎಂದೂ, ಮಗುದೊಬ್ಬನು 'ನಾನು ಮಡೆಯ' ಎಂದೂ, ಉಳಿದವನು 'ನಾನು ಮಡ್ಡಿ' ಎಂದೂ ಬೇರೆ ಬೇರೆ ತಮ್ಮ ತಮ್ಮ ಹೆಸರುಗಳನ್ನು ಹೇಳಿದಾಗ, ಇವನು ಲೆಕ್ಕ ಮಾಡಲು, ಆಗ ಆರುಮಂದಿಯಲ್ಲಿ ಒಬ್ಬನೂ ಕಡಮೆಯಾಗದೆ ಇದ್ದುದನ್ನು ಕಂಡು, ಅಚ್ಚರಿಗೊಂಡು, ಆ ಆರುವರೂ ಮಂತ್ರವಾದಿಯಾದ ದಾರಿಗನ ಬಲ್ಲತನವನ್ನು ಮೆಚ್ಚಿ ಕೊಂಡಾಡಿ, ತಾವು ಹಿಂದೆ ಹೇಳಿದ್ದಂತೆ ಅವನಿಗೆ ಹಣವನ್ನು ಗಂಟಿನಿಂದ ಬಿಚ್ಚಿ ಕೊಟ್ಟುಬಿಟ್ಟು, ಅವನನ್ನು ಹೊಗಳುತ್ತ ಮುಂದಕ್ಕೆ ಪಯಣ ಮಾಡಿದರು.

೩ನೆಯ ಪ್ರಕರಣ.

ಕುದುರೆಮೊಟ್ಟೆಯನ್ನು ಕೊಂಡುಕೊಂಡುದು.

ಗುರುಗಳೂ ಶಿಷ್ಯರೂ ಮಠಕ್ಕೆ ಸೇರಿದಮೇಲೆ ಹೊಳೆಯಲ್ಲಿ ತಾವು ಪಟ್ಟ ಕಷ್ಟವನ್ನು ಹಲವುಬಾರಿ ಹೇಳಿಕೊಂಡು ಹೇಳಿಕೊಂಡು ಮರುಗುತ್ತಿದ್ದರು. ಆಗ ಮಠವನ್ನು ಗುಡಿಸುತ್ತಿದ್ದ ಒಕ್ಕಣ್ಣಿಯಾದ ಒಬ್ಬ ಮುದುಕಿ ನಡೆದ ಸಂಗತಿಯನ್ನೆಲ್ಲಾ ಚೆನ್ನಾಗಿ ಕೇಳಿ, ಚಪ್ಪಾಳೆಹೊಡೆದು ನಕ್ಕು 'ನೀವು ಹೊಳೆಯನ್ನು ದಾಟಿ ಬಂದಕೂಡಲೆ ನಿಮ್ಮನ್ನು ಲೆಕ್ಕ ಮಾಡಿಕೊಂಡ ತೆರದಲ್ಲಿ ಮೋಸಹೋದಿರಿ. ತನ್ನನ್ನಾಗಲಿ ಬೇರೊಬ್ಬನನ್ನಾಗಲಿ ಬಿಟ್ಟು ಎಣಿಸಿದರೆ ಲೆಕ್ಕ ತಪ್ಪುವುದು ಸಾಜವೇ ಸರಿ. ಆದರೂ ಹೋದುದು ಹೋಗಲಿ. ಇನ್ನುಮುಂದೆ ಯಾವವೇಳೆಯಲ್ಲಿಯಾದರೂ ಇಂಥ ಮೋಸವು ಬಾರದಂತೆ ನಿಮಗೆ ಒಂದು ಸುಲಭವಾದ ಉಪಾಯವನ್ನು ಹೇಳಿ ಕೊಡುತ್ತೇನೆ. ಇದನ್ನು ಎಲ್ಲಿಯಾದರೂ ಮರೆತು ಬಿಟ್ಟೀರಿ ಕಂಡಿರಾ! ಕಾಡಿನಲ್ಲಿ ಹೆಪ್ಪುಹೆಪ್ಪಾಗಿ ಬಿದ್ದಿರುವ ಪೋಲಿಯಾಕಳ ಸೆಗಣಿಯನ್ನು ಹುಡುಕಿ ಎತ್ತಿಕೊಂಡು ಬಂದು,

ಚೆನ್ನಾಗಿ ಹಿಸುಕಿ ಒಟ್ಟಾಗಿ ಸೇರಿಸಿ, ಗುಂಡಾಗಿಯೂ ಮಂದವಾಗಿಯೂ ನೆಲದಲ್ಲಿ ಒಂದುಕಡೆ ತಟ್ಟಿ, ಎಲ್ಲರೂ ಅದರ ಸುತ್ತ ವರಿಸೆಯಾಗಿ ನಿಂತುಕೊಂಡು, ಮೂಗಿನ ತುದಿ ಸೆಗಣಿಯಲ್ಲಿ ತಗಲುವಂತೆ ಬಗ್ಗಿ ಮೂಗನ್ನು ಸೆಗಣಿಯೊಳಕ್ಕೆ ಅಮುಕಿ, ತರುವಾಯ ಎದ್ದು ಸೆಗಣಿಯಲ್ಲಿ ಗುರುತಾಗಿರುವ ಗುಳಿಗಳನ್ನು ಎಣಿಸಿದರೆ ಲೆಕ್ಕ ತಪ್ಪದಂತೆ ಇಷ್ಟುಮಂದಿ ಎಂದು ಏನೇನೂ ಕಷ್ಟವಿಲ್ಲದೆ ಅರಿಯಬಹುದಲ್ಲವೆ? ಅರುವತ್ತೆಪ್ಪತ್ತು ವರುಷಗಳ ಹಿಂದೆ ನಾವು ಹತ್ತುಮಂದಿ ಹೆಂಗಸರು ಸೇರಿದ್ದಾಗ ಹೀಗೆಯೇ ಲೆಕ್ಕಮಾಡಿಕೊಂಡೆವು. ಇದು ತಿಳಿಯದೆ ಏಕೆ ಬರಿದೆ ಕಳವಳಪಟ್ಟಿರಿ?' ಎಂದಳು.

ಗುರುಗಳು 'ಇದು ಒಳ್ಳೆಯ ಉಪಾಯವೇ ಸರಿ. ಹಣವೂ ವೆಚ್ಚವಾಗುವುದಿಲ್ಲ. ಆಹಾ! ಒಬ್ಬನಿಗೂ ತೋರದೆ ಹೋಯಿತಲ್ಲಾ' ಎಂದು ಹೇಳಲು, ಶಿಷ್ಯರು 'ಅಹುದು ಅಹುದು' ಎಂದು ಒಪ್ಪಿಕೊಂಡು ಗುರುಗಳನ್ನು ನೋಡಿ 'ಎಲ್ಲಾ ಕೆಲಸಕ್ಕೂ ಒಂದು ಕುದುರೆಯನ್ನು ಕೊಂಡುಕೊಂಡರೆ ಮೇಲು. ಸ್ವಾಮಿ! ಹೇಗಾದರೂ ತಮಗೆ ಕುದುರೆಯನ್ನು ಸಂಪಾದಿಸಿ ತಂದು ಕೊಡಬೇಕೆಂದು ನಮಗೆ ತವಕವುಂಟಾಗಿದೆ' ಎಂದು ಎಲ್ಲರೂ ಒಟ್ಟಾಗಿ ಹೇಳಲು, ಗುರುಗಳು 'ಕುದುರೆಯ ಬೆಲೆ ಎಷ್ಟಿರಬಹುದು?' ಎನ್ನಲು, 'ನೂರು ಹೊನ್ನಿರಬಹುದು; ಐವತ್ತು ಹೊನ್ನಿಗೆ ಬೇರೆ ಕಡಮೆಯಿಲ್ಲ' ಎಂದು ಅವರು ಹೇಳಿದುದನ್ನು ಕೇಳಿದಾಗ, ಗುರುಗಳು ನಿಟ್ಟುಸಿರು ಬಿಟ್ಟು 'ಅಪ್ಪಪ್ಪಾ! ಅಷ್ಟಕ್ಕೆ ಅವಕಾಶವಿಲ್ಲ' ಎಂದರು. ಆದರೂ ಶಿಷ್ಯರು 'ಕುದುರೆಯನ್ನು ಕೊಂಡುಕೊಳ್ಳುವ ಬಗೆ ಹೇಗೆ?' ಎಂದು ಹಗಲೂ ಇರುಳೂ ಹಂಬಲಿಸುತ್ತಿದ್ದರು.

ಹೀಗಿರಲು, ಒಂದುದಿನ ಮೇವುದಕ್ಕೆ ಬಿಟ್ಟಿದ್ದ ತಮ್ಮ ಹಸು ಎಂದಿನಂತೆ ಸಂಜೆಯಲ್ಲಿ ಮಠಕ್ಕೆ ಬಾರದೆ ಇದ್ದುದನ್ನು ನೋಡಿ ಶಿಷ್ಯರು ಊರಲ್ಲಿ ಎಲ್ಲೆಲ್ಲಿಯೂ ಹೋಗಿ ಹುಡುಕಿದರು. ಹುಡುಕಿದ ಎಡೆಯಲ್ಲಿ ಎಲ್ಲಿಯೂ ಸಿಕ್ಕದೆ ಹೋದುದರಿಂದ, ಮರುದಿವಸ ಮುಟ್ಟಾಳನು

ಸುತ್ತಮುತ್ತ ಇರುವ ಹಳ್ಳಿಗಳಲ್ಲಿ ಹಸುವನ್ನು ಹುಡುಕಲಿಕ್ಕೆ ಹೋದನು. ಮೂರು ದಿವಸದವರೆಗೂ ಹುಡುಕಿ ಹುಡುಕಿ ಎಲ್ಲಿಯೂ ಕಾಣದೆ ಮಠಕ್ಕೆ ಬಂದು ಗುರುಗಳನ್ನು ನೋಡಿ 'ಸ್ವಾಮಿ! ಎಷ್ಟು ಹುಡುಕಿದರೂ ಆಕಳು ಸಿಕ್ಕಲಿಲ್ಲ. ಆದರೂ ಇದೊಂದು ದೊಡ್ಡ ನಷ್ಟ ವೆಂದು ನಾನೆಣಿಸುವುದಿಲ್ಲ. ಏಕೆಂದರೆ, ಸ್ವಲ್ಪ ಬೆಲೆಯಲ್ಲಿಯೇ ನಮಗೆ ಕುದುರೆ ಸಿಕ್ಕಿತು' ಎಂದು ಬಹಳ ಆನಂದದಿಂದ ಹೇಳಿದನು. 'ಅದು ಹೇಗೆ?' ಎಂದು ಗುರುಗಳು ಆಸೆಯಿಂದ ಕೇಳಲು, ಮುಟ್ಠಾಳನು 'ತಪ್ಪಿಸಿ ಕೊಂಡು ಹೋದ ಆಕಳನ್ನು ಹುಡುಕಲಿಕ್ಕೆ ಊರಿಂದೂರಿಗೆ, ಕಾಡಿಂದ ಕಾಡಿಗೆ, ಹೊಲದಿಂದ ಹೊಲಕ್ಕೆ, ಗದ್ದೆಯಿಂದ ಗದ್ದೆಗೆ, ತೋಟದಿಂದ ತೋಟಕ್ಕೆ, ತಿರುಗಿ ತಿರುಗಿ ತೊಳಲಿ ಬಳಲಿ ಬರುತ್ತಿರುವಾಗ, ತಮ್ಮ ಕಟಾಕ್ಷದ ಮೈಮೆಯಿಂದ ಒಂದು ದೊಡ್ಡ ಕೆರೆಯ ಅರುಗಿನಲ್ಲಿ ನಾಲ್ಕೈದು ಕುದುರೆಗಳು ಮೇಯುತ್ತಲೂ ಕೆಡೆಯುತ್ತಲೂ ಇದ್ದು ದನ್ನು ಕಂಡೆನು. ದಂಡೆಗೆ ಹೋಗುತ್ತ ಹೋಗುತ್ತ, ನಾನು ಹಿಂದೆ ಎಂದೂ ಕಾಣದ ಎರಡು ಕೈಗಳಿಂದಲೂ ತಬ್ಬುವುದಕ್ಕಾಗದೆ ಇದ್ದ ಕುದುರೆ ಮೊಟ್ಟೆಗಳನ್ನು ಕಂಡು, ಇವು ಕುದುರೆ ಮೊಟ್ಟೆಗಳೋ ಅಲ್ಲವೋ ಎಂಬ ಸಂದೇಗವುಂಟಾಗಿ ಅಲ್ಲಿಗೆ ಬಂದ ಒಬ್ಬ ಒಕ್ಕಲಿಗ ನನ್ನು ಕೇಳಲು, ಅವನು ಕುದುರೆಮೊಟ್ಟೆಗಳೇ ಎಂದೂ ಬೆಲೆ ಹೆಚ್ಚಾ ಗಿಲ್ಲ, ಒಂದೊಂದಕ್ಕೆ ನಾಲ್ಕೈದು ಹೊನ್ನು ಮಾತ್ರವೇ ಎಂದೂ ಹೇಳಿದನು. ಸ್ವಾಮಿ! ನನ್ನೊಡೆಯಾ! ಇದು ಒಳ್ಳೆಯ ವೇಳೆ. ಸುಲಭದಲ್ಲಿಯೇ ಜಾತಿಯ ಕುದುರೆಗಳು ದೊರೆಯುತ್ತವೆ. ನಾವು ಹೇಗೆ ಸಾಕುತ್ತೇವೋ ಮತ್ತು ಹೇಗೆ ಪಳಗಿಸುತ್ತೇವೋ ಹಾಗೆಲ್ಲಾ ಅವು ಸುಲಭವಾಗಿ ನಮ್ಮ ಕೈಗೆ ವಶವಾಗುವುವಲ್ಲದೆ ಹೇಳಿದಹಾಗೆಲ್ಲಾ ಕೇಳುತ್ತವೆ' ಎಂದು ಹೇಳಲು, ಎಲ್ಲರೂ ಸಂತಸದಿಂದ ಕೂಗಿ ಕುಣಿ ದಾಡಿ, ಸ್ವಲ್ಪಹೊತ್ತಿನಮೇಲೆ ಕುದುರೆ ಮೊಟ್ಟೆಯನ್ನು ಕೊಂಡು ಕೊಂಡು ಬರುವಂತೆ ಮುಟ್ಠಾಳನ ಕೈಯಲ್ಲಿ ಐದು ಹೊನ್ನು ಕೊಟ್ಟು ಅವನ ಜತೆಯಲ್ಲಿ ಮರುಳನೂ ಹೋಗುವಂತೆ ಏರ್ಪಾಡುಮಾಡಿ, ಒಂದು ನಿಮಿಷವೂ ತಡವುಮಾಡದೆ ಒಡನೆ ಪಯಣಮಾಡಿಸಿದರು.

ಮರುಳನೂ ಮುಟ್ಠಾಳನೂ ಹೊರಟುಹೋದಮೇಲೆ, ಮಂಕನು ತನ್ನ ಮನಸ್ಸಿನಲ್ಲಿ ಒಂದು ಸಂಗತಿಯನ್ನು ಕುರಿತು ಆಲೋಚಿಸಿ ಆಲೋಚಿಸಿ ಬಗೆಹರಿಯದೆ, ಮಡೆಯ, ಮಡ್ಡಿ, ಗುರುಗಳು ಇವರನ್ನು ನೋಡಿ “ಒಂದು ಸಂಗತಿಯನ್ನು ಹೇಳುತ್ತೇನೆ ಕೇಳಿ. ಇದು ಬಹಳ ಮುಖ್ಯವಾದ ಸಂಗತಿ. ಮೊದಲು ಇದನ್ನು ಆಲೋಚಿಸಿ ಬಳಿಕ ಎರಡನೆಯ ಕೆಲಸವನ್ನು ಮಾಡಬೇಕು. ಇಲ್ಲದಿದ್ದರೆ ನಮ್ಮ ಕೆಲಸವೆಲ್ಲಾ ಕೆಟ್ಟು ಹಾಳಾಗಿಹೋಗುವುದು. ನಾನು ಸುಮ್ಮನೆ ಇದ್ದೆನೆಂದು ತಿಳಿಯಬೇಡಿ; ಎಷ್ಟೆಷ್ಟೋ ವಿಧವಾಗಿ ಆಲೋಚಿಸಿ ನೋಡಿದೆನು, ಆದರೂ ಯಾವ ಉಪಾಯವೂ ತೋರಲಿಲ್ಲ” ಎನ್ನಲು, ಅವರು ‘ಅದೇನು ? ಹೇಳು, ಹೇಳು’ ಎಂದು ಬಹಳ ತವಕದಿಂದ ಕೇಳಿದರು. ಆಗ ಮಂಕನು “ಮರುಳ, ಮುಟ್ಠಾಳ ಇವರಿಬ್ಬರೂ ಹೋಗಿರುವುದರಿಂದ ಯಾವ ಅಡ್ಡಿಯೂ ಇಲ್ಲದೆ ಖಂಡಿತವಾಗಿ ಒಳ್ಳೆಯ ಜಾತಿಯ ಕುದುರೆಮೊಟ್ಟೆ ಬರುತ್ತದೆ ಎಂದು ಇಟ್ಟುಕೊಳ್ಳುವ. ಬಂದರೆ, ಸೇಕಹುಟ್ಟಿಸಿದ ಮೇಲಲ್ಲವೇ ಮೊಟ್ಟೆ ಬಲಿವುದು; ಬಲಿತಮೇಲಲ್ಲವೇ ಮರಿಯಾಗುವುದು; ಅದರ ಮೇಲೆ ತಾನೆ ನಾವು ಕುದುರೆ ಮರಿಯನ್ನು ಕಾಣಬಹುದು; ಹೀಗಿರುವುದರಿಂದ ಯಾರು ಮೊದಲು ಸೇಕಹುಟ್ಟಿಸುವವರು? ಹೇಗೆ ಹೇಗೆ ಆಲೋಚಿಸಿದರೂ ನನಗೇನೂ ತೋರುವುದಿಲ್ಲ. ಇದೂ ಅಲ್ಲದೆ ಆ ಮೊಟ್ಟೆ ಎರಡು ಕೈಗಳಿಂದಲೂ ತಬ್ಬುವುದಕ್ಕಾಗದಷ್ಟು ದೊಡ್ಡದಾಗಿದೆಯೆಂದು ಹೇಳಿದನಲ್ಲವೆ? ಹಾಗಿದ್ದರೆ ಕಾವಿಗೆ ಕುಳಿತುಕೊಳ್ಳುವುದಕ್ಕೆ ಹತ್ತು, ಹದಿನೈದು ಕೋಳಿಗಳನ್ನಿಟ್ಟರೂ ಸಾಲದು. ಇವುಗಳನ್ನು ಒಂದೇಕಡೆ ನಿಲ್ಲಿಸುವುದೂ ಕಷ್ಟ. ಹೀಗಾದಮೇಲೆ ಮೊಟ್ಟೆಯಗತಿ ಏನಾಗಬೇಕು? ಹೇಳಿರಿ” ಎಂದನು.

ಈ ಮಾತನ್ನು ಕೇಳಿ ಎಲ್ಲರೂ ಚೆನ್ನಾಗಿ ಕಣ್ಣುಬಿಟ್ಟು ಒಬ್ಬರನ್ನೊಬ್ಬರು ನೋಡಿ ಏನೂ ಬಗೆಹರಿಯದೆ ಬಾಯಿಬಿಟ್ಟು ಮಾತನಾಡದಂತೆ ಸುಮ್ಮನೆ ಇದ್ದರು. ಬಹಳ ಹೊತ್ತಿನಮೇಲೆ ಗುರುಗಳು “ನಮ್ಮೊಳಗೆ ಯಾರಾದರೂ ಒಬ್ಬರು ಕಾವಿಗೆ ಕುಳಿತುಕೊಳ್ಳಬೇಕು

ಹಾಗಿಲ್ಲದಿದ್ದರೆ ಬೇರೆ ದಾರಿಯೇ ತೋರುವುದಿಲ್ಲ'' ಎಂದು ಇದರಲ್ಲಿದ್ದ ಮೂವರನ್ನೂ ಒಬ್ಬೊಬ್ಬನನ್ನಾಗಿ ಕೇಳಲು, ಒಬ್ಬೊಬ್ಬನೂ ಒಂದೊಂದು ನೆಪವನ್ನು ಹೇಳತೊಡಗಿದನು. ಮೊದಲು, ಮಡ್ಡಿ ''ನಿಚ್ಚವೂ ಹೊತ್ತಾರೆ ಹೊಳೆಗೆ ಹೋಗಿ ಬೇಕಾದಷ್ಟು ನೀರನ್ನು ತಂದು ಒದಗಿಸುವುದೂ ಕಾಡಿಗೆ ಹೋಗಿ ಬೇಕಾದಷ್ಟು ಅಡುಗಬ್ಬನ್ನು ಸೇರಿಸಿ ತಂದು ಕೊಡುವುದೂ ನನ್ನ ಕೆಲಸವಾಗಿರುವಾಗ, ನಾನು ಸೇಕ ಹುಟ್ಟಿಸುವುದಕ್ಕಾಗುತ್ತದೆಯೇ ?'' ಎಂದನು. ಎರಡನೆಯವನಾದ ಮಡೆಯನು ''ನಾನು ಹಗಲೂ ಇರುಳೂ ಸ್ವಲ್ಪವೂ ಹಿಂದೆಗೆಯದೆ ಅಡಿಗೆಯ ಮನೆಯಲ್ಲಿ ಹತ್ತುಮಂದಿಗೆ ಅನ್ನವನ್ನು ಬೇಯಿಸುತ್ತಲೂ ಬಗೆಬಗೆಯ ಪಲ್ಲೆಯಗಳನ್ನು ಮಾಡುತ್ತಲೂ ಸವಿಯಾದ ತಿಂಡಿಗಳನ್ನು ಒದಗಿಸುತ್ತಲೂ ಬಿಸುನೀರು ಕಾಯಿಸುತ್ತಲೂ ಒಲೆಯ ಬಳಿಯಲ್ಲಿದ್ದು ಬಳಲಿ ಬಾಯಾರಿ ಬೆಂದು ಬೆಂಡಾಗುತ್ತಿದ್ದೇನಲ್ಲವೆ! ನನ್ನಿಂದ ಕಾವಿಗೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ ?'' ಎಂದನು. ಮೂರನೆಯವನಾದ ಮಂಕನು ''ಹೊತ್ತು ಹುಟ್ಟುವುದಕ್ಕೆ ಮುಂಚೆ ಎದ್ದು ಹೊಳೆಗೆ ಹೋಗಿ ಹಲ್ಲುಜ್ಜಿಕೊಂಡು ಬಾಯಿಮುಕ್ಕಳಿಸಿ ಮೊಕ ತೊಳೆದು ಶುಚಿಯಾಗಿ ಮಡಿಯುಟ್ಟು ಕ್ರಮವಾಗಿ ಸಂಧ್ಯಾನುಷ್ಠಾನವನ್ನು ತೀರಿಸಿಕೊಂಡಮೇಲೆ, ಹೂದೋಟಕ್ಕೆ ಹೋಗಿ ಸೊಂಪಾಗಿರುವ ಮೊಗ್ಗುಗಳನ್ನು ಕೊಯ್ದು ಸೊಗಸಾದ ಸರಗಳನ್ನು ಮಾಡಿ ದೇವರಿಗೊಪ್ಪಿಸಿ ಧೂಪದೀಪಗಳನ್ನು ಅಣಿಮಾಡಿ ಪೂಜೆಗೆ ಬೇಕಾದ ಇತರ ಪದಾರ್ಥಗಳನ್ನೆಲ್ಲಾ ಒದಗಿಸಿಕೊಟ್ಟು ಪೂಜೆಯಾಗುತ್ತಿರುವಾಗ ಶಂಖವಾದ್ಯವನ್ನು ಬಾಜಿಸುವುದು ನನ್ನ ಕೆಲಸವಾಗಿರುವುದರಿಂದ, ನಾನು ಸೇಕಹುಟ್ಟಿಸುವುದು ಹೇಗೆ ?'' ಎಂದನು.

ಅವರ ಮಾತುಗಳನ್ನು ಕೇಳಿ ಗುರುಗಳು ''ನೀವು ಹೇಳಿದುದೆಲ್ಲಾ ನಿಜವೇ ಸರಿ. ಕುದುರೆಮೊಟ್ಟೆಯನ್ನು ತರಲಿಕ್ಕೆ ಹೋಗಿರುವವನಿಂದಲೂ ಈ ಕೆಲಸವಾಗುವುದಿಲ್ಲ. ಏಕೆಂದರೆ, ಅವರಲ್ಲಿ ಮುಟ್ಠಾಳನಿಗೆ ಇಲ್ಲಿಗೆ ಬರುವವರನ್ನೂ ಇಲ್ಲಿಂದ ಹೋಗುವವರನ್ನೂ ವಿಚಾರಿಸುವುದು, ಅವರು ಕೇಳುವ ಮಾತುಗಳಿಗೆ ಮರುಮಾತು ಹೇಳುವುದು,

ಹಲವುಮಂದಿ ತರುವ ವ್ಯಾಜ್ಯಗಳನ್ನು ಕೇಳಿ ತೀರ್ಪು ಹೇಳುವುದು, ಇವೇ ಮೊದಲಾದ ಕೆಲಸಗಳು ಎಷ್ಟು ಹೊತ್ತಾದರೂ ಕೊನೆಗಾಣುವುದೇ ಇಲ್ಲ. ಕೊನೆಯವನಾದ ಮರುಳನು ಬೆಸಸಿದ ವೇಳೆಯಲ್ಲಿ ಯಾವುದಕ್ಕಾದರೂ ಅಂಗಡಿಗಾಗಲಿ ಸಂತೆಗಾಗಲಿ ಪೇಟೆಗಾಗಲಿ ಹೋಗಬೇಕಲ್ಲವೆ? ಆದುದರಿಂದ ನಿಮ್ಮಲ್ಲಿ ಒಬ್ಬನಿಗೂ ಸೇಕಹುಟ್ಟಿಸುವುದಕ್ಕೆ ವೇಳೆಯಾಗುವುದಿಲ್ಲ. ನಾನು ಕೆಲಸವಿಲ್ಲದೆ ಸುಮ್ಮನೆ ತಾನೆ ಇಲ್ಲಿ ಇದ್ದುಕೊಂಡಿದ್ದೇನೆ. ಆದುದರಿಂದ ಆ ಮೊಟ್ಟೆಯನ್ನು ಮಡಿಲಲ್ಲಿ ಇಟ್ಟುಕೊಂಡು ಕೈಗಳಿಂದ ತಬ್ಬಿ ಎದೆಯಿಂದ ಅಪ್ಪಿಕೊಂಡು, ಕಣ್ಣೂ ಮನವೂ ಎಡೆಬಿಡದೆ ಅದರಲ್ಲಿಯೇ ನಟ್ಟಿರುವ ಹಾಗೆ ಹೆಚ್ಚಾದ ಅಕ್ಕರೆಯೊಡನೆ ಪದುಳವಾಗಿ ಅದಕ್ಕೆ ಮುಸುಕುಹಾಕಿ ಕಾಪಾಡಿ ಸೇಕ ಹುಟ್ಟಿಸುತ್ತೇನೆ. ಇದನ್ನು ಬಿಟ್ಟು ನನಗೆ ಬೇರೆ ಕೆಲಸವೇನು? ಮೊಟ್ಟೆ ಬಲಿತು ಕುದುರೆಮರಿ ದೊರೆತರೆ ಅದೇ ಸಾಕು. ಈ ಕಷ್ಟವನ್ನೆಲ್ಲಾ ಎಣಿಸಲೇಕೂಡದು'' ಎಂದರು.

ಹೀಗೆ ಮಠದಲ್ಲಿ ಇವರು ಮಂತಣವನ್ನು ಮಾಡುತ್ತಿರಲು, ಇರುಳು ಮೂರನೆಯ ಜಾವದಲ್ಲಿ ತಿಂಗಳು ಮೂಡಿದ ಕೂಡಲೆ ಹೊರಟ ಮುಟ್ಠಾಳನೂ ಮರುಳನೂ ಎರಡೂವರೆ ಗಾವುದಕ್ಕೆ ಆಚೆ ಮುಂದೆ ಮುಟ್ಠಾಳನು ನೋಡಿ ಗುರುತುಮಾಡಿಕೊಂಡು ಬಂದಿದ್ದ ಎಡೆಗೆ ಹೋಗಿ ಬೂದಿಗುಂಬಳಕಾಯಿ ಮೊಗ್ಗರವಾಗಿ ಕಾತೊರಗಿದ್ದ ಕೆರೆಯ ಬಂಡೆಯ ಹತ್ತಿರ ನಿಂತರು. ಬಳಿಕ ಆ ಕಾಯಿಗಳನ್ನು ನೋಡಿ ಬಹಳ ಸಂತಸಗೊಂಡು ಅಲ್ಲಿದ್ದ ಒಕ್ಕಲಿಗನ ಬಳಿಗೆ ಹೋಗಿ "ಅಪ್ಪಾ! ಮಾರಾಯಾ! ಈ ಕುದುರೆಮೊಟ್ಟೆಗಳಲ್ಲಿ ಒಂದನ್ನು ನಮಗೆ ಬೆಲೆಗೆ ಕೊಡಬೇಕು'' ಎಂದು ಬೇಡಿಕೊಂಡರು. ಅವನು ಇವರ ಮುಟ್ಠಾಳತನವನ್ನು ತಿಳಿದುಕೊಂಡು "ಓಹೊ! ಈ ಉತ್ತಮ ಜಾತಿಯ ಕುದುರೆ ಮೊಟ್ಟೆಯನ್ನು ನೀವು ಬೆಲೆಕೊಟ್ಟು ತೆಗೆದುಕೊಳ್ಳುವಿರಾ? ನನಗೆ ತೋರಲಿಲ್ಲ. ಸುಮ್ಮನೆ ಏಕೆ ಕೇಳುತ್ತೀರಿ? ದಾರಿ ಹಿಡಿದುಕೊಂಡು ಹೋಗಿ'' ಎಂದು ಹೇಳಲು, "ಹೋಗಯ್ಯಾ ಹೋಗು; ಇದಕೆ

ಐದು ಹೊನ್ನು ತಾನೇ ಬೆಲೆ. ನಾವೇನರಿಯೆವೋ? ನಮಗೆ ತಿಳಿಯದೆಂದು ಸುಮ್ಮನೆ ಬೆಲೆಯೇರಿಸುತ್ತೀಯೋ? ನಮಗಷ್ಟು ತಿಳಿಯದೆ? ನಾವೇನು ಮುಟ್ಠಾಳರು ಎಂದು ತಿಳಿದುಕೊಂಡೆಯೋ? ನೀನು ಮಾತನಾಡುವುದನ್ನು ನೋಡಿದರೆ, ನಮ್ಮ ಕೈಯಲ್ಲಿ ಹಣವಿಲ್ಲದೆ ಸುಮ್ಮನೆ ಕೇಳುತ್ತೇವೆ ಎಂದು ಮನದಲ್ಲಿ ಎಣಿಸುವ ಹಾಗೆ ತೋರುತ್ತದೆ. ಇದೋ ನೋಡು! ಕೈಯಮೇಲೆ ಈ ಐದು ಹೊನ್ನನ್ನು ತೆಗೆದುಕೊಂಡು ಒಂದು ಒಳ್ಳೆಯ ಮೊಟ್ಟೆಯನ್ನು ಕೊಡು. ಹುಡುಗಾಟ ಮಾಡಬೇಡ" ಎಂದರು.

ಅದಕ್ಕೆ ಆ ಒಕ್ಕಲಿಗನು "ನೀವು ಒಳ್ಳೆಯ ಗೃಹಸ್ಥರಂತೆ ಕಾಣುತ್ತೀರಿ. ನಿಮ್ಮ ಗುಣವನ್ನು ನೋಡಿ ನನಗೆ ಮನಸ್ಸೆಲ್ಲಾ ಒಪ್ಪಿತು. ಇನ್ನು ಯಾರಿಗಾದರೂ ಆಗಿದ್ದರೆ ನಾನು ಖಂಡಿತವಾಗಿ ಈ ಬೆಲೆಗೆ ಕೊಡುತ್ತಿರಲಿಲ್ಲ. ನಿಮಗಾಗುವಹೊತ್ತಿಗೆ ಈ ಬೆಲೆಗೆ ಕೊಡಲು ಒಡಂಬಡುತ್ತೇನೆ. ನಿಮ್ಮ ಮನಸ್ಸಿಗೆ ಬಂದ ಒಂದು ಮೊಟ್ಟೆಯನ್ನು ನೋಡಿ ತೆಗೆದುಕೊಳ್ಳಿ. ಆದರೆ, ಈಗಲೇ ಹೇಳಿರುತ್ತೇನೆ, ಇಷ್ಟು ಅಗ್ಗವಾಗಿ ಕೊಂಡುಕೊಂಡುದನ್ನು ಮಾತ್ರ ಒಬ್ಬರಲ್ಲಿಯೂ ಹೊರಪಡಿಸಬೇಡಿ" ಎಂದನು. "ಹೊರಪಡಿಸುವುದರಿಂದ ನಮಗೆ ಆಗಬೇಕಾದುದೇನು? ನಾವು ಹಾಗೆ ಮಾಡುವವರಲ್ಲ. ನೀನು ಈ ವಿಷಯವಾಗಿ ಏನೇನೂ ಆಲೋಚಿಸಕೆಲಸವಿಲ್ಲ" ಎಂದು ಅವನೊಡನೆ ಹೇಳಿ, ಅವರು ತಮ್ಮ ಮನಸ್ಸಿಗೆ ಒಪ್ಪಿದ ಒಂದು ದೊಡ್ಡ ಕಾಯನ್ನು ನೋಡಿ ಅವನಿಗೆ ತೋರಿಸಲು, ಅವನು ಐದು ಹೊನ್ನನ್ನು ತೆಗೆದುಕೊಂಡು ಆ ಕಾಯನ್ನು ಕೊಯ್ದು ಕೊಟ್ಟನು.

ಮರುದಿನ ಹೊತ್ತು ಹುಟ್ಟುವುದಕ್ಕೆ ಮುಂದೆ ಕತ್ತಲೆಯಾಗಿರುವಾಗಲೇ ಎದ್ದು ಮರುಳನು ಮುಟ್ಠಾಳನ ತಲೆಯಮೇಲೆ ಕುದುರೆ ಮೊಟ್ಟೆಯನ್ನು ಎತ್ತಿ ಪದುಳವಾಗಿಟ್ಟು ತಾನು ದಾರಿ ತೋರಿಸಿಕೊಂಡು ಮುಂದೆ ಹೋಗುತ್ತಿರಲು, ಮುಟ್ಠಾಳನು ಕಾಣದೆ ಇದ್ದ ಸೋಜಿಗವನ್ನು ಕಂಡವನಂತೆ, ಮೊಟ್ಟೆಯನ್ನು ಎರಡು ಕೈಗಳಿಂದಲೂ ಗಟ್ಟಿಯಾಗಿ ಅಮುಕಿ ಹಿಡಿದುಕೊಂಡು ತಲೆಯನ್ನು ತೂಗುತ್ತ—

"ಆಹಾ! ಹಿರಿಯರು ತಪದ ಬಲ್ಮೆಯಿಂದ ಎಲ್ಲವೂ ಕೈಗೂಡುತ್ತದೆ ಎನ್ನುತ್ತಾರಲ್ಲ. ಅದಕ್ಕೆ ತಾರ್ಕಣೆಯನ್ನು ಈಗ ನಮ್ಮ ಕಣ್ಣೆದಿರಿಗೆಯೇ ಕಂಡೆವು. ನಮ್ಮ ಗುರುಗಳು ಮಾಡುತ್ತಿರುವ ತಪದ ಬಲ್ಮೆ ಇಷ್ಟಿಷ್ಟೆಂದು ಹೇಳಲಾಗುವುದಿಲ್ಲ. ನೋಡು! ನೂರು ನೂರೈವತ್ತು ಹೊನ್ನು ಬೆಲೆಯಾಗುವ ಜಾತಿಯ ಕುದುರೆಯನ್ನು, ಮಂಕುಬೂದಿ ಹಾಕಿ ಎತ್ತಿಕೊಂಡು ಹೋಗುವಹಾಗೆ, ನಾವು ಎಷ್ಟು ಸುಳುವಾಗಿ ಐದು ಹೊನ್ನಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ!" ಎನ್ನಲು, ಮರುಳನು "ಅದಕ್ಕೆ ಸಂಶಯವೇನು? ಕೈ ಹುಣ್ಣಿಗೆ ಕನ್ನಡಿಯಾಗಬೇಕೇ? 'ತೋಡಿದ ಬಾವಿಗೆ ಜಲವೇ ಸಾಕ್ಷಿ' ಎಂದು ಹೇಳುವುದನ್ನು ನೀನು ಕೇಳಿಲ್ಲವೆ? ನಮ್ಮ ಗುರುಗಳು ನಿಜವಾಗಿಯೂ ಪುಣ್ಯಾತ್ಮರು ಎಂಬುದು ಅವರಿಗೆ ಈಗ ಸಿಕ್ಕಿದ ಈ ಕುದುರೆಯಿಂದಲೇ ಅಂಗೈಯಲ್ಲಿಯ ನೆಲ್ಲಿಯಕಾಯಂತೆ ಚೆನ್ನಾಗಿ ತಿಳಿಯುತ್ತದೆ. ಬೇರೊಂದು ದೃಷ್ಟಾಂತವನ್ನು ಹೇಳುತ್ತೇನೆ ಕೇಳು. ನನ್ನ ತಂದೆ ಬಹಳ ಸಂಪನ್ನನು, ಅದೃಷ್ಟಶಾಲಿ ಎಂಬುದು ಅವನಿಗೆ ನಾನು ಕೃಷ್ಣವಿಗ್ರಹದ ಹಾಗೆ ಮಗನಾಗಿ ಹುಟ್ಟಿದುದರಿಂದಲೇ ಸ್ಪಷ್ಟವಾಗಿ ತಿಳಿಯುತ್ತದೆ. ಇಲ್ಲವೆ?" ಎಂದು ಹೇಳಲು, ಮುಟ್ಠಾಳನು "ಇದಕ್ಕೆ ಸಂದೆಗವುಂಟೇ? ಬಿತ್ತೊಂದು ಹಾಕಿದರೆ ಹಣ್ಣೊಂದು ಹುಟ್ಟುತ್ತದೆಯೇ? ಬೇವನ್ನು ಬಿತ್ತಿದರೆ ಮಾವು ಮೊಳೆಯುತ್ತದೆಯೇ? ಪುಣ್ಯವು ಒಳ್ಳಿಯದನ್ನೇ ಉಂಟುಮಾಡುವುದು; ಪಾಪವು ಹೊಲ್ಲೆಹವನ್ನೇ ಉಂಟುಮಾಡುವುದು" ಎಂದನು.

ಹೀಗೆ ಸಂತಸದೊಡನೆ ಮಾತನಾಡಿಕೊಂಡು ಬಹಳ ದೂರ ನಡೆದು ಒಂದು ಇಕ್ಕಟ್ಟಾದ ದಾರಿಯಲ್ಲಿ ಹೋಗುತ್ತಿರಲು, ಆ ದಾರಿಯಲ್ಲಿ ಬಾಗಿ ಅಡ್ಡವಾಗಿ ಬಂದಿದ್ದ ಒಂದು ಮರದಕೊಂಬೆ ತಗಲಿ ಮುಟ್ಠಾಳನ ತಲೆಯ ಮೇಲಿದ್ದ ಬೂದಿಗುಂಬಳಕಾಯಿ ಜಾರಿ ಕೆಳಗೆ ದಟ್ಟವಾಗಿದ್ದ ಒಂದು ಪೊದರಿನಲ್ಲಿ ಬಿದ್ದು, ಆ ಪೊದರಿನ ನಡುವೆ ಇದ್ದ ಕಲ್ಲಿನಮೇಲೆ ಬಲವಾಗಿ ತಾಗಿ ಒಡೆದು ಹೋಯಿತು. ಆಗ ಆ ಪೊದರೊಳಗೆ ಹುದುಗಿಕೊಂಡಿದ್ದ ಒಂದು ಮೊಲವು ಬೆಚ್ಚಿ ಅಂಜಿಕೊಂಡು ಓಡಿ

ಹೋಯಿತು. ಅದನ್ನು ನೋಡಿ ಅವರು "ಅದೋ! ಮೊಟ್ಟೆಯೊಳಗಿದ್ದ ಕುದುರೆಮರಿ ಓಡಿ ಹೋಗುತ್ತದೆ!" ಎಂದು ಕೂಗಿಕೊಂಡು ಅದನ್ನು ಹಿಡಿವುದಕ್ಕೆ ಗಿಡು ಬಳ್ಳಿ ಹಳ್ಳ ತಿಟ್ಟು ಕಲ್ಲು ಮುಳ್ಳು ಯಾವುದನ್ನೂ ನೋಡದೆ ಇಬ್ಬರೂ ಹಿಂದಟ್ಟಿ ಓಡಿದರು. ಕುದುರೆಮರಿಯನ್ನು ಹಿಡಿವುದಕ್ಕಾಗಿ ಅವರು ಪಟ್ಟ ಕಷ್ಟವು ಅಷ್ಟಿಷ್ಟಲ್ಲ. ಉಟ್ಟ ಬಟ್ಟೆ ಗಿಡುಗಳಿಗೂ ಮುಳ್ಳುಗಳಿಗೂ ಸಿಕ್ಕಿ ಹರಿದುಹೋಗಿ ಚೂರು ಚೂರಾಗಿ ನೇಲುತ್ತಿದ್ದಿತು. ಮುಳ್ಳುಗಳು ಬೆನ್ನನ್ನು ಕೀರಿದುವು. ಕಲ್ಲುಗಳು ಕಾಲನ್ನು ಒತ್ತಿದುವು. ಮೈಯೆಲ್ಲಾ ಗಾಯವಾಗಿ ನೆತ್ತರು ಹರಿಯಿತು. ಊಟೆಯಿಂದ ನೀರು ಹರಿವಂತೆ ಮೈಯಿಂದ ಬೆವರು ಸುರಿಯಿತು. ಎದೆ ಅದಿರಿತು. ಕಿವಿ ಮುಚ್ಚಿಹೋಯಿತು. ನಾಲಗೆ ಒಣಗಿತು. ಬಾಯಾರಿಕೆ ಹೆಚ್ಚಿತು. ಕರುಳು ಅಲ್ಲಾಡಿತು. ಕಾಲು ನಡುಗಿತು. ಕಣ್ಣು ಮಂಜಾಯಿತು. ಹೀಗೆ ಓಡಿದರೂ ಕುದುರೆಮರಿ ಕೈಗೆ ಸಿಕ್ಕದೆ ಹೋಯಿತು. ಅವರು ತಲ್ಲಣಿಸಿ ಬೆಂಡಾಗಿ ಬಸವಳಿದು ಬಿದ್ದರು. ಅಷ್ಟರೊಳಗೆ ಮೊಲವು ಕಣ್ಣಿಗೆ ಕಾಣದೆ ಮರೆಯಾಗಿ ಬಹಳ ದೂರಕ್ಕೆ ಓಡಿ ಹೋಯಿತು. ಬಳಿಕ ಅವರು ದಣಿವನ್ನು ನೋಡದೆ ಎದ್ದು ಕಲ್ಲೂ ಮುಳ್ಳೂ ನಟ್ಟುಕೊಂಡಿರುವ ಕಾಲುಗಳಿಂದ ಕುಂಟುತ್ತ ಬಿಸಿಲಿನಲ್ಲಿ ನಡೆದು ಅಲ್ಲಲ್ಲಿಯೇ ನಿಂತು ನಿಂತು ಹಿಂದಿರುಗಿ ನೋಡುತ್ತ ಆ ದಿನವೆಲ್ಲಾ ಊಟವಿಲ್ಲದೆ ಹೊತ್ತು ಮುಳುಗಿದಮೇಲೆ ಮಠಕ್ಕೆ ಬಂದು ಸೇರಿದರು.

ಮಠದ ಬಾಗಿಲನ್ನು ಹೊಗುವಾಗ ಅವರು ಅಯ್ಯಪ್ಪಾ! ಅಪ್ಪಪ್ಪಾ! ಎಂದು ಕೂಗಿ, ಬಾಯಿಬಡಿದುಕೊಂಡು ಕೆಳಗೆ ಬಿದ್ದರು. ಈ ಕೂಗನ್ನು ಕೇಳಿ ಒಳಗಿದ್ದವರು ದಿಗಿಲುಬಿದ್ದು ತಟ್ಟನೆ ಓಡಿಬಂದು ಕೈಹಿಡಿದೆತ್ತಿ "ಏನಾಯಿತು? ಏನಾಯಿತು?" ಎಂದು ಕೇಳಲು, ನಡೆದ ಸಂಗತಿಯನ್ನೆಲ್ಲಾ ಇಬ್ಬರೂ ಮೊದಲಿನಿಂದ ತುದಿವರೆಗೆ ಹೇಳಿದರು. ಸ್ವಲ್ಪ ಹೊತ್ತಿನಮೇಲೆ ಮುಟ್ಠಾಳನು ತನ್ನಷ್ಟಕ್ಕೆ ತಾನೇ ಅಚ್ಚರಿಪಡುತ್ತ ಉಳಿದವರೊಡನೆ "ಅಯ್ಯಾ! ನಾನು ಹುಟ್ಟಿದಂದು ಮೊದಲುಗೊಂಡು ಈ ಹೊತ್ತಿನವರೆಗೆ ಒಂದುಬಾರಿಯೂ ಇಷ್ಟು ವೇಗವಾದ

ಕುದುರೆಯನ್ನು ನೋಡಿದುದಿಲ್ಲ. ಇದು ಕಪ್ಪೊಡನೆ ಸೇರಿದ ಬೂದಿಯ ಬಣ್ಣವಾಗಿ, ಎತ್ತರದಲ್ಲಿಯೂ ಗಾತ್ರದಲ್ಲಿಯೂ ಮೊಲಕ್ಕೆ ಸಮವಾಗಿ, ಒಂದು ಮೊಳದಷ್ಟೇ ಉದ್ದವಾಗಿ, ಇನ್ನೂ ಮೊಟ್ಟೆಯೊಳಗೆ ಕೆಡೆದು ಕೊಂಡಿರುವ ಮರಿಯಾಗಿದ್ದರೂ, ಎರಡು ಕಿವಿಗಳನ್ನೂ ಅಗಲಿಸಿ ಕೊಂಡು ಎರಡು ಬೆರಳಷ್ಟುದ್ದವಾದ ಮೋಟುಬಾಲವನ್ನೆತ್ತಿಕೊಂಡು ನೆಲಕ್ಕೆ ಎದೆ ತಗಲುವಂತೆ ನಾಲ್ಕು ಕಾಲುಗಳನ್ನೂ ನೀಡಿ ಓಡಿದ ವೇಗವನ್ನು ಹೇಳಲೂ ನೆನೆಯಲೂ ಅಸದಳವಾಗಿದೆ. ಅಮ್ಮಮ್ಮ! ಅಪ್ಪಪ್ಪ ಇಂಥ ವೇಗವನ್ನು ನಾನು ಕಂಡೂ ಇಲ್ಲ. ಕೇಳಿಯೂ ಇಲ್ಲ ಎಂದನು. ಅದನ್ನು ಕೇಳಿ ಅವರೆಲ್ಲರೂ ಅಚ್ಚರಿಯಿಂದ ಬಿಟ್ಟ ಬಾಯಿ ಬಿಟ್ಟಂತೆಯೇ ಇರಲು, ಗುರುಗಳು ಅವರನ್ನು ನೋಡಿ "ಐದು ಹೊನ್ನು ಹೋದುದಲ್ಲದೆ ಅದರೊಡನೆ ಕುದುರೆಮರಿಯೂ ಹೋಯಿತಲ್ಲಾ ಎಂದು ಮರುಗಬೇಡಿ. ಕುದುರೆ ಹೋದರೆ ಪೀಡೆ ಕಳೆಯಿತು. ಅದು ಹೋದುದು ನಮಗೆ ಒಳ್ಳೆಯದೇ ಆಯಿತು. ಏಕೆಂದರೆ ಚಿಕ್ಕ ಮರಿಯಾಗಿರುವಾಗಲೇ ಹೀಗೆ ಓಡುವ ಕುದುರೆ ಚೆನ್ನಾಗಿ ಸಾಕಿ ಆರೈಕೆ ಮಾಡಿದರೆ ಮಿಂಚನ್ನು ಮೀರಿ ಹಾರಬಹುದಲ್ಲವೇ! ಅಂಥ ಕುದುರೆಯ ಮೇಲೆ ಏರಾಟಮಾಡುವುದಕ್ಕೆ ಯಾರಿಗೆ ತಾನೇ ಗುಂಡಿಗೆ ಇರುತ್ತದೆ? ನಾನಂತೂ ಮುದುಕನು. ಅದರ ಮೇಲೆ ಕುಳಿತುಕೊಳ್ಳುವುದಕ್ಕೆ ನನಗೇನು ಎರಡೆದೆಯುಂಟೆ? ಗಾಳಿಯನ್ನೂ ಮನವನ್ನೂ ಮಿಂಚುವ ಅಂಥ ಕುದುರೆ ಒಂದು ಕವಡೆಯೂ ವೆಚ್ಚವಾಗದೆ ಹಾಗೆಯೇ ಸಿಕ್ಕಿದರೂ ಖಂಡಿತವಾಗಿ ನನಗೆ ಬೇಡ" ಎಂದರು.

೪ನೆಯ ಪ್ರಕರಣ.

ಹಸುವನ್ನು ಕೊಂಡುಕೊಂಡುದು.

ಮಠದ ಹಸು ಎಲ್ಲಿಯೋ ತಪ್ಪಿಸಿಕೊಂಡು ಹೊರಟು ಹೋಗಿ ಎಷ್ಟು ಹುಡುಕಿದರೂ ಸಿಕ್ಕದೆ ಹೋದುದರಿಂದ ಗುರುಗಳಿಗೆ ಹಾಲಿಲ್ಲದೆ ಬಹಳ ಕಷ್ಟವಾಗಿದ್ದಿತು. ಶಿಷ್ಯರು ಎಲ್ಲಿಯಾದರೂ ಹೋಗಿ ಒಂದು ಹಸುವನ್ನು ಕೊಂಡುಕೊಂಡು ಬಂದು ಈ ಕಷ್ಟವನ್ನು ತಪ್ಪಿಸ ಬೇಕು ಎಂದು ಆಲೋಚಿಸಿ, ಅಲ್ಲಿಗೆ ಸ್ವಲ್ಪ ದೂರದಲ್ಲಿದ್ದ ಒಂದು ಹಳ್ಳಿಗೆ ಹೋಗಿ ಅಲ್ಲಿ ಒಬ್ಬ ಗೊಲ್ಲನನ್ನು ಕಂಡು "ನಮ್ಮ ಗುರುಗಳಿಗೆ ಒಂದು ಹಸು ಬೇಕಾಗಿದೆ. ನಿಮ್ಮಲ್ಲಿ ಸಿಕ್ಕುವುದೇ?" ಎಂದು ಕೇಳಿದರು. ಆ ಗೊಲ್ಲನು ಮುಖಭಾವದಿಂದ ಇವರ ಗಾಂಪತನವನ್ನು ತಿಳಿದುಕೊಂಡು, ಇವರ ಆತುರವನ್ನು ನೋಡಿ, ತನ್ನಲ್ಲಿರುವ ಒದೆವ ತುಂಟು ಹಸುವನ್ನು ಮಾರಿಬಿಡುವುದಕ್ಕೆ ಒಳ್ಳೆಯ ಸಮಯವು ದೊರೆಯಿತು ಎಂದೆಣಿಸಿ, "ನನ್ನ ಮಂದೆಯಲ್ಲಿ ಒಂದು ಹಸು ಮೈತುಂಬಿಕೊಂಡು ಒಳ್ಳೆಯ ಲಕ್ಷಣಗಳೊಡನೆ ಕೂಡಿದೆ. ಗುರುಗಳಿಗೆ ಎಂದು ನೀವು ಹೇಳುವುದರಿಂದ ಅದನ್ನೇ ಕೊಟ್ಟುಬಿಡುವ ಎಂದು ಎಣಿಸುತ್ತೇನೆ. ನನಗೂ ಪುಣ್ಯವು ಬರುತ್ತದೆ. ಇನ್ನೊಬ್ಬರಿಗಾದರೆ ಯಾರಪ್ಪನಿಗೂ ಕೊಡುತ್ತಿರಲಿಲ್ಲ. ಏನು ಬೆಲೆ ಕೊಡುವಿರಿ? ಹೇಳಿ" ಎಂದನು. ಅದಕ್ಕೆ ಅವರು "ಹದಿನೈದು ಹೊನ್ನುಗಳನ್ನು ಮಾತ್ರ ತಂದಿದ್ದೇವೆ, ಇವನ್ನು ತೆಗೆದುಕೊಂಡು ನಮ್ಮ ಮೇಲೆ ದಯೆಯಿಟ್ಟು ಹಸುವನ್ನು ಕೊಡಬೇಕು" ಎಂದು ಕೇಳಿಕೊಂಡರು. ಗೊಲ್ಲನು "ತುಂಟು ಹಸುವಿಗೆ ಇಷ್ಟು ಬೆಲೆ ದೊರೆಯಿತಲ್ಲಾ; ಇದು ನನ್ನ ಅದೃಷ್ಟವೇ ಸರಿ" ಎಂದು ಮನದೊಳಗೆ ಸಂತಸಗೊಂಡು, ಹೊರಗೆ ಮಾತ್ರ "ಬೆಲೆ ಬಹಳ ಕಡಮೆ, ಬೆಲೆ ಬಹಳ ಕಡಮೆ" ಎಂದು ಹೇಳಿಕೊಳ್ಳುತ್ತ, ಅವರೆಲ್ಲಿಯಾದರೂ ಹೊರಟುಹೋಗುವರೋ ಎಂಬ ಭಯದಿಂದ "ಬೆಲೆ ಕಡಮೆಯಾದರೂ ಆಗಲಿ. ಗುರುಗಳಿಗೆ ಎಂದು ಹೇಳುತ್ತೀರಿ.

ನೀವೂ ಬಹಳ ಒಳ್ಳೆಯವರ ಹಾಗೆ ಕಾಣುತ್ತೀರಿ. ಕೊಟ್ಟುಬಿಡುತ್ತೇನೆ, ತೆಗೆದುಕೊಂಡುಹೋಗಿ. ನಿಮಗೆ ಹಸು ಸುಮ್ಮನೆ ಸಿಕ್ಕಿದಹಾಗಾಯಿತು. ಇನ್ನು ಯಾರೊಂದಿಗಾದರೂ ಈ ಸಂಗತಿಯನ್ನು ಹೇಳೀರಿ, ಕಂಡಿರಾ!'' ಎಂದನು. ಅವರು ``ಇನ್ನು ಯಾರೊಂದಿಗಾದರೂ ಹೇಳುವುದಕ್ಕೆ ನಾವೇನು ದಡ್ಡರೆ?'' ಎಂದು ಹೇಳಲು, ಗೊಲ್ಲನು ಮುಂದೆ ಹಣವನ್ನು ತೆಗೆದುಕೊಂಡು ಹಸುವನ್ನು ಅಟ್ಟಿಕೊಟ್ಟನು. ಅವರು ಹಸುವನ್ನು ಹೊಡೆದುಕೊಂಡು ಸ್ವಲ್ಪದೂರ ಹೋದಮೇಲೆ ಗೊಲ್ಲನು ಅವರನ್ನು ಹಿಂದಕ್ಕೆ ಕರೆದು ``ಒಂದು ಮಾತು ಹೇಳುವುದಕ್ಕೆ ಮರೆತೆನು. ಆಮೇಲೆ ನನ್ನನ್ನು ಬಯ್ಯಬೇಡಿ. ಈ ಹಸು ನಾಡಾಡಿಯಾದ ಹಸುವಿನಂತಲ್ಲ. ಇದನ್ನು ಕರೆವಾಗ ಕಾಲುಕಟ್ಟಿ ಕೊಂಬುಹಿಡಿದೇ ಕರೆಯಬೇಕು. ತಿಳಿಯಿತೋ? ಎಲ್ಲಿಯಾದರೂ ಮರೆತುಹೋದೀರಿ'' ಎಂದು ಹೇಳಿದನು. ``ಹಾಗೆಯೇ ಆಗಲಿ'' ಎಂದು ಹೇಳಿ, ಅವರು ಬೈಗಿನಲ್ಲಿ ಹಸುವನ್ನು ಹೊಡೆದುಕೊಂಡು ಬಂದು ಗುರುಗಳಿಗೆ ತೋರಿಸಿ ಬಳಿಕ ಮಠದ ಹಿತ್ತಿಲಲ್ಲಿ ಕಟ್ಟಿಹಾಕಿದರು.

ಆ ಇರುಳೆಲ್ಲಾ ಶಿಷ್ಯರಿಗೂ ಗುರುಗಳಿಗೂ ನಿದ್ದೆಯೇ ಇಲ್ಲ. ಶಿಷ್ಯರು ``ಕಾಮಧೇನುವಿನಂತಿರುವ ಈ ಹಸುವನ್ನು ಇಷ್ಟು ಸುಲಭವಾದ ಬೆಲೆಗೆ ಕೊಂಡುಕೊಂಡು ಬಂದೆವಲ್ಲಾ! ನಮ್ಮ ಜಾಣತನಕ್ಕೆ ಎಣೆಯುಂಟೆ? ನಮ್ಮ ಚದುರತನಕ್ಕೆ ಇದಿರುಂಟೆ?'' ಎಂದು ಬಹಳವಾಗಿ ತಮ್ಮನ್ನು ತಾವೇ ಹೊಗಳಿಕೊಂಡರು. ಗುರುಗಳು ``ನೀವು ಹೇಳುವ ಮಾತುಗಳೆಲ್ಲಾ ನಿಜವೇ ಸರಿ. ನಿಮ್ಮ ಜಾಣತನದಿಂದಲೇ ನಾನು ಈ ಮಠದಲ್ಲಿ ಸುಖದಿಂದ ಜೀವಿಸಿಕೊಂಡಿರುವುದು. ನೀವು ದಡ್ಡರಾಗಿದ್ದರೆ ನನ್ನ ಗತಿ ಏನಾಗುತ್ತಿದ್ದಿತೋ ಅದನ್ನು ದೇವರೇ ಬಲ್ಲನು. ನೀವು ಮಾಡಿರುವ ಕೆಲಸಗಳಲ್ಲಿ ಯಾವುದು ತಾನೇ ನಿಮ್ಮ ಚದುರತನವನ್ನು ತೋರಿಸುವುದಿಲ್ಲ? ಹಸುವನ್ನು ಅಗ್ಗವಾಗಿ ಕೊಂಡುಕೊಂಡು ಬಂದುದು ಹಾಗಿರಲಿ. ಕುದುರೆಮೊಟ್ಟೆಯ ವ್ಯಾಪಾರದಲ್ಲಿ ನೀವು ತೋರಿಸಿದ ಜಾಣತನವನ್ನು ಯಾರು ತಾನೆ ಕೊಂಡಾಡರು?

ಎಂದು ಹೇಳಿದರು. ಹೀಗೆ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತ ಗುರುಗಳೂ ಶಿಷ್ಯರೂ ರಾತ್ರಿಯೆಲ್ಲಾ ಎಚ್ಚರವಾಗಿದ್ದು ಬೆಳಗಾಗುವು ದನ್ನೇ ಇದಿರುನೋಡುತ್ತಿದ್ದರು. ಬೆಳಗಾದ ಮೇಲೆ ಶಿಷ್ಯರು "ಬೇಗನೆ ಹಸುವನ್ನು ಕರೆದು ಗುರುಗಳಿಗೆ ಹಾಲನ್ನು ಒಪ್ಪಿಸಬೇಕು" ಎಂದೆ ಣಿಸಿ ತವಕದೊಡನೆ ಹಸುವನ್ನು ಕಟ್ಟಿದ್ದೆಡೆಗೆ ಹೋಗಿ ಸೇರಿದರು. ಆಗ ಮಂಕನು ಮರುಳನನ್ನು ನೋಡಿ 'ಹಸುವಿನ ಕಾಲನ್ನು ಕಟ್ಟು' ಎಂದನು. ಮರುಳನು ಮುಟ್ಠಾಳನನ್ನು ಕುರಿತು 'ಹಗ್ಗವನ್ನು ತರುವುದಕ್ಕೆ ಹೋದರೆ ತಡವಾಗುತ್ತದೆ. ಗುರುಗಳನ್ನು ಕರೆ' ಎಂದನು. ಹಾಗೆಯೇ ಮುಟ್ಠಾಳನು ಹೋಗಿ ಕರೆಯಲು, ಗುರುಗಳು ಬೇಗನೆ ಓಡಿಬಂದರು. ಬಳಿಕ ಮರುಳನು ಗುರುಗಳನ್ನು ಹಸುವಿನ ಹತ್ತಿರ ಕುಳ್ಳಿರಹೇಳಿ ಅವರ ತಲೆಯಲ್ಲಿ ಹಗ್ಗದಂತೆ ಹೆಣೆದುಕೊಂಡಿದ್ದ ಜಡೆಯಿಂದ ಹಸುವಿನ ಕಾಲನ್ನು ಬಿಮ್ಮನೆ ಕಟ್ಟಿದನು. ಬಳಿಕ ಮಂಕನು ಹಸುವಿನ ಕೆಚ್ಚ ಲನ್ನು ತಟ್ಟುತ್ತ ಕರೆಯತೊಡಗಿದನು. ಆಗ ಹಸು ಒದೆಯಲಾರಂಭಿ ಸಿತು. ಇದನ್ನು ಕಂಡು ಮಡೆಯನು 'ಆಹಾ! ಗೊಲ್ಲನು ಕೊಂಬು ಹಿಡಿದು ಕರೆಯಹೇಳಿದನಲ್ಲಾ; ಮರೆತುಬಿಟ್ಟಿರಾ?' ಎಂದು ಹೇಳಲು, ಮಡ್ಡಿ, 'ಭಲ! ಒಳ್ಳೆಯ ವೇಳೆಯಲ್ಲಿ ಜ್ಞಾಪಿಸಿದೆ' ಎಂದು ಹಸುವಿನ ಮುಂದೆ ಕೊಂಬುಹಿಡಿದು ತನ್ನ ಬಲವನ್ನೆಲ್ಲಾ ಬಿಟ್ಟು ಗಟ್ಟಿಯಾಗಿ ಊದಿದನು. ಆಗ ಹಸು ಬೆಚ್ಚಿ ಬೆದರಿ ಕಟ್ಟಿದ್ದ ಗೂಟವನ್ನು ಕಿತ್ತು ಕೊಂಡು ಇಬ್ಬರು ಮೂವರನ್ನು ಹಾಯ್ದು ಗುರುಗಳನ್ನು ಮುಳ್ಳಿ ನಲ್ಲಿಯೂ ಕಲ್ಲಿನಲ್ಲಿಯೂ ಎಳೆದುಕೊಂಡು ನಿಟ್ಟೋಟವಾಗಿ ಓಡಿಹೋಗಿ ಬಳಲಿ ಒಂದು ಕಡೆ ನಿಂತುಕೊಂಡಿತು. ಶಿಷ್ಯರು ಹಸುವನ್ನು ಹಿಂದಟ್ಟಿ ಓಡಿಹೋಗಿ ಬಹಳ ಪ್ರಯಾಸದಿಂದ ಗುರುಗಳ ಜಡೆಯ ಕಟ್ಟನ್ನು ಬಿಚ್ಚಿ ದರು. ಕೂಡಲೆ ಹಸು ನಾಲ್ಕಾಲೋಟವಾಗಿ ಓಡಿಹೋಯಿತು. ಗುರುಗಳು ಜ್ಞಾನವಿಲ್ಲದೆ ಬಿದ್ದಕಡೆಯೇ ಬಿದ್ದಿದ್ದರು. ಅವರ ಮೈ ಯಲ್ಲೆಲ್ಲಾ ಗಾಯವಾಗಿ ರಕ್ತವು ಸೋರುತ್ತಿದ್ದಿತು. ಶಿಷ್ಯರು ಅವ ರನ್ನು ಹೊತ್ತುಕೊಂಡು ಬಂದು ಮಠದಲ್ಲಿ ಹಾಸಿಗೆಯ ಮೇಲೆ ಮಲಗಿ ಸಿದರು. ಬಹಳ ಹೊತ್ತಿನಮೇಲೆ ಗುರುಗಳಿಗೆ ಜ್ಞಾನವು ಬಂದಿತು.

ಅವರು ಬದುಕಿದುದೇ ಪುನರ್ಜನ್ಮವಾಯಿತು. ಜ್ಞಾನವು ಬಂದಮೇಲೆ ಕಣ್ಣುಗಳನ್ನು ಬಿಟ್ಟು ಶಿಷ್ಯರನ್ನು ನೋಡಿ, ಜಡೆಯನ್ನು ಮುಟ್ಟಿಮುಟ್ಟಿ ನೋಡಿಕೊಳ್ಳುತ್ತ ಮೈಯನ್ನೆಲ್ಲಾ ಸವರಿಕೊಳ್ಳುತ್ತ, ನಿಟ್ಟುಸಿರು ಬಿಡುತ್ತ, "ಅಪ್ಪಾ! ಇನ್ನುಮೇಲೆ ಹಸುವನ್ನು ಮತಕ್ಕೆ ತರಬೇಡಿ" ಎಂದು ಬೇಡಿಕೊಂಡರು. ಅವರ ಗಾಯಗಳು ಮಾಯುವುದಕ್ಕೆ ಒಂದು ತಿಂಗಳು ಹಿಡಿಯಿತು.

೫ನೆಯ ಪ್ರಕರಣ.

ಬಾಡಿಗೆಯೆತ್ತನ್ನು ಹತ್ತಿಕೊಂಡು ಹೋದುದು.

ಕೆಲವು ದಿನಗಳು ಕಳೆದ ಮೇಲೆ ಗಾಂಪರೊಡೆಯರು ದೂರವಾಗಿರುವ ಒಂದೂರಿಗೆ ಪಯಣಮಾಡಬೇಕಾಯಿತು. ಆಗ ಶಿಷ್ಯರು 'ನಮ್ಮ ಗುರುಗಳು ಅಷ್ಟುದೂರ ಕಾಲುನಡೆಯಾಗಿ ಹೋಗುವುದಕ್ಕಾಗುವುದಿಲ್ಲ. ಬಹಳ ಬಳಲಿಕೆಯಾಗುತ್ತದೆ' ಎಂದು ಒಂದು ಮುದು ಎತ್ತನ್ನು ಬಾಡಿಗೆಗೆ ಮಾಡಿಕೊಂಡು ಬಂದರು. ಎತ್ತಿಗೆ ದಿನವೊಂದಕ್ಕೆ ಮೂರು ಹಣ ಬಾಡಿಗೆ ಕೊಡುವಂತೆ ತೀರುಮಾನವಾಯಿತು. ಬಹಳ ಕೆಲಸವಿದ್ದುದರಿಂದ ಹೊತ್ತಿನಂತೆ ಹೊರಡುವುದಕ್ಕಾಗದೆ ಹೊತ್ತಾರೆ ಒಂದು ಜಾವವಾದ ಮೇಲೆ ಗುರುಗಳೂ ಶಿಷ್ಯರೂ ಪಯಣಮಾಡಿ ಹೊರಟು ಸ್ವಲ್ಪದೂರ ಹೋದರು. ಆಗ ನಡು ಬೇಸಗೆಯಾದುದರಿಂದ ಹೋಗುತ್ತ ಹೋಗುತ್ತ ಕೊಳ್ಳಿಯಿಂದ ಮೈಯನ್ನು ಸುಡುವಂತೆ ಬಿಸಿಲು ಜಳಜಳ ಎಂದುರಿಯುತ್ತ ಬೇಗೆಯನ್ನುಂಟುಮಾಡಲು, ಮರಗಿಡುಬಳ್ಳಿಗಳೂ ಕೆರೆಕೊಳಕಟ್ಟೆಗಳೂ ಇಲ್ಲದುದರಿಂದ ನಿಲ್ಲುವುದಕ್ಕೆ ನೆಳಲೂ ಕುಡಿವುದಕ್ಕೆ ನೀರೂ ಇಲ್ಲದೆ ಬಕ್ಕ ಬಯಲಾಗಿದ್ದ ಒಂದು [illegible]ಳುಗಾಡಿನಲ್ಲಿ ಸಿಕ್ಕಿಕೊಂಡರು. ಆ ಕಾಡಿನಲ್ಲಿ ಹೋಗುತ್ತಿರುವಾಗ ಘೋರವಾಗಿ ಕಾಯುತ್ತಿರುವ ಬಿಸಿಲಿನ ಜಳವನ್ನು ಸೈರಿಸಲಾರದೆ ಎಳೆಯ ಕೀರೆಯ ದಂಟು ಮುರಿದುಬೀಳುವಂತೆ ಮುದುಕರಾದ ಗುರುಗಳು

ಬಸವಳಿದು ಎತ್ತಿನಿಂದ ಕೆಳಗೆ ಉರುಳುವುದನ್ನು ಕಂಡು, ಶಿಷ್ಯರು ಕಳ ವಳಗೊಂಡು ಎತ್ತನ್ನು ನಿಲ್ಲಿಸಿ, ಅವರನ್ನು ಮೆಲ್ಲಗೆ ಕೆಳಕ್ಕೆ ಇಳಿಯಿಸಿ ಕೊಂಡು ಅವರ ಬೇಗೆಯನ್ನು ಆರಿಸುವುದಕ್ಕೆ ನೆಳಲು ಎಲ್ಲಿಯೂ ಇಲ್ಲ ದುದರಿಂದ ನಿಲ್ಲಿಸಿದ್ದ ಎತ್ತಿನ ನೆಳಲಿನಲ್ಲಿ ನೆಲದ ಮೇಲೆ ಒಂದು ಬಟ್ಟೆ ಯನ್ನು ಹಾಸಿ ಮಲಗಿಸಿ, ಬಟ್ಟೆಯ ಸೆರಗಿನಿಂದ ಬೀಸಿಕೊಂಡಿದ್ದರು. ಇದರಿಂದ ಅವರಿಗೆ ಸ್ವಲ್ಪಮಟ್ಟಿಗೆ ಬೇಗೆಯಾರಿ ತಿಳಿವುಂಟಾದ ಮೇಲೆ ಮರಳಿ ಎತ್ತಿನ ಮೇಲೆ ಕುಳ್ಳಿರಿಸಿ ಮೆಲ್ಲಮೆಲ್ಲನೆ ಎತ್ತನ್ನು ನಡೆ ಯಿಸಿಕೊಂಡು ಹೋಗಿ ಹೊತ್ತು ಮುಳುಗುವುದಕ್ಕೆ ಮುಂದೆ ಒಂದು ಹಳ್ಳಿಯನ್ನು ಸೇರಿದರು. ಅಲ್ಲಿ ಒಂದು ಚಿಕ್ಕ ಮನೆಯ ಹಜಾರದಲ್ಲಿ ತಂಗುವಂತೆ ಏರ್ಪಾಡು ಮಾಡಿಕೊಂಡು, ಮನೆಯೊಳಗೆ ಹೋಗುವು ದಕ್ಕೆ ಮುಂದೆಯೇ ಎತ್ತಿನವನಿಗೆ ಮಾತನಾಡಿದ್ದಂತೆ ಮೂರು ಹಣ ವನ್ನು ತೆಗೆದುಕೊಟ್ಟರು. ಅವನು "ಇದು ಸಾಲದು" ಎಂದನು. "ಇದೇನು! ಮುಂದೆ ನಿನ್ನೊಡನೆ ಮಾತನಾಡಿ ಒಪ್ಪಿಕೊಂಡ ಬಾಡಿಗೆ ಮೂರು ಹಣ ತಾನೆ? ಅದು ಹೇಗೆ ಸಾಲದು ಎನ್ನುತ್ತೀಯೆ?" ಎಂದು ಅವರು ಕೇಳಲು, ಅವನು "ಎತ್ತಿನ ಮೇಲೆ ಕುಳಿತುಕೊಂಡು ಬಂದುದಕ್ಕೆ ಈ ಬಾಡಿಗೆ ಸರಿಯೇ. ಯಾರು ಇಲ್ಲ ಎನ್ನುತ್ತಾರೆ? ಆದರೆ ನಡುದಾರಿಯಲ್ಲಿ ನನ್ನ ಎತ್ತು ಬಿಸಿಲಿಗೆ ಕೊಡೆಯಾದುದಕ್ಕೆ ಬಾಡಿಗೆ ಕೊಡಬೇಡವೇ? ನೀವೇ ಹೇಳಿ" ಎಂದು ಹೇಳಿದನು. ಅವರು "ಆಹಾ! ಬಹಳ ಚೆನ್ನಾಯಿತು. ಲೋಕದಲ್ಲಿ ಇಂಥ ಅನ್ಯಾಯವೂ ಉಂಟೆ! ನಾವು ಬೇರೆ ಕೊಡುವುದಿಲ್ಲ. ಹೇಗೆ ತೆಗೆದುಕೊಳ್ಳುತ್ತೀಯೆ, ನೋಡುವ" ಎಂದು ಕೂಗಿ ರೇಗಿ ಗದರಿಸಿದರು. ಬಳಿಕ ಎತ್ತಿನವನಿಗೂ ಅವರಿಗೂ ಜಗಳವಾಗಿ ಬಹಳ ಗದ್ದಲವಾದುದರಿಂದ ಆ ಹಳ್ಳಿಯಲ್ಲಿದ್ದ ಹೆಂಗಸರು ಗಂಡಸರು ದೊಡ್ಡವರು ಚಿಕ್ಕವರು ಎಲ್ಲರೂ ಒಂದೇ ಗುಂಪಾಗಿ ಸೇರಿ ಓಡಿಬಂದು ಇವರ ಸುತ್ತ ಎಡೆಬಿಡದೆ ನಿಂತುಕೊಂಡರು. ಆ ಗುಂಪಿನಲ್ಲಿ ತಿಳಿವಳಿಕೆಯುಳ್ಳ ಒಬ್ಬ ಮನುಷ್ಯನು ಸದ್ದನ್ನು ಅಡಗಿಸಿ ಅವರ ಜಗಳದ ಕಾರಣವನ್ನು ವಿಚಾರಿಸಿ, "ಒಳ್ಳೆಯದು. ನಾನು ಹೇಳುವ ತೀರ್ಪಿಗೆ ಎರಡು ಕಡೆಯವರೂ ಒಡಂಬಡುವಿರೋ? ಹೇಳಿ"

ಎಂದು ಕೇಳಿದನು. ಅದಕ್ಕೆ ಅವರು "ಹಾಗೆಯೇ ಆಗಲಿ" ಎಂದು ಒಪ್ಪಿಕೊಂಡರು. ಬಳಿಕ ಅವನು—

"ಕೆಲವು ದಿನಗಳ ಹಿಂದೆ ನಾನು ಒಂದು ದೂರದೇಶಕ್ಕೆ ಪಯಣ ಮಾಡಿ ಹೋಗುತ್ತಿದ್ದಾಗ ನಡುದಾರಿಯಲ್ಲಿ ಒಂದಿರುಳು ಒಂದೂರಿಗೆ ಹೋಗಿ ಅಲ್ಲಿಯ ಸತ್ರದಲ್ಲಿ ತಂಗಿಕೊಂಡೆನು. ಆ ಸತ್ರದಲ್ಲಿ ಬಂದವರಿಗೆಲ್ಲಾ ಇರುವುದಕ್ಕೆ ಬಾಡಿಗೆಗೆ ಕೋಣೆಗಳನ್ನು ಬಿಟ್ಟುಕೊಡುವುದಲ್ಲದೆ ಊಟಮಾಡುವುದಕ್ಕೆ ಬೇಕಾದ ಅನ್ನ ಪಲ್ಲೆಯ ತಿಂಡಿ ಮುಂತಾದುದನ್ನು ಮಾರುವುದೂ ಉಂಟು. ಸತ್ರದವನು "ಊಟಮಾಡುವುದಕ್ಕೆ ನಿನಗೇನಾದರೂ ಬೇಕೆ?" ಎಂದು ನನ್ನನ್ನು ಕೇಳಲು, ನನಗೆ ವೆಚ್ಚಕ್ಕೆ ಹಣವಿಲ್ಲದೆ ಇದ್ದುದರಿಂದ 'ನಾನು ಬುತ್ತಿಯನ್ನು ಕಟ್ಟಿಕೊಂಡು ಬಂದಿದ್ದೇನೆ. ನನಗೇನೂ ಬೇಡ' ಎಂದು ಹೇಳಿಬಿಟ್ಟೆನು. ಆಗ ಅಲ್ಲಿ ಬಂದಿದ್ದವರಿಗಾಗಿ ಒಂದು ದೊಡ್ಡ ಆಡಿನ ತೊಡೆಯನ್ನು ಕಬ್ಬಿಣದ ಸಲಾಕೆಯಲ್ಲಿ ಪೋಣಿಸಿ ತುಪ್ಪಸವರಿ ಕೆಂಡದ ಮೇಲೆ ಹಿಡಿದು ಪಕ್ವವಾಗುವಂತೆ ಸುಡುತ್ತಿದ್ದರು. ಅದು ಚೆನ್ನಾಗಿ ಬಿಸಿಯೇರಿ ಕಾಯಲು ಅದಕ್ಕೆ ಸವರಿದ್ದ ತುಪ್ಪವು ಕರಗಿ ಬೆಂಕಿಯಲ್ಲಿ ತೊಟ್ಟಿಕ್ಕಿತು. ಅದರಿಂದ ಹೊಗೆಯುಂಟಾಯಿತು. ಆ ಹೊಗೆಯ ಕಂಪು ನನಗೆ ಬಹಳ ಇಂಪಾಗಿದ್ದಿತು. ಆದುದರಿಂದ ನಾನು ತಂದಿದ್ದ ಬುತ್ತಿಯನ್ನವನ್ನು ಆ ಕಂಪಿನೊಡನೆ ಉಂಡರೆ ಬಹಳ ಸಿಹಿಯಾಗಿರುವುದೆಂದೆಣಿಸಿ, ಆ ತೊಡೆಯನ್ನು ಹಾಗೆಯೇ ಸ್ವಲ್ಪಹೊತ್ತು ಬೆಂಕಿಯ ಮೇಲೆ ತಿರುಗಿಸುತ್ತ ಇರಬೇಕೆಂದು ಕೇಳಿಕೊಂಡೆನು. ಹಾಗೆಯೇ ಅವರು ತಿರುಗಿಸುತ್ತಿರಲು, ನಾನು ಬುತ್ತಿಯನ್ನು ಬಿಚ್ಚಿ ಅನ್ನವನ್ನು ಒಂದು ಕೈಯಲ್ಲಿಟ್ಟುಕೊಂಡು ಆ ಹೊಗೆಯಮೇಲೆ ಹಿಡಿದು, ಮತ್ತೊಂದು ಕೈಯಲ್ಲಿ ಬೇಗಬೇಗನೆ ಅನ್ನವನ್ನು ತುತ್ತುತುತ್ತಾಗಿ ತೆಗೆದುಕೊಂಡು ಹೊಗೆಯ ಕಂಪನ್ನು ಮೂಗಿನಿಂದ ಎಳೆದುಕೊಳ್ಳುತ್ತ ಉಂಡೆನು. ಬಳಿಕ ಮುಂದಕ್ಕೆ ಹೋಗಬೇಕೆಂದು ಪಯಣಕ್ಕೆ ಅಣಿಮಾಡಿಕೊಳ್ಳುತ್ತಿರಲು, ಸತ್ರದವನು ಬಂದು 'ಕಂಪನ್ನು ಮೂಸಿದುದಕ್ಕೆ ಬಾಡಿಗೆಕೊಟ್ಟು ಹೋಗು' ಎಂದನು. ನಾನು 'ಅದಕ್ಕೇನು ಬಾಡಿಗೆ?' ಎನ್ನಲು, ಅವನು 'ಕಂಪು ಬಿಟ್ಟಿಬೀಸಾಡಿಲ್ಲ.

ಬಾಡಿಗೆ ಕೊಟ್ಟೇ ತೀರಬೇಕು' ಎಂದನು. ನಾನು 'ಕೊಡುವುದಿಲ್ಲ' ಎಂದು ಎದ್ದು ಹೊರಡಲು, ಅವನು 'ಬಾಡಿಗೆ ಕೊಡದೆ ನೀನು ಹೋಗಗೊಡದು' ಎಂದು ಆಣೆಯಿಟ್ಟು ತಡೆದನು. ಹೀಗೆ ಇಬ್ಬರೂ ವ್ಯಾಜ್ಯವಾಡುತ್ತ ಹೋಗಿ ಆವೂರ ನ್ಯಾಯಾಧಿಪತಿಯಲ್ಲಿ ದೂರು ಹೇಳಿಕೊಂಡೆವು. ಆ ನ್ಯಾಯಾಧಿಪತಿಯಾದರೋ ಪೂರ್ಣಪಂಡಿತನು; ಸಕಲಶಾಸ್ತ್ರ ನಿಪುಣನು; ಬಹು ಬುದ್ಧಿಶಾಲಿ; ಮಹಾ ಸಮರ್ಥನು; ವಿಶೇಷವಾಗಿ ನ್ಯಾಯ ಸೂಕ್ಷ್ಮವನ್ನು ತಿಳಿದವನು. ಆ ಬಲ್ಲರೆರೆಯನು ಮಾಡಿದ ತೀರ್ಪನ್ನು ಕೇಳಿ. 'ಬಾಡನ್ನು ತಿಂದುದಕ್ಕೆ ಬೆಲೆ ಹಣ; ಬಾಡಿನ ಕಂಪನ್ನು ಮೂಸಿದುದಕ್ಕೆ ಬೆಲೆ ಹಣದ ಕಂಪು; ಇದೇ ನಾನು ಮಾಡುವ ತೀರ್ಪು' ಎಂದು ಹೇಳಿ ಸತ್ರದವನನ್ನು ಹತ್ತಿರ ಕರೆದು ಹಣತುಂಬಿದ ಒಂದು ಚೀಲವನ್ನು ಎತ್ತಿ ಅವನ ಮೂಗಿನ ಮೇಲಿಟ್ಟು ಬಲವಾಗಿ ಉಜ್ಜುತ್ತ 'ನಿನಗೆ ಸಲ್ಲಬೇಕಾದ ಬಾಡಿಗೆ ಸಂದಿತೋ?' ಎಂದು ಕೇಳಿದನು. ಆಗ ಸತ್ರದವನು 'ಅಯ್ಯೋ? ಮೂಗು ಹೋಯಿತು. ಮೂಗು ಹೋಯಿತು. ನಾರಾಯಾ! ಬಿಟ್ಟರೆ ಸಾಕಪ್ಪಾ! ಬಾಡಿಗೆ ಬಂದು ಹೋಯಿತು. ಸಾಕು, ಸಾಕು' ಎಂದು ಅಳುತ್ತ ಹೊರಟುಹೋದನು.

ನೋಡಿದಿರೋ! ಇದು ಒಳ್ಳೆಯ ನ್ಯಾಯವಲ್ಲವೇ? ನಿಮಗೂ ಇದೇ ತೀರ್ಪು. ಹೇಗೆಂದರೆ, "ಎತ್ತಿನಮೇಲೆ ಕುಳಿತುಕೊಂಡು ಬಂದುದಕ್ಕೆ ಬಾಡಿಗೆ ಹಣ; ಎತ್ತಿನ ನೆಳಲಲ್ಲಿದ್ದುದಕ್ಕೆ ಬಾಡಿಗೆ ಹಣದ ನೆಳಲು. ಆದರೆ ಈಗ ಹೊತ್ತು ಮುಳುಗಿರುವುದರಿಂದ ಎತ್ತಿನ ನೆಳಲ ಬಾಡಿಗೆಗೆ ಹಣದ ನೆಳಲು ಸಿಕ್ಕುವುದಿಲ್ಲ. ಅದಕ್ಕೆ ಪ್ರತಿಯಾಗಿ ಹಣದ ಸದ್ದನ್ನು ಒಪ್ಪಿಕೊಳ್ಳಬೇಕು" ಎಂದು ಹೇಳಿ, ಎತ್ತಿನವನನ್ನು ಹತ್ತಿರ ಕರೆದು ಬಿಗಿಯಾಗಿ ಹಿಡಿದುಕೊಂಡು, ಹಣದ ಚೀಲವನ್ನೆತ್ತಿ ಗಟ್ಟಿಯಾಗಿ ಸದ್ದಾಗುವಂತೆ ಅವನ ಕಿವಿಯ ಮೇಲೆ ಬಡಿದು ತಾಗಿಸಿ "ಏನಯ್ಯಾ, ಎತ್ತಿನವನೇ! ಹಣದ ಸದ್ದು ಕೇಳಿಸಿತೋ?" ಎಂದು ಕೇಳಿದನು. ಅದಕ್ಕೆ ಅವನು "ಕೇಳಿಸಿತಯ್ಯಾ ಕೇಳಿಸಿತು. ಕಿವಿ ನೋಯುತ್ತದೆ. ಸಾಕು, ಬಾಡಿಗೆ ಸಾಕು. ಅಪ್ಪಪ್ಪಾ! ನಿನಗೆ ಪುಣ್ಯಬರುತ್ತದೆ. ಬಿಡಪ್ಪಾ,

ಬಿಡು" ಎಂದು ಗೋಳಾಡುತ್ತ ಬೇಡಿಕೊಳ್ಳಲು, ಆತನು ಅವನನ್ನು ಬಿಟ್ಟುಬಿಟ್ಟನು. ಬಳಿಕ ಗುರುಗಳು ಎತ್ತಿನವನನ್ನು ನೋಡಿ "ಅಯ್ಯಾ! ನಿನ್ನೆತ್ತು ಸಾಕು. ಈ ರಗಳೆ ಇನ್ನು ಬೇಡ. ಎತ್ತನ್ನು ಹೊಡೆದು ಕೊಂಡು ಹೋಗು. ಇನ್ನು ಸ್ವಲ್ಪದೂರವೇ ಪಯಣ ಹೋಗ ಬೇಕಾದುದು. ಹೊತ್ತಾರೆ ತಂಪು ಹೊತ್ತಿನಲ್ಲಿ ಮೆಲ್ಲಮೆಲ್ಲಗೆ ನಡೆದು ಕೊಂಡು ಹೋಗುತ್ತೇನೆ" ಎಂದು ಅವನನ್ನು ಹೋಗಹೇಳಿ, ತರು ವಾಯ ತೀರ್ಪುಮಾಡಿದವನನ್ನು ನೋಡಿ "ಅಯ್ಯಾ! ನೀನು ನಮ್ಮ ವ್ಯಾಜ್ಯವನ್ನು ಸ್ವಲ್ಪವೂ ಪಕ್ಷಪಾತವಿಲ್ಲದೆ ಕತ್ತರಿಸಿದಂತೆ ಸರಿಯಾಗಿ ತೀರಿಸಿದೆ. ನಿನಗೆ ದೇವರು ಒಳ್ಳೆಯದು ಮಾಡಲಿ. ನಿನ್ನ ಹೊಟ್ಟೆ ತಣ್ಣಗಿರಲಿ" ಎಂದು ಅವನನ್ನು ಹೊಗಳಿ ಹರಸಿ ಕಳುಹಿದರು.

ಮಾರನೆಯ ದಿವಸ ಕೋಳಿ ಕೂಗಿದಕೂಡಲೆ ಎದ್ದು ಗುರುಗಳೂ ಶಿಷ್ಯರೂ ಪಯಣಮಾಡಿ ತಾವು ಹೋಗಬೇಕಾದ ಊರಿಗೆ ಬಿಸಿಲೇರು ವುದಕ್ಕೆ ಮುಂದೆ ಹೋಗಿ ಸೇರಿದರು. ಆ ದಿನವೆಲ್ಲಾ ಅಲ್ಲಿಯೇ ಇದ್ದು ತಮ್ಮ ಕೆಲಸಗಳನ್ನೆಲ್ಲಾ ತೀರಿಸಿಕೊಂಡು ಮರುದಿವಸ ಹೊತ್ತಿನಂತೆ ಹೊರಟು ಒಂದು ಹರಿದಾರಿಯ ದೂರ ನಡೆದುಬಂದರು. ಅಷ್ಟುಹೊತ್ತಿಗೆ ನೆಲದಮೇಲೆ ಕಾಲೂರುವುದಕ್ಕಾಗದಹಾಗೆ ಬಿಸಿಲೇರಿ ಹೋಯಿತು. ಗುರುಗಳು ದಣಿದು ದೂಪಿಸಿ ಕಾಲುಸೋತು ತೊಡೆನಡುಗಿ ಮುಂದಕ್ಕೆ ಅಡಿಯಿಡಲಾರದೆ ಬಸವಳಿದು ಬಿದ್ದರು. ಆಗ ಶಿಷ್ಯರು ಕಳವಳಗೊಂಡು "ಅಯ್ಯೋ! ಈ ಮರಳುಗಾಡಿನಲ್ಲಿ ಚೆನ್ನಾಗಿ ಸಿಕ್ಕಿಕೊಂಡೆವಲ್ಲಾ! ನೆಳಲಲ್ಲಿ ಗುರುಗಳನ್ನು ಮಲಗಿಸುವ ಎಂದರೆ ಎತ್ತ ನೋಡಿದರೂ ನಮ್ಮ ಕಣ್ಣಿಗೆ ಮರಗಳೇ ಕಾಣುವದಿಲ್ಲವಲ್ಲಾ! ಮುಂದೇನು ಗತಿ? ಅಯ್ಯೋ ಪಾಪಿ ದೈವವೇ! ಗುರುಗಳನ್ನು ಹೀಗೆ ಕೊಲ್ಲಬೇಕೆಂದು ಎಷ್ಟು ದಿವಸದಿಂದ ಹಾರೈಸುತ್ತಿದ್ದೆ? ಬಾಡಿಗೆಯೆತ್ತಾದರೂ ಇದ್ದರೆ ಅದರ ನೆಳಲಲ್ಲಿ ಗುರುಗಳನ್ನು ಸ್ವಲ್ಪಹೊತ್ತು ಮಲಗಿಸಿಕೊಂಡಿದ್ದು ನೆಳಲಿಗೂ ಬಾಡಿಗೆಯನ್ನು ಕೊಡಬಹುದಾಗಿದ್ದಿತಲ್ಲಾ! ಈಗ ಯಾವ ದಾರಿಯೂ ತೋರುವುದಿಲ್ಲವಲ್ಲಾ! ಅಯ್ಯೋ ಸೂರ್ಯನೇ! ಮುದುಕ

ರಾದ ಗುರುಗಳ ಮೇಲೆ ನಿನ್ನ ಮೊನೆಗಾರಿಕೆಯನ್ನು ತೋರಿಸುವುದು ನ್ಯಾಯವೇ ? ಹೀಗೇಕೆ ಹೆಮ್ಮೆಯಿಂದ ಉರಿದುಹೋಗುತ್ತೀಯೆ ? ನಿನ್ನ ಹೆಮ್ಮೆ ನೆಲೆಯಾಗಿರುವುದೇ ?'' ಎಂದು ಹಲವು ತೆರವಾಗಿ ಹಲು ಬಿದರು. ಸ್ವಲ್ಪಹೊತ್ತಿನ ಮೇಲೆ ನಿದಾನವಾಗಿ ನಾಲ್ಕು ಕಡೆಯೂ ದಿ[illegible] ನೋಡಲು, ಬಹುದೂರದಲ್ಲಿ ಒಂದು ಹಳ್ಳಿ ಇದ್ದಂತೆ ಕಾಣಿಸಿತು. [illegible] ಹೇಗಾದರೂ ಮಾಡಿ ಗುರುಗಳನ್ನು ಹೊತ್ತುಕೊಂಡು ಹೋಗ ಬೇಕೆಂದು ನಿಶ್ಚಯಿಸಿ, ಕಾಲುಗಳನ್ನಿಬ್ಬರು ಕೈಗಳನ್ನಿಬ್ಬರು ತಲೆಯ ನ್ನೊಬ್ಬನು ಈ ಮೇರೆಗೆ ಐವರು ಶಿಷ್ಯರೂ ಗುರುಗಳನ್ನು ಎತ್ತಿಕೊಂಡು ಕಾಯ್ದ ಮರಳಿನಲ್ಲಿ ಅತಿಕಷ್ಟದಿಂದ ಕಾಲಿಡುತ್ತ ಬಿಸಿಲಿನಲ್ಲಿ ಬಳಲಿ ಬೆಂಡಾಗಿ ಬೆವರುಸುರಿಸುತ್ತ ಬಿಸುಸುಯ್ಯುತ್ತ ನಡೆದು ಹೋಗಿ ಆ ಹಳ್ಳಿಯ ಮೊದಲುಮನೆಯ ಜಗಲಿಯ ಮೇಲೆ ಗುರುಗಳನ್ನು ಮಲ ಗಿಸಿ, 'ಅಸ್ಸಪ್ಪಾ!' ಎಂದು ಕಾಲುಗಳನ್ನು ಹಿಸುಕಿಕೊಳ್ಳುತ್ತ ಸುತ್ತ ಕುಳಿತುಕೊಂಡರು. ಇವರು ಗುರುಗಳನ್ನು ಎತ್ತಿಕೊಂಡು ಬರುವು ದನ್ನು ಕಂಡು ಆ ಊರಿನ ಜನರು "ಈ ಮುದುಕನು ದಾರಿಯಲ್ಲಿ ಸತ್ತುಹೋಗಿರಬೇಕು. ಆದರೆ ಹೆಣವನ್ನು ಹೀಗೆ ಎತ್ತಿಕೊಂಡು ಹೋಗುವುದನ್ನು ನಾವೆಲ್ಲಿಯೂ ಕಂಡಿಲ್ಲ. ಅದು ಹಾಗಿರಲಿ. ಹೀಗೆ ಹೆಣವನ್ನು ಕಂಡವರ ಮನೆಯ ಬಾಗಿಲಲ್ಲಿಡುವುದುಂಟೇ ? ಮನೆಯವ ರಿಗೆ ತಿಳಿದರೆ ಸುಮ್ಮನೆ ಬಿಟ್ಟಾರೇ ?'' ಎಂದು ಹೇಳಿಕೊಳ್ಳುತ್ತ ಆ ಜಗ ಲಿಯ ಹತ್ತಿರ ಬಂದು ನೆರೆದರು. ಈ ಗದ್ದಲವನ್ನು ಕೇಳಿದ ಕೂಡಲೆ ಒಳಗೆ ಮಲಗಿದ್ದ ಮನೆಯ ಯಜಮಾನನು ಎಚ್ಚತ್ತು ತಟ್ಟನೆ ಎದ್ದು ಹೊರಗೆ ಓಡಿಬಂದು, ಗುರುಗಳ ಸುತ್ತ ಮೈಯ ಬೆವರನ್ನೊರಸಿ ಕೊಳ್ಳುತ್ತ ಕುಳಿತಿದ್ದ ಶಿಷ್ಯರನ್ನು ನೋಡಿ ಬಹಳ ಕೋಪದೊಡನೆ "ಎಲಾ! ನೀವು ಹೊಟ್ಟೆಗೇನು ತಿನ್ನುತ್ತೀರಿ ?'' ಎಂದನು. ಅದಕ್ಕೆ ಅವರು "ಮಾರಾಯಾ! ಏನು ಕೊಟ್ಟರೂ ತಿನ್ನುತ್ತೇವೆ. ಇದು ಅದು ಎಂದು ನೋಡಬೇಕಾದುದಿಲ್ಲ. ಹಸಿವಿನಿಂದ ಜೀವ ಹೋಗುತ್ತಿದೆ. ಬಿಸಲಿನಲ್ಲಿ ಬಹಳ ದೂರದಿಂದ ಗುರುಗಳನ್ನು ಹೊತ್ತುಕೊಂಡು ಬಂದು ದಣಿದುಹೋಗಿದ್ದೇವೆ'' ಎಂದರು. ಆಗ ಅವನು ಮತ್ತಷ್ಟು ಸಿಟ್ಟು

ಗೊಂಡು "ನಿಮಗೆ ನ್ಯಾಯ ಮೇಲೆ ಜ್ಞಾನವಿದೆಯೋ ಇಲ್ಲವೋ? ಹೆಣವನ್ನು ತಂದು ನಮ್ಮ ಮನೆಯ ಜಗಲಿಯ ಮೇಲೆ ಕೆಡಹುವು ದೆಂದರೇನು? ನಿಮಗೆ ಯಾರು ಬುದ್ಧಿ ಕಲಿಸಿದವರು? ಶುದ್ಧ ಮುಟ್ಠಾಳ ರಾಗಿದ್ದೀರಿ" ಎನಲು, ಅವರು "ಅಯ್ಯಾ! ನಿನಗೆ ನ್ಯಾಯ ಮೇಲೆ ಜ್ಞಾನವಿರುವ ಹಾಗೆ ಕಾಣುವುದಿಲ್ಲ. ಏಕೆಂದರೆ, ನಮ್ಮಲ್ಲಿ ಒಬ್ಬನಿಗೆ ಮಾತ್ರ ಮುಟ್ಠಾಳ ಎಂಬ ಹೆಸರಿರುವಾಗ ಐವರನ್ನೂ ಅದೇ ಹೆಸರಿ ನಿಂದ ಕರೆಯುತ್ತೀಯೆ. ಇದೂ ಅಲ್ಲದೆ ಮಹಾ ತಪಸ್ವಿಗಳಾದ ನಮ್ಮ ಗುರುಗಳನ್ನು ಸ್ವಲ್ಪವೂ ಅಂಜಿಕೆಯಿಲ್ಲದೆ ಹೆಣ ಎಂದು ಬಯ್ಯುತ್ತೀಯೆ. ಅಯ್ಯೋ! ಗುರುಗಳನ್ನು ಹೀಗೆ ಬಯ್ಯಬಹುದೇ? ನಿನಗೆ ದೇವರು ಒಳ್ಳೆಯದು ಮಾಡಿಯಾನೇ? ನಿನ್ನ ಮನೆ ನಿಂತೀತೇ? ನಿನ್ನ ಮಕ್ಕಳುಮರಿ ಉಳಿದಾವೇ? ನಿನ್ನ ಹೆಮ್ಮೆ ನೆಲಸೀತೆ?" ಎಂದು ಹಲವುತೆರವಾಗಿ ಕೂಗಿಕೊಂಡು ಆಕ್ಷೇಪಿಸಿದರು. ಮನೆಯ ಯಜಮಾನನು ಈ ಮಾತು ಗಳನ್ನು ಕೇಳಿ ಬೆರಗಾಗಿ ಸ್ವಲ್ಪ ಹೊತ್ತು ಸುಮ್ಮನೆ ನಿಂತುಕೊಂಡನು. ಅಷ್ಟು ಹೊತ್ತಿಗೆ ಗುರುಗಳಿಗೆ ಸ್ವಲ್ಪ ತಿಳಿವುಂಟಾಗಲು ಅವರು ಕಣ್ಣು ಬಿಟ್ಟು ನಾಲ್ಕು ಕಡೆಯನ್ನೂ ನೋಡಿ ಮೆಲ್ಲಗೆ ಎದ್ದು ಕುಳಿತು ಕೊಂಡರು. ಆಗ ಶಿಷ್ಯರು ಬಹಳ ಸಂತಸಗೊಂಡು ಗುರುಗಳ ಪಾದ ಗಳಿಗೆರಗಿ "ಸ್ವಾಮಿ! ನಮ್ಮ ಹೆತ್ತವರ ಸೈಪಿನಿಂದ ತಾವು ಎದ್ದಿರಿ" ಎಂದು ಹೇಳಿ, ಮನೆಯವನನ್ನು ನೋಡಿ "ಅಯ್ಯಾ! ನಿಮ್ಮ ಮನೆಯ ಹೆಣವು ಹೀಗೆಯೇ ಇರುವುದೋ?" ಎಂದು ಕೇಳಲು, ಆತನು "ಇವರ ಮಾತುಗಳನ್ನು ನೋಡಿದರೆ ಇವರು ಅವಿವೇಕಿಗಳೆಂಬುದರಲ್ಲಿ ಸಂದೆಗವಿಲ್ಲ. ಇವರೊಂದಿಗೆ ಜಗಳವಾಡಿ ಫಲವಿಲ್ಲ. ಇವರ ಗುರು ಮಹಾತ್ಮನಾಗಿರಬಹುದು. ಅವನಿಗೆ ಉಪಚಾರವನ್ನು ಮಾಡುವುದ ರಿಂದ ನನಗೆ ಒಳ್ಳೆಯದಾಗಬಹುದು" ಎಂದೆಣಿಸಿ, ಗುರುಗಳಿಗೆರಗಿ, "ಸ್ವಾಮಿ! ಬಹಳ ಬಳಲಿದ್ದೀರಿ. ಈ ಹೊತ್ತು ನನ್ನ ಮನೆಯಲ್ಲಿದ್ದು ಊಟಮಾಡಿ ದಣಿವನ್ನಾರಿಸಿಕೊಂಡು ನಾಳೆ ಮುಂದೆ ಪಯಣಮಾಡ ಬಹುದು. ಈ ರಾತ್ರಿ ಈ ಊರ ಅಮೃತೇಶ್ವರದೇವರಿಗೆ ಉತ್ಸವ ವಾಗುತ್ತದೆ. ಅದನ್ನೂ ನೋಡಬಹುದು" ಎಂದನು. ಈ ಮಾತಿಗೆ

ಗುರುಗಳು ಒಡಂಬಡಲು, ಮನೆಯವನು ಅವರನ್ನೂ ಶಿಷ್ಯರನ್ನೂ ಒಳಗೆ ಕರೆದುಕೊಂಡು ಹೋಗಿ ಚೆನ್ನಾಗಿ ಉಪಚರಿಸಿದನು.

ಗುರುಗಳೂ ಶಿಷ್ಯರೂ ಊಟಮಾಡಿ ಸ್ವಲ್ಪ ಹೊತ್ತು ದಣಿವಾರಿಸಿಕೊಂಡಮೇಲೆ ಮನೆಯವನು ಬಹಳ ಹಣ ಮುಟ್ಟಿಸಿ ಕಟ್ಟಿಸಿರುವ ತನ್ನ ಮನೆಯನ್ನು ಅವರಿಗೆ ತೋರಿಸಬೇಕೆಂಬ ಆಸೆಯಿಂದ ಅವರನ್ನೆಲ್ಲಾ ಸಂಗಡ ಕರೆದುಕೊಂಡು ಹೋಗಿ ಮನೆಯ ಎಲ್ಲಾ ಭಾಗಗಳನ್ನೂ ತೋರಿಸಿದನು. ಆ ಮನೆ ಒಂದರ ಹಿಂದೆ ಒಂದು, ಒಂದರ ಹಿಂದೆ ಒಂದು, ಈ ಮೇರೆ ಎಂಟು ನಿಟ್ಟುಗಳಾಗಿ ಕಟ್ಟಲ್ಪಟ್ಟಿದ್ದಿತು. ಎಲ್ಲಕ್ಕಿಂತ ಹಿಂದಣ ನಿಟ್ಟಿನಲ್ಲಿ ಮನೆಯವನು ತಾನು ಕುಳಿತುಕೊಳ್ಳುವುದಕ್ಕಾಗಿ ಬಹಳ ಅಂದವಾದ ಒಂದು ಕೋಣೆಯನ್ನು ಕಟ್ಟಿಸಿದ್ದನು. ಆ ಕೋಣೆಯಲ್ಲಿ ನೋಟಕರ ಕಣ್ಣುಗಳಿಗೆ ಸೊಗಸನ್ನು ಬೀರಿ ಮನವನ್ನು ಎಳೆದುಕೊಳ್ಳುವ ಅನೇಕ ಪದಾರ್ಥಗಳಿದ್ದುವು. ಅಂಥ ಪದಾರ್ಥಗಳನ್ನು ಅವರು ಹುಟ್ಟಿದಂದಿನಿಂದ ಎಂದೂ ನೋಡಿರಲಿಲ್ಲ. ನೋಡಿದ ಕೂಡಲೆ ಬೆಕ್ಕಸಬೆರಗಾಗಿ ಮರಗಳಂತೆ ನಿಂತುಬಿಟ್ಟರು. ಸ್ವಲ್ಪ ಹೊತ್ತಿನಮೇಲೆ ಮಡ್ಡಿ ಅಲ್ಲಿದ್ದ ಒಂದು ತಂಬೂರಿಯನ್ನು ಬೆರಲಿಂದ ತೋರಿಸಿ "ಇದೇನು ?" ಎಂದು ಮನೆಯವನನ್ನು ಕೇಳಿದನು. ಅವನು "ಇದಕ್ಕೆ ತಂಬೂರಿ ಎಂದು ಹೆಸರು ; ಸಂಗೀತಗಾರರು ಹಾಡುವಾಗ ಇದನ್ನು ಮಿಾಟಿಕೊಂಡು ಹಾಡುತ್ತಾರೆ" ಎಂದು ಹೇಳಿ, ತಾನೂ ಸಂಗೀತವನ್ನು ತಿಳಿದವನಾದುದರಿಂದ, ತಂಬೂರಿಯನ್ನು ಶ್ರುತಿಮಾಡಿ ಇವರಿಗೆ ಮಿಾಟಿ ತೋರಿಸಬೇಕೆಂದು ಬಿರಡೆಗಳನ್ನು ಬಿಗಿಯಾಗಿ ತಿರುಗಿಸಿ, ಜೀವಾಳವನ್ನು ಕಚ್ಚಿಸಿದ ಹೊರತು ನಾದವು ಇಂಪಾಗುವುದಿಲ್ಲ ಎಂದು ಎಂದುಕೊಂಡು ಜೀವಾಳವನ್ನು ತರುವುದಕ್ಕೆ ಇನ್ನೊಂದು ಕೋಣೆಗೆ ಹೋಗಲು, ಅಷ್ಟರೊಳಗೆ ಮಡ್ಡಿ "ಈ ಮನೆಯವನು ಏನೂ ತಿಳಿದವನ ಹಾಗೆ ಕಾಣುವುದಿಲ್ಲ. ಈ ತಂಬೂರಿಯನ್ನು ಮಿಾಟುವುದಕ್ಕೆ ಇಷ್ಟು ಕಷ್ಟಪಡಬೇಕೇ ? ಹಲ್ಲು ಕಚ್ಚಿಕೊಂಡು ಕೆಟ್ಟಮೋರೆ ಹಾಕಿಕೊಂಡು ತುದಿಯಲ್ಲಿರುವ ಗೂಟಗಳನ್ನು ತಿರುಗಿಸಿದರೆ ಆದೀತೇ ? ಈ ತುದಿಯನ್ನು ಎತ್ತಿ ಆ ಕಡೆಗೆ

ಬೀಳುವ ಹಾಗೆ ಒಗೆಯಬೇಡವೇ? ಇವನಿಗೆ ಇಷ್ಟು ತಿಳಿಯದೆ ಹೋಯಿತಲ್ಲಾ! ಅವನು ಬರುವುದರೊಳಗಾಗಿ ನಾನು ಈ ಕೆಲಸವನ್ನು ಮಾಡಿಬಿಟ್ಟಿದ್ದರೆ ಅವನಿಗೆ ಬಹಳ ಸಂತಸವೂ ಆಶ್ಚರ್ಯವೂ ಉಂಟಾಗುವುದರಲ್ಲಿ ಏನೇನೂ ಸಂದೇಗವಿಲ್ಲ" ಎಂದು ಆಲೋಚಿಸಿ, ತಂಬೂರಿಯ ತುದಿಯನ್ನು ಎತ್ತಿ ಆ ಕಡೆಗೆ ಎಸೆದನು. ಆ ಸದ್ದನ್ನು ಕೇಳಿ ಮನೆಯವನು ಓಡಿ ಬಂದು ನೋಡಿ "ಇದೇಕೆ ತಂಬೂರಿಯನ್ನು ಒಡೆದುಹಾಕಿದಿರಿ" ಎಂದು ಕೇಳಲು, ಮಡ್ಡಿ "ತಾವು ತಂಬೂರಿಯನ್ನು ಮೀಟುವುದಕ್ಕೆ ಪಟ್ಟ ಕಷ್ಟವನ್ನು ನೋಡಿ ನನಗೆ ಸಹಿಸಲಿಲ್ಲ. ನಮ್ಮಿಂದ ನಿಮಗೆ ಇಷ್ಟಾದರೂ ಪ್ರತ್ಯುಪಕಾರ ಬೇಡವೇ ಎಂಬ ಎಣಿಕೆಯಿಂದ ಅದನ್ನು ಒಂದು ನಿಮಿಷದಲ್ಲಿ ಮೀಟಿ ಹಾಕಿದೆನು" ಎಂದನು. ಮನೆಯವನು "ಇವನು ಒಳ್ಳೆಯ ರಸಿಕಶಿಖಾಮಣಿ" ಎಂದು ಎಂದುಕೊಂಡು ಅವರನ್ನೆಲ್ಲಾ ಕೋಣೆಯಿಂದೀಚೆಗೆ ಕರೆದುಕೊಂಡು ಬಂದನು.

ಹೊರಗೆ ಬಂದಮೇಲೆ, ಮಡೆಯನು ಬಹಳವಾಗಿ ಆಲೋಚಿಸುತ್ತ ನಿಂತಿರಲು, ಮನೆಯವನು ಅವನನ್ನು ನೋಡಿ "ಏನಯ್ಯಾ! ಬಹಳ ಆಲೋಚನೆ ಮಾಡುತ್ತ ನಿಂತಿದ್ದೀರಿ. ಮನೆ ನಿಮ್ಮ ಮನಸ್ಸಿಗೆ ಒಪ್ಪಿತೋ ಇಲ್ಲವೋ?" ಎಂದು ಕೇಳಲು, ಅದಕ್ಕೆ ಅವನು "ಎಲ್ಲಾ ಸರಿಯೇ, ಆದರೆ ಒಂದು ವಿಷಯದಲ್ಲಿ ಮಾತ್ರ ನನಗೆ ಬಹಳ ಚಿಂತೆಯುಂಟಾಗಿದೆ. ಈ ಕೊನೆಯ ನಿಟ್ಟಿನಲ್ಲಿ ನೀವಿರುವುದಕ್ಕೆ ಸ್ಥಳ ಮಾಡಿಕೊಂಡಿದ್ದೀರಲ್ಲಾ. ಒಂದುವೇಳೆ ನೀವು ತಟ್ಟನೆ ಇಲ್ಲಿ ಸತ್ತುಹೋದರೆ ನಿಮ್ಮ ಹೆಣವನ್ನು ಹೊರಗೆ ಸಾಗಿಸುವ ಕಾಲದಲ್ಲಿ ಎಷ್ಟು ಬಾಗಿಲುಗಳನ್ನು ದಾಟಿಕೊಂಡು ಹೋಗಬೇಕಾಗುತ್ತದೆ ನೋಡಿ! ಹೊತ್ತುಕೊಂಡು ಹೋಗುವವರಿಗೆ ಎಷ್ಟು ಕಷ್ಟ! ಈ ವಿಷಯವನ್ನು ಎಷ್ಟು ಹೊತ್ತಿನಿಂದ ಆಲೋಚಿಸಿದರೂ ಬಗೆಯೇ ಹರಿಯಲಿಲ್ಲ" ಎಂದನು. ಆ ಮಾತನ್ನು ಕೇಳಿದ ಕೂಡಲೆ ಮನೆಯವನಿಗೆ ಎದೆಗೆ ಶೂಲಹಾಕಿದಂತೆ ಆಗಿ ಮೊಗದಲ್ಲಿ ಮುಳಿಸು ತೋರಿತು. ಅದನ್ನು ತಿಳಿದು ಮುಟ್ಠಾಳನು "ಅಯ್ಯಾ! ನೀನು ಕೋಪಿಸಿಕೊಳ್ಳ

ಬೇಡ. ಅವನಿಗೆ ಸ್ವಲ್ಪವೂ ತಿಳಿವಳಿಕೆಯಿಲ್ಲ. ಏನೇನೂ ಆಲೋಚನೆ ಮಾಡದೆ ಬಾಯಿಗೆ ಬಂದ ಹಾಗೆ ಮಾತನಾಡಿಬಿಟ್ಟನು. ಅವನು ಹೇಳಿದುದನ್ನು ನೀನು ಮನದಲ್ಲಿ ಇಡಬೇಡ. ಹಾಗೆ ನೀನು ಈ ನಿಟ್ಟೆ ನಲ್ಲಿ ಸತ್ತುಹೋದರೆ ನಿನ್ನ ಹೆಣವನ್ನು ಇಷ್ಟು ಬಾಗಿಲುಗಳನ್ನೂ ದಾಟಿಸಿಕೊಂಡು ತೆಗೆದುಕೊಂಡು ಹೋಗಬೇಕೆಂಬ ನೇಮವೇನೂ ಇಲ್ಲ. ಈ ನಿಟ್ಟೆನ ಹಿಂದುಗಡೆ ಇರುವ ಗೋಡೆಯನ್ನು ಇಡಿದು ಹೆಣವನ್ನು ಧಾರಾಳವಾಗಿ ಏನೇನೂ ಕಷ್ಟವಿಲ್ಲದೆ ಎತ್ತಿಕೊಂಡು ಹೋಗಬಹುದು. ಇಷ್ಟು ತಿಳಿಯದೆ ಅವನು ಏನೋ ಹೇಳಿಬಿಟ್ಟರೆ ನೀನು ರೇಗುವುದುಂಟೇ ? ಅವನಿಗೆ ಬುದ್ಧಿಯಿಲ್ಲ. ಕ್ಷಮಿಸಬೇಕು" ಎಂದನು. ಮನೆಯವನಿಗೆ ಮತ್ತೂ ಅಷ್ಟು ಸಿಟ್ಟುಂಟಾಗಿ ಮೈಯೆಲ್ಲಾ ಬೆಂಕಿಯಾಗಿ ಹೋಯಿತು. ಆದರೂ ಅವನು ಕೋಪವನ್ನು ಅಡಗಿಸಿಕೊಂಡು "ನನಗೆ ಎಲ್ಲಿಯ ಶನಿಗಳು ಬಂದು ವಕ್ರಿಸಿದುವಪ್ಪಾ! ನಾನು ಇವರಿಗೆ ಮನೆ ತೋರಿಸಿದುದು 'ಕೈತೋರಿಸಿ ಅವಲಕ್ಷಣ ಎನ್ನಿಸಿಕೊಂಡೆನು' ಎಂಬ ಗಾದೆಗೆ ಸರಿಯಾಯಿತು. ಇವರ ಬಾಯಿಂದ ಎಂಥ ಶುಭವಾದ ಮಾತುಗಳು ಹೊರಟುವು! ಆಹಾ! ಇವರು ಎಂಥ ಪುಣ್ಯಪುರುಷರು" ಎಂದು ಮನಸ್ಸಿನಲ್ಲಿ ಕೊರಗಿ ಬಿಸುಸುಯ್ಯುತ್ತ ಅವರನ್ನು ಮನೆಯ ಹೊರಬಾಗಿಲಿಗೆ ಕರೆದುಕೊಂಡು ಬಂದು ಜಗಲಿಯ ಮೇಲೆ ಕುಳ್ಳಿರಿಸಿದನು.

ಮನೆಯವನಿಗೆ ನಾಲ್ಕುವರ್ಷದ ಒಂದು ಗಂಡುಮಗು ಇದ್ದಿತು ಅದಕ್ಕೆ ದಿನವೂ ಸಂಜೆಯಹೊತ್ತಿನಲ್ಲಿ ಜ್ವರವು ಬರುತ್ತ ಇದ್ದಿತು. ಅವನು ಬಾಗಿಲಲ್ಲಿ ಬಂದು ನಿಂತಕೂಡಲೆ ಅವನ ತಾಯಿ ಒಳಗಣಿಂದ ಬಂದು "ಮಗು! ನಮ್ಮ ಕಂದನಿಗೆ ಈ ಹೊತ್ತೂ ಜ್ವರ ಬಂದುಬಿಟ್ಟಿತು ; ಬಹಳ ಸಂಕಟಪಡುತ್ತ ಇದೆ" ಎಂದು ಹೇಳಿದಳು. ಆ ಮಾತನ್ನು ಕೇಳಿ ಮನೆಯವನು "ಅಯ್ಯೋ ಪಾಪ! ಅದರ ಸಂಕಟವನ್ನು ನಾನು ನೋಡಲಾರೆನಲ್ಲಾ! ಏನು ಮಾಡಲಿ? ಪಂಡಿತರು ಅಷ್ಟು ದಿವಸದಿಂದ ಔಷಧವನ್ನು ಕೊಟ್ಟರೂ ವಾಸಿಯಾಗಲಿಲ್ಲವಲ್ಲಾ. ಇನ್ನೂ ಒಂದು ಸಲ ಅವರು ಬಂದು ನೋಡಲಿ. ಇದೋ! ಅವರನ್ನು ಕರೆಯಿಸುತ್ತೇನೆ"

ಎಂದು ಹೇಳಿ, ಪಂಡಿತರನ್ನು ಕರೆಯಕಳುಹುವುದಕ್ಕೆ ಒಬ್ಬ ಆಳನ್ನು ಕೂಗಿದನು. ಆಗ ಮರುಳನು ಜಗಲಿಯಿಂದ ಎದ್ದು "ಅಯ್ಯಾ! ಪಂಡಿತರನ್ನೇಕೆ ಕರೆಯಿಸಬೇಕು? ನಮಗೆ ಏನೂ ತಿಳಿಯದು ಎಂದು ನೀವು ಭಾವಿಸಿರುವ ಹಾಗೆ ತೋರುತ್ತದೆ. ನೀವು ಹೀಗೆ ಭಾವಿಸಬಹುದೇ? ನಾನಿರುವಾಗ ಪಂಡಿತರು ಬಂದು ಔಷಧವನ್ನು ಕೊಟ್ಟರೆ ನನಗೆ ಎಷ್ಟು ಅಪಮಾನ! ನೀವೇ ಆಲೋಚಿಸಿ ನೋಡಿರಿ. ನನ್ನ ವಿದ್ಯೆಯನ್ನು ತೋರಿಸುವುದಕ್ಕೆ ಇಂಥ ಸಮಯವು ದೊರೆತೀತೇ ಎಂದು ಕಾದಿದ್ದೆನಲ್ಲಾ! ಒಳಕ್ಕೆ ನಡೆಯಿರಿ. ಒಂದು ನಿಮಿಷದಲ್ಲಿ ಜ್ವರವನ್ನು ನಿಲ್ಲಿಸುತ್ತೇನೆ" ಎಂದನು. ಆಗ ಮನೆಯವನು "ಇವನು ಒಳ್ಳೆಯ ವೈದ್ಯನಾಗಿರಬಹುದು. ಇವನ ಹಸ್ತಗುಣ ಚೆನ್ನಾಗಿರಬಹುದು. ಯಾರಾದರೇನು! ಮಗುವಿಗೆ ವಾಸಿಯಾದರೆ ಅದೇ ಬೇಕಾದುದು. ಇವನು ಎಂಥ ಗಟ್ಟಿಗನೋ ನೋಡುವ" ಎಂದು ಎಂದುಕೊಂಡು ಮರುಳನನ್ನು ಒಳಕ್ಕೆ ಕರೆದುಕೊಂಡುಹೋಗಿ ಮಗುವನ್ನು ತೋರಿಸಿದನು. ಮರುಳನು ಮಗುವಿನ ನಾಡಿಯನ್ನು ಹಿಡಿದು ನೋಡಲಿಲ್ಲ; ಮೈಯನ್ನು ಮಾತ್ರ ಮುಟ್ಟಿನೋಡಿ ಬಿಸಿಯಾಗಿದ್ದುದನ್ನು ತಿಳಿದು, "ಸಣ್ಣ ಹಗ್ಗವಿದೆಯೇ?" ಎಂದು ಮನೆಯವನನ್ನು ಕೇಳಿದನು. ಅದಕ್ಕೆ ಅವನು ಆಶ್ಚರ್ಯಪಟ್ಟು "ಹಗ್ಗವೇತಕ್ಕೆ?" ಎನ್ನಲು, ಮರುಳನು "ಹಗ್ಗವನ್ನು ಮಗುವಿನ ಸೊಂಟಕ್ಕೆ ಬಿಗಿದು ಮಗುವನ್ನು ಬಾವಿಗೆ ಬಿಟ್ಟು ಸ್ವಲ್ಪಹೊತ್ತು ನೀರಿನಲ್ಲಿ ಅದ್ದಿದರೆ ಒಡನೆ ಜ್ವರವೆಲ್ಲಾ ಓಡಿಹೋಗಿ ಮಗುವಿನ ಮೈ ಸ್ವಲ್ಪವೂ ಕಾವಿಲ್ಲದೆ ಬಾಳೆಯ ದಂಟಿನಹಾಗೆ ತಣ್ಣಗಾಗುತ್ತದೆ" ಎಂದು ಹೇಳಿದನು. ಆಗ ಮನೆಯವನು ನಸುನಗುತ್ತ "ಈ ಚಿಕಿತ್ಸೆಯಿಂದ ಎಷ್ಟು ಜನಕ್ಕೆ ಗುಣಮಾಡಿದ್ದೀರಿ?" ಎಂದು ಕೇಳಲು, ಮರುಳನು "ನನ್ನ ತಾಯಿಗೆ ಆರುತಿಂಗಳಿಂದ ಜ್ವರ ಬರುತ್ತ ಇದ್ದಿತು. ಅವಳನ್ನು ಹೀಗೆ ಹಗ್ಗದಿಂದ ಕಟ್ಟಿ ಬಾವಿಗೆ ಬಿಟ್ಟು ಮುಳುಗಿಸಲು, ಅವಳು ಸ್ವಲ್ಪವೂ ಬುದ್ಧಿಯಿಲ್ಲದೆ ಕೂಗಿಕೊಂಡಳು. ಆಗ ನೆರೆಹೊರೆಯವರು ಓಡಿಬಂದು ನಾನು ಎಷ್ಟು ತಡೆದರೂ ಲೆಕ್ಕಿಸದೆ ನನ್ನ ಕೈಯಿಂದ ಹಗ್ಗವನ್ನು ಕಿತ್ತುಕೊಂಡು ಅವಳನ್ನು ಮೇಲಕ್ಕೆ ಎತ್ತಿಹಾಕಿ

ದರು. ಇಂಥ ತಿಳಿವಳಿಕೆಯಿಲ್ಲದ ಜನಗಳೂ ಲೋಕದಲ್ಲಿ ಇದ್ದಾರಲ್ಲಾ! ನನ್ನ ತಾಯಿ ಬಹಳ ಹೊತ್ತು ಜ್ಞಾನವಿಲ್ಲದೆ ಬಿದ್ದಿದ್ದು ಆಮೇಲೆ ಎದ್ದಳು. ಮಾರನೆಯ ದಿವಸ ಎಂದಿನಂತೆ ಅವಳಿಗೆ ಜ್ವರ ಬಂದೇ ಬಂದಿತು. ಆ ಮೂಢರು ನನ್ನ ಚಿಕಿತ್ಸೆಗೆ ಅಡ್ಡಿಯಾಗಿ ಬಾರದಿದ್ದರೆ ಅವಳ ಜ್ವರವು ಹಾರಿಹೋಗುತ್ತಿದ್ದಿತು. ಅನ್ಯಾಯವಾಗಿ ಕೆಲಸವನ್ನು ಕೆಡಿಸಿದರು. ಈಗ ಹೇಳಿಕೊಂಡು ಫಲವೇನು? ನಿಮ್ಮ ಮನೆಯಲ್ಲಿ ಆ ಅವಿವೇಕಿಗಳಂತೆ ಚಿಕಿತ್ಸೆಗೆ ಅಡ್ಡಿಯಾಗಿ ಬರುವವರು 'ಯಾರೂ ಇರಲಾರರಲ್ಲವೇ?'' ಎಂದನು. ಈ ಮಾತುಗಳನ್ನು ಕೇಳಿ ಮನೆಯವನು ನಕ್ಕು ''ಪಂಡಿತರೇ! ನೀವು ಯಾರಲ್ಲಿ ವೈದ್ಯಶಾಸ್ತ್ರವನ್ನು ಕಲಿತಿರಿ?'' ಎನ್ನಲು, ಮರುಳನು ಸ್ವಲ್ಪ ಸಿಟ್ಟುಗೊಂಡು ''ನೀವು ವಿವೇಕಿಗಳು ಎಂದು ತಿಳಿದಿದ್ದೆನು. ನನ್ನ ಮಾತು ಕೇಳಿ ನೀವು ನಗುವುದನ್ನು ನೋಡಿದರೆ ನಾನು ಒಳಕ್ಕೆ ಬಂದುದೇ ತಪ್ಪು ಎಂದು ತಿಳಿಯಬೇಕಾಗಿದೆ. ನಾನು ದುಡ್ಡಿನಾಸೆ ಯಿಂದ ಚಿಕಿತ್ಸೆಮಾಡುವುದಕ್ಕೆ ಬಂದೆನೆಂದು ತಿಳಿದುಕೊಳ್ಳಬೇಡಿರಿ. ನಿಮ್ಮ ಮನೆಯ ಅನ್ನವನ್ನು ಉಂಡಿರುವುದರಿಂದ ನಿಮಗೆ ಈ ವಿಧವಾಗಿ ಯಾದರೂ ಪ್ರತ್ಯುಪಕಾರಮಾಡಬೇಕೆಂದು ಬಂದೆನೇ ಹೊರತು ಮತ್ತೆ ಬೇರೆ ಇಲ್ಲ. ನೀವು ನಕ್ಕ ಮಾತ್ರಕ್ಕೆ ನನ್ನ ಯೋಗ್ಯತೆ ಬೇರೆ ಕಡಮೆ ಯಾಗುವುದಿಲ್ಲ. ನಕ್ಕುದೂ ಅಲ್ಲದೆ ನನಗೆ ಅಪಮಾನವಾಗುವಂತೆ ''ಯಾರಲ್ಲಿ ವೈದ್ಯಶಾಸ್ತ್ರವನ್ನು ಕಲಿತಿರಿ?'' ಎಂದು ಕೇಳುತ್ತೀರಿ. ನಾನು ಸಾಧಾರಣಜನರ ಹಾಗೆ ಅವರಿವರಲ್ಲಿ ಹೋಗಿ ಕಲಿತವನಲ್ಲ. ನನ್ನ ಸ್ವಂತ ಬುದ್ಧಿಯಿಂದ ಈ ಚಿಕಿತ್ಸೆಯನ್ನು ಅಕಸ್ಮಾತ್ತಾಗಿ ಕಂಡು ಹಿಡಿದೆನು. ಅದು ಹೇಗೆಂದರೆ ಹೇಳುತ್ತೇನೆ ಕೇಳಿ: ಒಂದಾವೃತ್ತಿ ಗುರುಗಳ ಹಸುವಿಗೆ ಹುಲ್ಲು ಕೊಯ್ದುಕೊಂಡು ಬರುವುದಕ್ಕಾಗಿ ಕುಡುಗೋಲನ್ನು ತೆಗೆದುಕೊಂಡು ಒಂದು ತೋಟಕ್ಕೆ ಹೋದೆನು. ಅಲ್ಲಿ ಹುಲ್ಲನ್ನು ಕೊಯ್ದು ಒಂದು ದೊಡ್ಡ ಹೊರೆಯನ್ನು ಕಟ್ಟಿ ತಲೆಯ ಮೇಲೆ ಹೊತ್ತುಕೊಂಡು ಬರುತ್ತ ದಾರಿಯಲ್ಲಿ ಒಂದು ಕೆರೆಯ ಬಂಡೆಯ ಮೇಲೆ ಹೊರೆಯನ್ನು ಇಳಿಸಿ ಕುಡುಗೋಲನ್ನು ಅಲ್ಲಿಯೇ ಇಟ್ಟು ಕೆರೆಗಿಳಿದು ಮೊಗತೊಳೆದುಕೊಂಡು ಮೇಲಕ್ಕೆ ಬಂದು ಕುಡು

ಗೋಲಿನ ತುದಿಯನ್ನು ಹಿಡಿದು ಮೇಲಕ್ಕೆ ಎತ್ತಿದೆನು. ಅದು ಬಿಸಿಲಿನಲ್ಲಿ ಕಾಯ್ದುಹೋಗಿದ್ದುದರಿಂದ ಬೆರಲೆಲ್ಲಾ ಸುಟ್ಟುಹೋಗುವ ಹಾಗಾಯಿತು. ಒಡನೆ ಅದನ್ನು ಕೆಳಕ್ಕೆ ಬೀಸಾಡಿದೆನು. ಅದು ನೀರಿನೊಳಗೆ ಬಿದ್ದಿತು. ಸ್ವಲ್ಪಹೊತ್ತಿನ ಮೇಲೆ ಅದನ್ನು ಹುಡುಕಿ ಈಚೆಗೆ ತೆಗೆಯಲು, ತುಸವೂ ಕಾವಿಲ್ಲದೆ ತಣ್ಣಗಿದ್ದಿತು. ಆಗ ಬಹಳಮಟ್ಟಿಗೆ ಆಲೋಚನೆಮಾಡಿ ಇದು ಜ್ವರಕ್ಕೆ ಎಣೆಯಿಲ್ಲದ ಚಿಕಿತ್ಸೆ ಎಂದು ನಾನೇ ತಿಳಿದುಕೊಂಡೆನು. ಇನ್ನೊಬ್ಬರ ಹತ್ತಿರ ಹೋಗಿ ತಿಳಿದೆನೆಂದು ಎಣಿಸಬೇಡಿ'' ಎಂದನು. ಆಗ ಮನೆಯವನು ''ಶಿವ ಶಿವ! ಇಂಥ ಮೂಢನೂ ಉಂಟೆ!'' ಎಂದು ಎಂದುಕೊಂಡು, ಅವನನ್ನು ನೋಡಿ ''ನಿಮ್ಮ ಚಿಕಿತ್ಸೆಗೆ ಸಮಾನವಾದ ಚಿಕಿತ್ಸೆಯೇ ಇಲ್ಲ. ಇದನ್ನು ನಾನು ಚೆನ್ನಾಗಿ ಬಲ್ಲೆನು. ಆದರೂ ತಮಗೆ ಶ್ರಮಕೊಡುವುದಕ್ಕೆ ನನಗೆ ಇಷ್ಟವಿಲ್ಲ. ಈಚೆಗೆ ದಯಮಾಡಿ'' ಎಂದು ಅವನನ್ನು ಹೊರಕ್ಕೆ ಕರೆದು ತಂದುಬಿಟ್ಟು, ಆಳನ್ನು ಕೂಗಿ ಪಂಡಿತರನ್ನು ಕರೆಯ ಕಳುಹಿ ಅವರು ಬಂದಮೇಲೆ ಮಗುವಿಗೆ ಔಷಧವನ್ನು ಕೊಡಿಸಿದನು.

ಅಷ್ಟುಹೊತ್ತಿಗೆ ಹೊತ್ತು ಮುಳುಗಿ ಎರಡು ಗಳಿಗೆಯಾಗಿದ್ದಿತು. ಮನೆಯವನು ಅವರನ್ನು ನೋಡಿ ''ಉತ್ಸವವು ಆರಂಭವಾಗಿದೆ. ದೇವಸ್ಥಾನಕ್ಕೆ ಹೋಗಿ ನೋಡಿಕೊಂಡು ಬರಬಹುದು'' ಎನ್ನಲು, ಶಿಷ್ಯರು ಗುರುಗಳನ್ನು ನೋಡಿ ''ತಾವು ಬಹಳ ದಣಿದಿದ್ದೀರಿ, ಇಲ್ಲಿಯೇ ಮಲಗಿಕೊಂಡಿರಿ, ನಾವು ಹೋಗಿ ಈಗಲೇ ಬಂದುಬಿಡುತ್ತೇವೆ'' ಎಂದು ಹೇಳಿ ಅವರ ಅಪ್ಪಣೆಯನ್ನು ಪಡೆದುಕೊಂಡು ಹೊರಟರು. ಮನೆಯವನು ''ಈ ಮುಕ್ಕಗಳು ಹೋಗಿ ಬೀದಿಯಲ್ಲಿಯೂ ದೇವಸ್ಥಾನದಲ್ಲಿಯೂ ಏನು ಚೇಷ್ಟೆಮಾಡುತ್ತವೆಯೋ ತಿಳಿಯಲಿಲ್ಲ'' ಎಂದು ಆಲೋಚಿಸುತ್ತಿದ್ದನು. ಅವರು ಬೀದಿಯಲ್ಲಿ ಮಂಕನನ್ನು ಮುಂದಾಳಾಗಿ ಬಿಟ್ಟುಕೊಂಡು ಒಯ್ಯಾರದೊಡನೆ ಜಗ್ಗುಹಾಕುತ್ತ ನಡೆದುಹೋಗುತ್ತಿದ್ದರು. ಉತ್ಸವದಿವಸವಾದುದರಿಂದ ಬೀದಿಯಲ್ಲಿ ಜನರು ಎಲ್ಲೆಲ್ಲಿಯೂ ಗುಂಪುಗುಂಪಾಗಿ ಓಡಾಡುತ್ತಿದ್ದರು. ಗುಂಪಿನಲ್ಲಿ ಹೋಗುತ್ತಿದ್ದಾಗ ಒಬ್ಬನ ಕೈ ಮಂಕನ ಮೈ

ಯನ್ನು ಸೋಕಿತು. ಆಗ ಮಂಕನು ಅವನನ್ನು ಕುರಿತು "ಏನೋ? ಬುದ್ಧಿಯಿಲ್ಲದವನಾಗಿದ್ದೀಯೆ. ನಿನಗೆ ಮೈಯಮೇಲೆ ಜ್ಞಾನವಿದೆಯೋ ಇಲ್ಲವೋ? ದೊಡ್ಡ ಮನುಷ್ಯರು ಬರುತ್ತಾರೆ ಎಂಬುದು ಕಾಣುವು ದಿಲ್ಲವೇ? ಅರುಗಾಗಿ ಹೋಗುವುದಕ್ಕೇನು?" ಎಂದು ಗದರಿಸಿದನು. ಅದಕ್ಕೆ ಅವನು ಸಿಟ್ಟುಗೊಂಡು "ತೊತ್ತಿನ ಮಗನೇ! ನೀನೇ ಅರು ಗಾಗಿ ಹೋಗಬಾರದೋ? ನಿನಗೇನು ಕಿರೀಟ ಕಿತ್ತಿರುವುದು?" ಎಂದನು. ಆ ಮಾತನ್ನು ಕೇಳಿ ಮಂಕನು ಬಹಳ ಕೋಪಗೊಂಡು "ಗಾಂಪರೊಡೆಯರ ಶಿಷ್ಯನಾಗಿಯೂ ಕುಲಸ್ತ್ರೀಯ ಮಗನಾಗಿಯೂ ಮಂಕನೆಂದು ಪ್ರಸಿದ್ಧನಾಗಿಯೂ ಇರುವ ನನ್ನನ್ನು ತೊತ್ತಿನ ಮಗನೇ ಎಂದು ಕರೆಯುತ್ತೀಯಾ? ನಿನಗೇನೋ ಗ್ರಹಚಾರ ಕಡಮೆಯಾಗಿದೆ. ನಡೆ, ನ್ಯಾಯಾಧಿಪತಿಯ ಬಳಿಗೆ ಹೋಗುವ" ಎನ್ನಲು, ಮರುಳ ಮೊದಲಾದವರು ಅವನನ್ನು ಹಿಡಿದುಕೊಂಡರು. ಬಳಿಕ ಐವರೂ ಸೇರಿ ಅವನನ್ನು ಹಿಗ್ಗ ಮುಗ್ಗ ಎಳೆದು ನ್ಯಾಯಾಧಿಪತಿಯ ಚಾವಡಿಗೆ ಕರೆದು ಕೊಂಡು ಹೋಗಿ ತಮ್ಮ ಮೊರೆಯನ್ನು ಹೇಳಿಕೊಂಡರು. ನ್ಯಾಯಾಧಿ ಪತಿ ಬಯ್ದವನನ್ನು ನೋಡಿ "ಎಲಾ! ನೀನು ಇವನನ್ನು ತೊತ್ತಿನ ಮಗನೇ ಎಂದು ಕರೆಯಬಹುದೇ?" ಎನ್ನಲು, ಅವನು "ಸ್ವಾಮಿ! ನಾನು ಅವಸರವಾಗಿ ಹೋಗುತ್ತಿದ್ದೆನು. ಇವನು ಇದಿರಿಗೆ ಬರು ತ್ತಿದ್ದನು. ನನ್ನ ಕೈ ಇವನಮೇಲೆ ಸೋಕಿತು. ಅದಕ್ಕೆ ಇವನು ನನ್ನನ್ನು ಬುದ್ಧಿಯಿಲ್ಲದವನು ಎಂದನು. ನನಗೆ ಕೋಪ ಬಂದಿತು; ತೊತ್ತಿನ ಮಗನೇ ಎಂದೆನು" ಎಂದು ಹೇಳಿದನು. ಬಳಿಕ ನ್ಯಾಯಾಧಿಪತಿ ಮಂಕ ನನ್ನು ನೋಡಿ "ನಿನ್ನಲ್ಲಿಯೂ ತಪ್ಪಿದೆ; ಅವನಲ್ಲಿಯೂ ತಪ್ಪಿದೆ. ಅವನ ತಪ್ಪು ನಿನ್ನದಕ್ಕಿಂತ ಸ್ವಲ್ಪ ಹೆಚ್ಚಾದುದು. ಆದರೆ ನಿನ್ನ ತಪ್ಪು ಇಲ್ಲದಿದ್ದರೆ ಅವನ ತಪ್ಪು ಹುಟ್ಟುತ್ತಲೇ ಇರಲಿಲ್ಲ. ಈಗ ಏನು ಮಾಡ ಬೇಕೆನ್ನುತ್ತೀಯೆ?" ಎಂದು ಕೇಳಲು, ಮಂಕನು "ಸ್ವಾಮಿ! ಅವ ನನ್ನು ಶಿಕ್ಷಿಸಬೇಕೆಂಬುದು ನನ್ನ ಕೋರಿಕೆಯಲ್ಲ. ಹಲವು ಜನರು ನೆರೆದಿದ್ದ ಬೀದಿಯಲ್ಲಿ ಇವನು ನನ್ನನ್ನು ತೊತ್ತಿನಮಗನೇ ಎಂದುದ ರಿಂದ ಎಲ್ಲರೂ ನನ್ನನ್ನು ಈ ಹೆಸರಿಂದಲೇ ಕರೆಯಬಹುದು. ಅದನ್ನು

ತಪ್ಪಿಸುವುದಕ್ಕೆ ತಾವು 'ಕುಲಸ್ತ್ರೀಯ ಮಗನೆಂದು ಹೇಳಿಕೊಳ್ಳುವ ಮಂಕನನ್ನು ಇಂದು ಮೊದಲುಗೊಂಡು ಯಾರೂ ತೊತ್ತಿನ ಮಗನೆಂದು ಹೇಳಕೂಡದು' ಎಂಬುದಾಗಿ ಈ ಊರಿನ ಬೀದಿಬೀದಿಯಲ್ಲಿಯೂ ಡಂಗುರವನ್ನು ಹೊಯ್ಸಿದರೆ ನನಗೆ ಬಹಳ ಉಪಕಾರಮಾಡಿದಂತಾಗುವುದು" ಎಂದನು. ನ್ಯಾಯಾಧಿಕಾರಿ ನಕ್ಕು 'ಹಾಗೆಯೇ ಆಗಲಿ' ಎಂದು ಅಪ್ಪಣೆ ಮಾಡಲು ಊರಲ್ಲೆಲ್ಲಾ ಡಂಗುರವನ್ನು ಹೊಯ್ದರು. ಇದರಿಂದ, ಸ್ನಾನಮಾಡುವುದಕ್ಕೆ ಹೋಗಿ ಕೆಸರು ಬಳಿದುಕೊಂಡು ಬಂದಹಾಗೆ, ಮಂಕನು ತಪ್ಪಿಸಿಕೊಳ್ಳಬೇಕೆಂದಿದ್ದ ತೊತ್ತಿನ ಮಗನು ಎಂಬ ಹೆಸರನ್ನೇ ತನಗೆ ನಿಜವಾದ ಹೆಸರಾಗಿ ಮಾಡಿಕೊಂಡ ಹಾಗಾಯಿತು. ತರುವಾಯ ಈ ಐವರೂ ಚಾವಡಿಯಿಂದ ಹೊರಟು ಜನಗಳ ಪರಿಹಾಸಕ್ಕೆ ಗುರಿಯಾಗಿ ಬೇಗಬೇಗನೆ ದೇವಸ್ಥಾನಕ್ಕೆ ಬಂದು ಸೇರಿದರು.

ಬಳಿಕ ದೇವರ ದರ್ಶನಮಾಡುವುದಕ್ಕೋಸ್ಕರ ಒಳಕ್ಕೆ ಹೋದರು. ಅಮೃತೇಶ್ವರಲಿಂಗವು ಬಹಳ ದೊಡ್ಡದಾಗಿದ್ದಿತು. ಅದನ್ನು ನೋಡಿ ಮಂಕನು "ಅಪ್ಪಪ್ಪಾ! ಎಷ್ಟು ದೊಡ್ಡ ದೇವರು!" ಎಂದನು. ಮರುಳನು "ಓಹೋ! ಒಂದಾಳು ತಬ್ಬುವುದಕ್ಕಾಗುವುದಿಲ್ಲವಲ್ಲಾ!" ಎಂದು ಹೇಳಿದನು. ಮುಟ್ಠಾಳನು "ಈ ದೇವರ ಅಭಿಷೇಕಕ್ಕೆ ಎಷ್ಟೆಣ್ಣೆಯಾದರೂ ಸಾಲದು. ಹೇಗೆ ಎಣ್ಣೆಯನ್ನು ಒದಗಿಸುತ್ತಾರೋ ನಾನು ಬೇರೆ ಕಾಣೆನು" ಎಂದನು. ಮಡೆಯನು "ಆಹಾ! ಹತ್ತು ಮಳ ಬಟ್ಟೆಯನ್ನು ತಂದರೂ ಈ ದೇವರಿಗೆ ಒಂದು ಸುತ್ತಿಗೆ ಸಾಲುವುದಿಲ್ಲ" ಎಂದು ನುಡಿದನು. ಮಡ್ಡಿ "ಓಹೋಹೊ! ಎಷ್ಟು ದೊಡ್ಡ ಕಲ್ಲು! ಒಂದು ಬೆಟ್ಟವನ್ನೇ ಕೆತ್ತಿ ಇದನ್ನು ಮಾಡಿರಬೇಕು" ಎಂದನು. ಮಡ್ಡಿಯ ಮಾತನ್ನು ಕೇಳಿದ ಕೂಡಲೆ ಪೂಜಾರಿಗೆ ಬಹಳ ಸಿಟ್ಟುಂಟಾಯಿತು. ಮಡ್ಡಿಯ ಹತ್ತಿರ ಬಂದು "ಎಲಾ! ದೇವರನ್ನು ಕಲ್ಲೆನ್ನುತ್ತೀಯಾ?" ಎಂದು ಅವನ ಕೆನ್ನೆಗೆ ಪಠೀರೆಂದು ಒಂದೇಟನ್ನು ಕೊಟ್ಟು ಎಲ್ಲರನ್ನೂ ಬೈದು ಆಚೆಗೆ ಅಟ್ಟಿಬಿಟ್ಟನು. ಅವರು ಅಲ್ಲಿಂದ ಹೊರಟು ಉತ್ಸವದೇವರನ್ನು ಬಿಜಯಮಾಡಿಸಿದ್ದ ಮಂಟಪಕ್ಕೆ ಬಂದರು. ಅಲ್ಲಿ

ದೇವರಿದಿರಿಗೆ ಸೂಳೆಯ ಕುಣಿತವಾಗುತ್ತಿದ್ದಿತು; ಎಲ್ಲರೂ ಸೂಳೆಯ ಮೇಲೆಯೇ ಕಣ್ಣಾಗಿ ನೋಡುತ್ತ ಕುಳಿತಿದ್ದರು. ಇವರೂ ಹೋಗಿ ಒಂದು ಕಡೆ ಕುಳಿತುಕೊಂಡರು. ಆ ಮಂಟಪದಲ್ಲಿ ‘ಲಸ್ತರು,’ ‘ಗುಳೋಪು,’ ‘ಕಂದೀಲು,’ ಯಾವುದೂ ಇರಲಿಲ್ಲ. ನಾಲ್ಕೈದು ಹಣತೆಗಳು ಮಾತ್ರ ಮಿಣಮಿಣನೆ ಉರಿಯುತ್ತಿದ್ದುವು. ಸೂಳೆಯ ಹಾವಭಾವವಿಲಾಸಗಳೂ ಅಭಿನಯವೂ ಚೆನ್ನಾಗಿ ಸಭೆಯವರಿಗೆ ಕಾಣ ಬರುವುದಕ್ಕಾಗಿ ಅವಳ ಎಡಬಲಗಳಲ್ಲಿ ಇಬ್ಬರು ದೀವಟಿಗೆಗಳನ್ನು ಹಿಡಿದು ಕೊಂಡು ಅವಳು ಮುಂದಕ್ಕೆ ಹೋದರೆ ತಾವೂ ಹೋಗುತ್ತ, ಹಿಂದಕ್ಕೆ ಬಂದರೆ ತಾವೂ ಬರುತ್ತ, ಯಾವಕಡೆಗೆ ತಿರುಗಿದರೆ ಆ ಕಡೆಗೆ ದೀವಟಿಗೆ ಗಳನ್ನು ತಿರುಗಿಸಿ ಹಿಡಿಯುತ್ತ ಇದ್ದರು. ಇದನ್ನು ನೋಡಿ ಮಡ್ಡಿ “ಇವಳು ಬಹಳ ಜಾಣೆ. ಆ ಇಬ್ಬರೂ ಇವಳನ್ನು ಸುಡುವುದಕ್ಕೆ ಏನೇನೋ ಪ್ರಯತ್ನಮಾಡಿ ತಲೆಕೆಳಗಾಗಿ ಬೀಳುತ್ತಾರೆ. ಆದರೂ ಇವಳು ಮುಂದಕ್ಕೂ ಹಿಂದಕ್ಕೂ ಆ ಕಡೆಗೂ ಈ ಕಡೆಗೂ ಹೋಗಿ ಅವರಿಗೆ ಸ್ವಲ್ಪವೂ ಅವಕಾಶಕೊಡದೆ ತಪ್ಪಿಸಿಕೊಳ್ಳುತ್ತ ಇದ್ದಾಳೆ. ಇನ್ನೆಷ್ಟೇ ಜಾಣೆಯಾದರೂ ಎಷ್ಟುಹೊತ್ತು ತಪ್ಪಿಸಿಕೊಂಡಾಳು? ನೋಡಬೇಕು” ಎಂದು ಮನದಲ್ಲಿ ಆಲೋಚಿಸುತ್ತಿದ್ದನು. ಸ್ವಲ್ಪ ಹೊತ್ತಿನಮೇಲೆ ಅವಳು ಮೂರ್ಛಾವಸ್ಥೆಯನ್ನು ಅಭಿನಯಿಸುವುದಕ್ಕಾಗಿ ಒಂದು ಕಡೆಗೆ ಸ್ವಲ್ಪ ಬಾಗಿ ಕದಲದೆ ನಿಂತಿದ್ದಳು. ಆಗ ಮಡ್ಡಿ ದೀವಟಿಗೆ ಯವರನ್ನು ನೋಡಿ “ಈಗ ಸೀಯಿರೋ! ಈಗ ಸೀಯಿರೋ! ಅಯ್ಯೋ! ನಿಮಗೆ ಬುದ್ಧಿಯೇ ಇಲ್ಲವಲ್ಲಾ! ಈಗ ಬಿಟ್ಟರೆ ತಿರುಗಿ ಸಿಕ್ಕಾಳೇ?” ಎಂದು ಕೂಗಿಕೊಂಡನು. ಅದನ್ನು ಕೇಳಿದಕೂಡಲೆ ಸೂಳೆ ಬೆಚ್ಚಿಕೊಂಡು ಕಣ್ಣನ್ನು ಅಗಲವಾಗಿ ಬಿಟ್ಟು ಸುತ್ತಲೂ ನೋಡಿ ದಳು; ಅಲ್ಲಿದ್ದ ಜನರೆಲ್ಲಾ ಪಕ್ಕನೆ ನಕ್ಕರು. ಅವರಲ್ಲಿ ಒಬ್ಬನು ಮಡ್ಡಿ ಯನ್ನು ನೋಡಿ “ಅಯ್ಯಾ! ನೀನು ಭರತಾಚಾರ್ಯರ ಅಪರಾವತಾರವೇ ಸರಿ. ಕೋಟಿ ರೂಪಾಯಿ ಕೊಟ್ಟರೂ ನಿನ್ನಂಥ ರಸಿಕನು ಜಗದಲ್ಲಿ ದೊರೆಯಲಾರನು. ನಿನ್ನ ತಂದೆತಾಯಿಗಳು ಬಹಳ ಪುಣ್ಯಾತ್ಮರು. ಅವರ ಪುಣ್ಯವನ್ನು ಇಷ್ಟಿಷ್ಟೆಂದು ಹೇಳಲು ಯಾರಿಗೂ ಸಾಧ್ಯವಲ್ಲ”

ಎಂದನು. ಮತ್ತೊಬ್ಬನು ಬಹಳ ಸಿಟ್ಟುಗೊಂಡು "ಹೀಗೆ ಮಾತನಾಡಿದರೆ ಆ ಮೃಗಕ್ಕೆ ಗೊತ್ತಾಗುತ್ತದೆಯೇ?" ಎಂದು ಮಡ್ಡಿಯನ್ನು ಕುರಿತು "ಎಲಾ! ತಿರುಗಿ ಏನಾದರೂ ಮಾತುಗೀತಾಡಿದೆಯೋ ಕತ್ತು ಹಿಡಿದು ಆಚೆಗೆ ದಬ್ಬಿಬಿಡುತ್ತೇನೆ. ಸದ್ದುಮಾಡದೆ ಕುಳಿತಿರು. ಇಲ್ಲದಿದ್ದರೆ ಎದ್ದು ತೊಲಗಿಹೋಗು" ಎಂದು ಗದರಿಸಿದನು. ಅದನ್ನು ಕೇಳಿ ಮಡ್ಡಿ ತನ್ನ ಮನದಲ್ಲಿ "ಈ ಊರ ಜನರು ಬುದ್ಧಿಯಿಲ್ಲದವರು. ನಾನು ಉಪಾಯವನ್ನು ಹೇಳಿಕೊಟ್ಟರೆ ನನ್ನನ್ನೇ ಬೈಯುತ್ತಾರೆ. ನನಗೇನು? ದೀವಟಿಗೆಯವರು ಬೆಳಗಿನವರೆಗೆ ಹಿಂದೆಮುಂದೆ ಓಡಾಡಿ ಕಾಲುಸೋತು ಕೆಳಕ್ಕೆ ಬೀಳಲಿ. ಒಳ್ಳೆಯ ಸಮಯವನ್ನು ಕಳೆದುಕೊಂಡರು. ಇನ್ನುಮೇಲೆ ಬೇರೆ ಅವಳನ್ನು ಸೀಯಲಾರರು" ಎಂದು ಎಂದುಕೊಂಡು ಸುಮ್ಮನೆ ಕುಳಿತಿದ್ದನು.

ಹೀಗಿರಲು ನಟ್ಟುವನು ಬಾಜೈಸುತ್ತಿದ್ದ ಮದ್ದಳೆಯನ್ನು ಮುಟ್ಠಾಳನು ಬಹಳ ಹೊತ್ತಿನಿಂದ ದೃಷ್ಟಿಸಿ ನೋಡುತ್ತ ಇದ್ದು ತನ್ನ ಮಗ್ಗುಲಲ್ಲಿ ಕುಳಿತಿದ್ದ ಮಡೆಯನ ಕಿವಿಯಲ್ಲಿ "ಇದರೊಳಗೆ ಯಾವನೋ ಒಬ್ಬನು ಇರಬೇಕು. ಇಲ್ಲದಿದ್ದರೆ ಹೀಗೆ ಸದ್ದಾಗುವುದೇ?" ಎಂದು ಹೇಳಿದನು. ಅದಕ್ಕೆ ಮಡೆಯನು "ಅಹುದು, ನನಗೂ ಹಾಗೆಯೇ ತೋರುತ್ತದೆ. ಸುಮ್ಮನಿರು. ಇದೆಲ್ಲಾ ಆದಮೇಲೆ ಪರಿಕಿಸಿನೋಡುವ" ಎಂದು ಮೆಲ್ಲಗೆ ಆತನ ಕಿವಿಯಲ್ಲಿ ಉಸಿರಿದನು. ಸ್ವಲ್ಪಹೊತ್ತಿನಮೇಲೆ ಕುಣಿತವು ಮುಗಿಯಿತು. ಉತ್ಸವದೇವರನ್ನು ಮಂಟಪದಿಂದ ಗರ್ಭಗೃಹಕ್ಕೆ ಬಿಜಯಮಾಡಿಸಿಕೊಂಡು ಹೋದರು. ಬಳಿಕ ಜನರೆಲ್ಲಾ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು. ಆ ಗದ್ದಲದಲ್ಲಿ ಮುಟ್ಠಾಳನೂ ಮಡೆಯನೂ ಕೆಳಗೆ ಇಟ್ಟಿದ್ದ ಮದ್ದಳೆಯನ್ನು ಯಾರಿಗೂ ತಿಳಿಯದಂತೆ ಎತ್ತಿಕೊಂಡು ಹೋಗಿ ಕತ್ತಲೆಯಾಗಿದ್ದ ಒಂದು ಮೂಲೆಯಲ್ಲಿ ಅದನ್ನು ಇಟ್ಟುಕೊಂಡು ಅವಿತುಕೊಂಡಿದ್ದರು. ಗದ್ದಲವೆಲ್ಲಾ ಅಡಗಿದಮೇಲೆ ಅವರು ಮದ್ದಳೆಯ ಆ ಪಕ್ಕದಲ್ಲಿ ಒಬ್ಬನು ಈ ಪಕ್ಕದಲ್ಲಿ ಒಬ್ಬನು ಈ ಮೇರೆಗೆ ಕುಳಿತುಕೊಂಡರು. ಬಳಿಕ ಮುಟ್ಠಾಳನು ಮಡೆಯನನ್ನು ನೋಡಿ "ತಮ್ಮಾ! ಈ ಪಕ್ಕದಲ್ಲಿ ತೂತುಮಾಡಿ ನಾನು ಕೈಹಾಕು

ತ್ತೇನೆ; ಆ ಪಕ್ಕದಲ್ಲಿ ತೂತುಮಾಡಿ ನೀನು ಕೈಹಾಕು; ಒಳಗೆ ಇರುವವನನ್ನು ಹಿಡಿದುಕೊಳ್ಳುವ. ಎಚ್ಚರಿಕೆಯಾಗಿರು. ಅವನೆಲ್ಲಿಯಾದರೂ ತಪ್ಪಿಸಿಕೊಂಡು ಹೊರಟು ಹೋದಾನು" ಎಂದು ಮೆಲ್ಲಗೆ ನುಡಿದನು. ಮಡೆಯನು "ಹಾಗೆಯೇ ಆಗಲಿ" ಎಂದ ಬಳಿಕ, ಮುಟ್ಠಾಳನು ಮದ್ದಳೆಯ ಒಂದು ಪಕ್ಕದ ಚರ್ಮವನ್ನು ಹರಿದು ಕೈಯನ್ನು ಒಳಕ್ಕೆ ನುಗ್ಗಿಸಿದನು. ಮಡೆಯನು ಮತ್ತೊಂದು ಪಕ್ಕದ ಚರ್ಮವನ್ನು ಹರಿದು ಕೈಯನ್ನು ಒಳಕ್ಕೆ ನುಗ್ಗಿಸಿ ಮುಂದೆ ನುಗ್ಗಿಸಿದ್ದ ಮುಟ್ಠಾಳನ ಕೈಯನ್ನು ಬಿಗಿಯಾಗಿ ಹಿಡಿದುಕೊಂಡು "ಸಿಕ್ಕಿದನು! ಸಿಕ್ಕಿದನು! ನೀನು ಎಲ್ಲಿಯಾದರೂ ಬಿಟ್ಟುಬಿಟ್ಟೀಯೆ!" ಎಂದು ಸಂತಸದಿಂದ ಕೂಗಿಕೊಂಡನು. ಆಗ ಅದುವರೆಗೂ ಮದ್ದಳೆಯನ್ನು ಹುಡುಕುತ್ತಿದ್ದ ಜನರು ಈ ಸದ್ದನ್ನು ಕೇಳಿ ದೀಪವನ್ನು ತೆಗೆದುಕೊಂಡು ಅಲ್ಲಿಗೆ ಬಂದು ನೋಡಿ "ಇದೋ! ಮದ್ದಳೆಯನ್ನು ಕದ್ದ ಕಳ್ಳರು ಇಲ್ಲಿದ್ದಾರೆ. ಹಿಡಿದುಕೊಳ್ಳಿರಿ" ಎಂದು ಕೂಗಿಕೊಂಡರು. ಹತ್ತಿರ ಬಂದು ನೋಡುವಲ್ಲಿ ಮದ್ದಳೆ ಹರಿದು ಹೋಗಿದ್ದಿತು. ಮುಟ್ಠಾಳನೂ ಮಡೆಯನೂ ಒಬ್ಬನ ಕೈಯನ್ನೊಬ್ಬನು ಹಿಡಿದುಕೊಂಡು ಕದಲದೆ ಅಲ್ಲಿಯೇ ಕುಳಿತಿದ್ದರು. ಮದ್ದಳೆ ಹರಿದಿರುವುದನ್ನು ನೋಡಿ ಆ ಜನರಿಗೆ ಬಹಳ ಸಿಟ್ಟುಂಟಾಗಿ ಈ ಇಬ್ಬರನ್ನೂ ಬಹಳವಾಗಿ ಹೊಡೆದರು. ಆದರೂ ಅವರು ಆ ಸ್ಥಳವನ್ನು ಬಿಟ್ಟು ಏಳಲಿಲ್ಲ. ಆಗ ದೇವಸ್ಥಾನದ ಅಧಿಕಾರಿ ಅವರನ್ನು ನೋಡಿ "ಮದ್ದಳೆಯನ್ನು ಎತ್ತಿಕೊಂಡು ಬಂದು ಏಕೆ ಹರಿದಿರಿ? ಇದರ ಬೆಲೆ ಹತ್ತು ಹೊನ್ನಾಗುತ್ತದೆ. ಅಷ್ಟು ಹಣವನ್ನು ಕೊಟ್ಟರೆ ಸರಿ. ಇಲ್ಲದಿದ್ದರೆ ನಿಮ್ಮನ್ನು ಚಾವಡಿಗೆ ಕಳುಹಿಸುತ್ತೇನೆ" ಎಂದನು. ಅದಕ್ಕೆ ಅವರು "ನಾವು ಹುಡುಗಾಟಕ್ಕಾಗಿ ಹರಿಯಲಿಲ್ಲ. ಇದರೊಳಗಿದ್ದುಕೊಂಡು ಸದ್ದುಮಾಡುವ ಮನುಷ್ಯನನ್ನು ಹಿಡಿವುದಕ್ಕಾಗಿ ಹರಿದೆವು. ಇದೋ! ಅವನ ಕೈ ನಮಗೆ ಸಿಕ್ಕಿದೆ ನೋಡಿ" ಎಂದರು. ಆ ಮಾತನ್ನು ಕೇಳಿ ಆ ಅಧಿಕಾರಿ ನಕ್ಕು, ಅವರನ್ನು ದೇವಸ್ಥಾನದಿಂದ ಆಚೆಗೆ ಎಳೆದುಕೊಂಡು ಹೋಗಿ, "ಏನು ಹೇಳುತ್ತೀರಿ? ಹೊನ್ನು ಕೊಡುತ್ತೀರೋ ಚಾವಡಿಗೆ ಹೋಗುತ್ತೀರೋ?" ಎಂದು ಕೇಳಿದನು.

ಅವರು "ನಮ್ಮಲ್ಲಿ ಹೊನ್ನಿಲ್ಲ; ನಮ್ಮ ಗುರುಗಳಲ್ಲಿದೆ" ಎಂದರು. ಆಗ ಅಧಿಕಾರಿ ಆ ಜನರನ್ನು ನೋಡಿ "ಇವರನ್ನು ಚಾವಡಿಗೆ ಎಳೆದುಕೊಂಡು ಹೋಗಿ" ಎಂದು ಹೇಳಿ ತನ್ನ ಮನೆಗೆ ಹೊರಟುಹೊದನು. ಆಮೇಲೆ ಆ ಜನರು ಈ ಇಬ್ಬರನ್ನೂ ಬೈಯುತ್ತ ಹೊಡೆಯುತ್ತ ಬೀದಿಯಲ್ಲಿ ಹಿಗ್ಗ ಮುಗ್ಗ ಎಳೆದುಕೊಂಡು ಹೋಗುತ್ತಿದ್ದರು. ಗಾಂಪರೊಡೆಯರು ಇಳಿದಿದ್ದ ಮನೆಯ ಹತ್ತಿರ ಬಂದಾಗ ಮುಟ್ಠಾಳನೂ ಮಡೆಯನೂ ಮನೆಯ ಜಗಲಿಯಮೇಲೆ ಗುರುಗಳೂ ಮಂಕ ಮರುಳ ಮಡ್ಡಿಗಳೂ ಕುಳಿತಿರುವುದನ್ನು ಕಂಡು "ಅಯ್ಯೋ! ಗುರುಗಳೇ! ಗಾಂಪರೊಡೆಯರೇ! ಇವರು ನಮ್ಮನ್ನು ಅನ್ಯಾಯವಾಗಿ ಕೊಲ್ಲುತ್ತಾರಲ್ಲಾ! ಕರುಣೆಯಿಲ್ಲದೆ ಹೀಗೆ ನೋಡುತ್ತಿರಬಹುದೇ? ಹೊನ್ನುಕೊಟ್ಟು ನಮ್ಮನ್ನು ಕಾಪಾಡಬಾರದೇ!" ಎಂದು ಗಟ್ಟಿಯಾಗಿ ಕೂಗಿಕೊಂಡರು. ಆ ಕೂಗನ್ನು ಕೇಳಿ ಗುರುಗಳು ತಟ್ಟನೆ ಎದ್ದುಬಂದು ನಡೆದ ಸಂಗತಿಯನ್ನೆಲ್ಲಾ ವಿಚಾರಿಸಿ ನಿಟ್ಟುಸಿರುಬಿಟ್ಟು, ಹತ್ತು ಹೊನ್ನುಗಳನ್ನು ತೆತ್ತು ಶಿಷ್ಯರನ್ನು ಬಿಡಿಸಿದರು. ಬಳಿಕ ಮುಟ್ಠಾಳನೂ ಮಡೆಯನೂ ಜಗಲಿಯಮೇಲೆ ಕುಳಿತುಕೊಂಡು ಮೈಯನ್ನು ಮುಟ್ಟಿಮುಟ್ಟಿ ನೋಡಿಕೊಳ್ಳುತ್ತ ಉತ್ಸವದಲ್ಲಿ ತಾವು ನೋಡಿದ ವಿಶೇಷಗಳನ್ನು ಹೇಳುತ್ತಿದ್ದರು.

ಮನೆಯವನು ನಡೆದ ಸಂಗತಿಯನ್ನೆಲ್ಲಾ ಕೇಳಿ "ಈ ಮೂಢರನ್ನು ದೇವರೇ ಕಾಪಾಡಬೇಕು!" ಎಂದು ಎಂದುಕೊಂಡು "ಊಟಕ್ಕೆ ಬನ್ನಿ" ಎಂದು ಅವರನ್ನು ಒಳಕ್ಕೆ ಕರೆದನು. ಅವರೆಲ್ಲರೂ ಹೋಗಿ ಊಟಮಾಡುತ್ತಿದ್ದಾಗ ಮಂಕನಿಗೆ ಅನ್ನದಲ್ಲಿ ಒಂದು ಕಲ್ಲು ಸಿಕ್ಕಲು ಅವನು "ಅನ್ನದಲ್ಲಿ ಕಲ್ಲಿದೆ" ಎಂದನು. ಆ ಮಾತನ್ನು ಕೇಳಿದ ಕೂಡಲೆ ಪಕ್ಕದಲ್ಲಿ ಕುಳಿತಿದ್ದ ಮಡ್ಡಿ ಎಂಜಲ ಕೈಯನ್ನು ಎತ್ತಿ ಮಂಕನ ಕೆನ್ನೆಗೆ ಒಂದೇಟನ್ನು ಹೊಡೆದು 'ಎಲಾ! ನಿನಗೆ ಎಳ್ಳಷ್ಟೂ ಬುದ್ಧಿಯಿಲ್ಲ. ಕಲ್ಲೆಂದು ಹೇಳಬಹುದೇ? ಈಗತಾನೇ ದೇವಸ್ಥಾನದಲ್ಲಿ ದೇವರನ್ನು ಕಲ್ಲೆಂದು ನಾನು ಪೂಜಾರಿಯ ಕೈಯಿಂದ ಏಟು ತಿನ್ನಲಿಲ್ಲವೇ? ಆಗಲೇ ಮರೆತುಬಿಟ್ಟೆಯಾ? ಕಲ್ಲೆನ್ನಬೇಡ, ಚಿಕ್ಕ ದೇವರು ಎನ್ನು, ತಿಳಿಯಿತೋ" ಎಂದನು. ಮಂಕನು ಕೆನ್ನೆಯನ್ನು ಎಡಗೈಯಿಂದ

ಸವರಿ ನೋಡಿಕೊಳ್ಳುತ್ತ "ಇನ್ನುಮೇಲೆ ಎಂದೂ ಹೀಗೆ ಹೇಳುವುದಿಲ್ಲ" ಎಂದನು. ಊಟವಾದಮೇಲೆ ಗುರುಗಳು ಶಿಷ್ಯರನ್ನು ನೋಡಿ "ನಾವು ನಾಳೆ ಮುಂದಕ್ಕೆ ಪಯಣಮಾಡಬೇಕು. ಎಲ್ಲರೂ ಹೊತ್ತಿನಂತೆ ಎದ್ದು ಸಿದ್ಧವಾಗಿರಿ" ಎಂದು ಹೇಳಿ ಮಲಗಿಕೊಂಡರು. ಈ ಮಾತನ್ನು ಕೇಳಿ ಮನೆಯವನು ಸಂತೋಷಪಟ್ಟು ತನ್ನ ಕೋಣೆಗೆ ಹೋಗಿ ಮಲಗಿಕೊಂಡನು.

೬ನೆಯ ಪ್ರಕರಣ

ಕುದುರೆಯನ್ನು ಹಿಡಿವುದಕ್ಕೆ ಗಾಳಹಾಕಿದುದು.

ಮರುದಿನ ಗುರುಗಳೂ ಶಿಷ್ಯರೂ ಹೊತ್ತಿನಂತೆ ಎದ್ದು ಸಡಗರದಿಂದ ಪಯಣಹೊರಟರು. ಅವರು ಮೆಲ್ಲಗೆ ನಡೆದು ಹೋಗುತ್ತಿದ್ದುದರಿಂದ ಒಂದು ಹರಿದಾರಿಯದೂರ ಪಯಣ ಸಾಗುವುದಕ್ಕೆ ಮುಂದೆಯೇ ಬಿಸಿಲು ಏರಿಹೋಯಿತು. ಆದುದರಿಂದ ಸಮೀಪದಲ್ಲಿದ್ದ ಒಂದು ತೋಟದಲ್ಲಿ ಮರದ ನೆಳಲಲ್ಲಿ ಕುಳಿತುಕೊಂಡು ದಣಿವಾರಿಸಿಕೊಳ್ಳುತ್ತಿದ್ದರು. ಆಗ ಮರುಳನು ಕಾಲುತೊಳೆವುದಕ್ಕೋಸ್ಕರ ಹತ್ತಿರ ಇದ್ದ ಕೆರೆಯ ಬಳಿಗೆ ಹೋದನು. ಆ ಕೆರೆಯ ಏರಿಯಮೇಲೆ ಒಂದು ಬೆನಕನ ಗುಡಿ ಇದ್ದಿತು. ಅಲ್ಲಿ ಯಾರೋ ಬೆನಕನಿಗೆ ಹರಕೆಮಾಡಿಕೊಂಡು ಆ ನಾಡಿನ ವಾಡಿಕೆಯಂತೆ ಮಣ್ಣಿನಿಂದ ಹೊಸದಾಗಿ ಒಂದು ದೊಡ್ಡ ಕುದುರೆಯನ್ನು ಮಾಡಿ ಬಚ್ಚಣಿಸಿ ಸಲ್ಲಿಸಿದ್ದರು. ಆ ಮಣ್ಣು ಕುದುರೆಯ ನೆಳಲು ತುಂಬಿದ್ದ ಕೆರೆಯ ತಿಳಿನೀರಿನಲ್ಲಿ ಕಂಡಿತು. ಕಾಲು ತೊಳೆಯಲಿಕ್ಕೆ ಹೋದ ಮರುಳನು ಅದನ್ನು ಕಂಡು ನೀರೊಳಗೆ ಕುದುರೆ ನಿಂತಿದೆ ಎಂದೆಣಿಸಿ ಅಚ್ಚರಿಗೊಂಡು, ಬಳಿಕ ಏರಿಯಮೇಲಿರುವ ಮಣ್ಣು ಕುದುಶೆಯನ್ನೂ ನೀರಿನೊಳಗಿರುವುದನ್ನೂ ಹಲವುಸಾರಿ ದಿಟ್ಟಿಸಿನೋಡಿ, ಅದು ಉದ್ದದಲ್ಲಿಯೂ ಗಾತ್ರದಲ್ಲಿಯೂ ತೋರ್ಕೆಯಲ್ಲಿಯೂ ಇದನ್ನು ಹೋಲುವುದನ್ನು ಕಂಡು ನೀರೊಳಗಿರುವುದು ಏರಿಯ ಮೇಲಿರುವುದರ ನೆಳಲಾಗಿರಬಹುದೆಂದು ಸಂದೇಗಪಟ್ಟನು. ಆಗ ಗಾಳಿ ಬಲವಾಗಿ ಬೀಸ

ತೊಡಗಿತು. ಏರಿಯಮೇಲಿರುವ ಕುದುರೆ ರವೆಯಷ್ಟೂ ಕದಲದಿದ್ದರೂ ನೀರೊಳಗಣ ಕುದುರೆ ಮಾತ್ರ ಬಹಳವಾಗಿ ಅಲ್ಲಾಡುವುದನ್ನು ನೋಡಿ 'ಇದು ಎಷ್ಟುಮಾತ್ರಕ್ಕೂ ಅದರ ನೆಳಲಲ್ಲ ; ಇದು ಬೇರೊಂದು ಜೀವವುಳ್ಳ ಕುದುರೆಯೇ ಸರಿ' ಎಂದು ನಿಶ್ಚಯಿಸಿದನು. ಬಳಿಕ ಅದನ್ನು ಓಡಿಸಬೇಕೆಂದು ಉಜ್ಜುಗಿಸಿ ಗಟ್ಟಿಯಾಗಿ ಕೂಗಿಕೊಂಡು ಕಲ್ಲುಗಳನ್ನು ಎಸೆದನು. ಎಸೆದಕೂಡಲೆ ನೀರು ಹೆಚ್ಚಾಗಿ ಕದಲಿ ಏಳಲು, ಕುದುರೆ ತಲೆಯೆತ್ತಿ ಕಾಲೊದರಿ ಮೈಯಲ್ಲಾಡಿಸಿ ನೆಗೆದಾಡುವಂತೆ ಅವನ ಕಣ್ಣಿಗೆ ಕಂಡಿತು. ಅದನ್ನು ನೋಡಿ ಅವನು ಹೆದರಿಕೊಂಡು ಕಾಲನ್ನೂ ತೊಳೆಯದೆ ಉಳಿದವರಿದ್ದ ಎಡೆಗೆ ಓಡಿಹೋಗಿ ಅವರಿಗೆ ತಾನು ಕಂಡುದನ್ನೆಲ್ಲಾ ನಿಟ್ಟುಸಿರುಬಿಡುತ್ತ ಹೇಳಿದನು.

ಈ ಅಚ್ಚರಿಯನ್ನು ಕೇಳಿದಕೂಡಲೆ ಎಲ್ಲರೂ ತಟ್ಟನೆ ಎದ್ದು ಎಡವಿ ಬೀಳುವುದನ್ನೂ ಕಾಣದೆ ಕೆರೆಯ ಬಳಿಗೆ ಓಡಿಹೋದರು. ಅಲ್ಲಿ ಕುದುರೆಯ ನೆಳಲನ್ನು ನೋಡಿದಮೇಲೆ 'ಮರುಳನು ಹೇಳಿದುದು ನಿಜ' ಎಂದು ಅವರಿಗೆ ನಂಬುಗೆಯುಂಟಾಯಿತು. ಆಮೇಲೆ "ಕೆರೆಯಲ್ಲಿಳಿದರೆ ಕಪ್ಪೆ ಕಚ್ಚುವುದು" ಎಂಬವರಹಾಗೆ, ನೀರಿನಲ್ಲಿಳಿಯಲು ಹೆದರಿ, ಇಳಿಯದೆಯೇ ಕುದುರೆಯನ್ನು ಹಿಡಿಯಬೇಕೆಂದು ಅವರು ಮಂತಣ ಮಾಡತೊಡಗಿದರು. ಆಗ ಅವರಲ್ಲಿ ಮಂಕನು "ಹುರುಳಿಯನ್ನು ಕಂಡರೆ ಬಾಯಿಬಿಡುವುದು ಕುದುರೆಗೆ ಸಾಜವಾದುದರಿಂದ, ನಾವು ಹುರುಳಿಯನ್ನು ಬೇಯಿಸಿ ಇಟ್ಟರೆ ಆ ಕಂಪನ್ನು ಮೂಸಿ ನೋಡಿಕೊಂಡು ಹುರುಳಿಯನ್ನು ತಿನ್ನುವುದಕ್ಕೆ ಕುದುರೆ ಮೇಲಕ್ಕೆ ಬಂದೇ ಬರುತ್ತದೆ. ಆಗ ಮೆಲ್ಲಗೆ ಸದ್ದುಮಾಡದೆ ಹೋಗಿ ಅದನ್ನು ಹಿಡಿದುಕೊಳ್ಳಬಹುದು" ಎಂದನು. ಮುಟ್ಟಾಳನು "ಹಸಿಯಾಗಿರುವ ಒಂದು ಹಿಡಿ ಗರುಕೆಯ ಹುಲ್ಲನ್ನು ಕಿತ್ತುಕೊಂಡು ಹೋಗಿ ನೀರಿನಮೇಲೆ ತೋರಿಸಿದರೆ ಕುದುರೆ ಅದನ್ನು ತಿನ್ನುವುದಕ್ಕೆ ನೆಗೆದುಕೊಂಡು ಎದ್ದು ಬರುವುದು. ಆಗ ಚಕ್ಕನೆ ಹಾರಿ ಅದನ್ನು ಹಿಡಿದುಕೊಳ್ಳಬಹುದು" ಎಂದು ಹೇಳಿದನು. ಮಡೆಯನು "ಹೆಣ್ಣುಕುದುರೆ ಕೆನೆವಹಾಗೆ ಏರಿಯ ಮೇಲೆ ನಿಂತುಕೊಂಡು ಕೆನೆದರೆ ಆಗ ಈ ಕುದುರೆ ನೀರಿನಿಂದ ಎದ್ದು ನಾಲ್ಗಾಲೋಟ

ವಾಗಿ ಓಡಿ ಬರುತ್ತದೆ. ಆ ವೇಳೆಯಲ್ಲಿ ತಪ್ಪದೆ ನಮ್ಮ ಕೈಗೆ ಸಿಕ್ಕುತ್ತದೆ'' ಎಂದು ನುಡಿದನು. ಮಡ್ಡಿ "ಎಮ್ಮೆಯ ಕೋಣನು ಹೋಗಿ ಕೆರೆಯಲ್ಲಿ ಬಿದ್ದರೆ ಕಪ್ಪೆಗಳು ತಾವೇ ನೆಗೆದು ಓಡಿಹೋಗುತ್ತವೆ. ಇದನ್ನು ನಾನು ಪರಿಕಿಸಿ ನೋಡಿದ್ದೇನೆ. ನಿಮಗೆ ಈ ವಿಷಯದಲ್ಲಿ ಎಳ್ಳಷ್ಟೂ ಸಂದೇಹ ಬೇಡ. ಆದುದರಿಂದ ಒಂದು ಎಮ್ಮೆಯ ಕೋಣನನ್ನು ಹೊಡೆದುಕೊಂಡು ಬಂದು ನೀರಿನಲ್ಲಿ ಬಿಡುವ; ಬಿಟ್ಟರೆ ಅದು ನಾಲ್ಕು ಕಡೆಗೂ ಓಡಾಡಿ ನೆಗೆದಾಡುತ್ತದೆ. ಆಗ ಕುದುರೆ ಆ ತೊಂದರೆಯನ್ನು ಸೈರಿಸದೆ ನೀರಿನಿಂದ ಈಚೆಗೆ ಹತ್ತಿ ಬರುತ್ತದೆ. ಆ ಸಮಯದಲ್ಲಿ ಏನೇನೂ ಕಷ್ಟವಿಲ್ಲದೆ ಅದನ್ನು ಹಿಡಿದುಕೊಳ್ಳಬಹುದು'' ಎಂದನು. ಈ ಮೇರೆಗೆ ಅವರು ನಾಲ್ಕುಮಂದಿಯೂ ಹೇಳಿದ ಹೂಟಗಳು ಮರುಳನ ಬಗೆಗೆ ಒಡಂಬಡಲಿಲ್ಲ. ಆದುದರಿಂದ ಅವನು "ಇದೆಲ್ಲಾ ಸರಿಯಲ್ಲ'' ಎಂದು ಹೇಳಿ, "ನಾನೊಂದು ಹೂಟವನ್ನು ಹೇಳುತ್ತೇನೆ ಕೇಳಿ. ಗಾಳಹಾಕಿ ಮೀನನ್ನು ಹಿಡಿವಂತೆ ಇದನ್ನು ಹಿಡಿದು ಏರಿಯಮೇಲಕ್ಕೆ ಎಳೆದುಕೊಳ್ಳಬೇಕು'' ಎಂದನು. ಅದಕ್ಕೆ ಅವರೆಲ್ಲರೂ "ಅಹುದು! ಅಹುದು! ಇವನ ಬುದ್ಧಿಗೆ ಎಣೆಯೇ ಇಲ್ಲ. ಇದು ಒಳ್ಳೆಯ ಹೂಟವೇ ಸರಿ. ನಮಗೆ ತೋರಲೇ ಇಲ್ಲವಲ್ಲಾ'' ಎಂದು ಹೇಳಿ ಹಾಗೆ ಮಾಡಲಿಕ್ಕೆ ಒಡಂಬಟ್ಟರು.

ತರುವಾಯ ಅವರು ತಮ್ಮಲ್ಲಿ ಒಬ್ಬನು ಕೈಯಲ್ಲಿ ಹಿಡಿದಿದ್ದ ಕುಡುಗೋಲನ್ನು ಗಾಳದ ಮುಳ್ಳಾಗಿಯೂ, ದಾರಿಯಲ್ಲಿ ಉಣ್ಣುವುದಕ್ಕಾಗಿ ತಾವು ತಂದಿದ್ದ ಅನ್ನದ ಬುತ್ತಿಯನ್ನು ಗಾಳದ ಎರೆಯಾಗಿಯೂ, ಗುರುಗಳು ತಲೆಗೆ ಸುತ್ತಿಕೊಂಡಿದ್ದ ಮುಂಡಾಸನ್ನು ಗಾಳದ ಹಗ್ಗವಾಗಿಯೂ, ಅವರು ಕೈಯಲ್ಲಿ ಹಿಡಿದಿದ್ದ ಹಿತ್ತಾಳೆಯ ಕಟ್ಟುಹಾಕಿದ ಕೋಲನ್ನು ಗಾಳದ ಕೋಲಾಗಿಯೂ, ಅನುಗೊಳಿಸಬೇಕೆಂದೆಣಿಸಿ, ಹೇಗಾದರೂ ಬಗೆದ ಕೆಲಸವನ್ನು ಮುಗಿಸಬೇಕೆಂದು ತೀರುಮಾನಿಸಿ, ಅದೇಮೇರೆಗೆ ಅನ್ನದ ಬುತ್ತಿಯನ್ನು ಕುಡುಗೋಲಿನ ತುದಿಗೆ ಪೋಣಿಸಿ, ಕುಡುಗೋಲಿನ ಬುಡಕ್ಕೆ ಮುಂಡಾಸನ್ನು ಕಟ್ಟಿ, ಆ ಮುಂಡಾಸಿನ ತುದಿಯನ್ನು ಕೋಲಿಗೆ ಕಟ್ಟಿ ಗಂಟು ಹಾಕಿ, ನೀರೊಳಗೆ ಕುದುರೆ ಕಾಣು

ತ್ತಿದ್ದೆಡೆಗೆ ಅನ್ನದ ಬುತ್ತಿಯನ್ನು ಎಸೆದರು. ಅದು ಧೊಪ್ಪೆಂದು ವೇಗವಾಗಿ ನೀರೊಳಕ್ಕೆ ಬಿದ್ದಿತು. ಕೂಡಲೆ ಅಲ್ಲಿ ಕಾಣುತ್ತಿದ್ದ ಕುದುರೆ ಅಲ್ಲಾಡಿ ಕುಣಿಯುತ್ತ ನೆಗೆದು ಮೇಲೆ ಎದ್ದು ಬರುವಂತೆ ಕಂಡುದರಿಂದ ಎಲ್ಲರೂ ಹೆದರಿಕೊಂಡು ಓಡಿದರು. ಮುಂಡಾಸು ಕಟ್ಟಿದ್ದ ಕೋಲನ್ನು ಹಿಡಿದಿದ್ದವನು ಮಾತ್ರ ಅದನ್ನು ಬೀಸಾಡಿ ಓಡದಂತೆ ಎಡಗೈಯಲ್ಲಿ ಜೀವವನ್ನು ಹಿಡಿದುಕೊಂಡು ಅಲ್ಲಿಯೇ ನಡುಗುತ್ತ ನಿಂತಿದ್ದನು. ಸ್ವಲ್ಪ ಹೊತ್ತಿನಮೇಲೆ ಕೆರೆಯಲ್ಲಿ ತೆರೆಗಳು ಅಡಗಲು ಕುದುರೆ ಕದಲದೆ ನಿಲ್ಲುವುದನ್ನು ನೋಡಿ ಅವನು ಸ್ವಲ್ಪ ಧೈರ್ಯವನ್ನು ತಾಳಿದನು. ಕೆರೆಯಲ್ಲಿದ್ದ ದೊಡ್ಡ ದೊಡ್ಡ ಮೀನುಗಳು ಮೆಲ್ಲ ಮೆಲ್ಲಗೆ ಅನ್ನದ ಬುತ್ತಿಯ ಹತ್ತಿರ ಬಂದು ಅದನ್ನು ಕಚ್ಚಿ ಎಳೆಯುತ್ತಿರಲು, ಅವನು ಓಡಿಹೋಗಿದ್ದವರನ್ನು ಕೈಸನ್ನೆ ಮಾಡಿ ಕರೆದು "ಕುದುರೆ ಈಗತಾನೆ ಎರೆಯನ್ನು ಕಚ್ಚುತ್ತಿದೆ" ಎಂದು ಹೇಳಿದನು. ಸ್ವಲ್ಪ ಹೊತ್ತಾದಮೇಲೆ ಮುಂಡಾಸನ್ನು ಮೆಲ್ಲಗೆ ಎಳೆದು ನೋಡಿದನು. ಬುತ್ತಿಯ ಅನ್ನವನ್ನೆಲ್ಲಾ ಮೀನುಗಳು ತಿಂದುಬಿಟ್ಟಿದ್ದುವು. ಅವನು ಎಳೆದಾಗ ಕುಡುಗೋಲು ಅಲ್ಲಿದ್ದ ಒಂದು ಗಿಡದ ಬೇರಿಗೆ ಸಿಕ್ಕಿ ತಗಲಿಕೊಂಡಿತು. ಅಗ ಕುಡುಗೋಲು ಕುದುರೆಯ ಬಾಯಲ್ಲಿ ಸಿಕ್ಕಿಕೊಂಡಿದೆ ಎಂದೆಣಿಸಿ ಅವನು—ಇನ್ನೇನು ಕುದುರೆ ನಮ್ಮ ವಶವಾಗಿಹೋಯಿತು—ಎಂದು ಅಳವಿಲ್ಲದ ಸಂತಸವನ್ನು ಪಡೆದವನಾಗಿ ಕೂಗಿಕೊಳ್ಳಲು, ಓಡಿಹೋಗಿದ್ದವರೆಲ್ಲಾ ಅಲ್ಲಿಗೆ ಬಂದು ಸೇರಿದರು. ಬಳಿಕ ಎಲ್ಲರೂ ಕೂಡಿ ಮುಂಡಾಸನ್ನು ಹಿಡಿದು ಮುಕ್ಕಿ ಎಳೆದರು. ಅದು ಬಹಳ ಹಳದಾಗಿದ್ದುದರಿಂದ ಹರಿದು ಕಿತ್ತು ಹೋಯಿತು. ಇವರೆಲ್ಲರೂ ಒಟ್ಟಿಗೆ ಅಂಗತ್ತಾಗಿ ಕೆಳಗೆ ಬಿದ್ದರು.

ಹೀಗೆ ಇವರು ಬೀಳಲು ಸಮೀಪದಲ್ಲಿ ಹೋಗುತ್ತಿದ್ದ ಒಬ್ಬ ದಾರಿಗನು ಅಲ್ಲಿಗೆ ಬಂದು "ಇದೇನು?" ಎಂದು ಕೇಳಿದನು. ಅದಕ್ಕೆ ಅವರು ನಡೆದ ಸಂಗತಿಯನ್ನೆಲ್ಲಾ ಪರಿವಿಡಿಯಿಂದ ಹೇಳಿದರು. ಅದನ್ನು ಕೇಳಿ ಅವನು ಇವರ ಬೆಳ್ಳತನವನ್ನು ತಿಳಿದು, ತಡಿಯಲ್ಲಿದ್ದ ಕುದುರೆಯನ್ನು ತಾನು ಹೊದೆದಿದ್ದ ಬಟ್ಟೆಯಿಂದ ಮುಚ್ಚಿಕೊಳ್ಳಲು ನೀರಿನಲ್ಲಿ ಕಾಣುತ್ತಿದ್ದ ಕುದುರೆ ಮರೆಯಾಯಿತು. ಅದನ್ನು ಕಂಡು ಅವರು ಇವನು

ಮಂತ್ರವಾದಿಯಾಗಿರಬೇಕೆಂದು ಎಣಿಸಿ ನಡುನಡುಗುತ್ತ ಅವನ ಕಾಲಿಗೆರಗಿದರು. ಅವನು ಇದ್ದ ಸ್ಥಿತಿಯನ್ನು ತಿಳಿಸಿ ಅವರ ಬೆಪ್ಪನವನ್ನು ಹೋಗಲಾಡಿಸಿದನು.

ಬಳಿಕ ಅವರು ತಮ್ಮ ಗುರುಗಳನ್ನು ಅವನಿಗೆ ತೋರಿಸಿ, "ಅಯ್ಯಾ! ನಮ್ಮ ಗುರುಗಳು ಮುದುಕರಾಗಿರುವುದರಿಂದ ಇವರಿಗೆ ಪಯಣ ಮಾಡುವಾಗ ಹತ್ತಿಕೊಂಡು ಹೋಗುವುದಕ್ಕೆ ಒಂದು ಕುದುರೆ ಅವಶ್ಯವಾಗಿ ಬೇಕು. ಕುದುರೆಯನ್ನು ಕೊಂಡುಕೊಳ್ಳುವುದಕ್ಕೆ ಸಾಕಾದ ಹಣವು ನಮ್ಮಲ್ಲಿ ಇಲ್ಲದೆ ಇದ್ದುದರಿಂದ ಒಂದು ಕುದುರೆ ಮೊಟ್ಟೆಯನ್ನು ಅಗ್ಗವಾಗಿ ಕೊಂಡುಕೊಂಡಿದ್ದೆವು. ಅದೂ ನಷ್ಟವಾಗಿ ಹೋಯಿತು. ಅವರ ಮೇಲೆ ಬಾಡಿಗೆಯೆತ್ತನ್ನು ಇಟ್ಟು ಅದರಿಂದ ಬಹಳವಾದ ಕಷ್ಟಕ್ಕೆ ಗುರಿಯಾದೆವು. ಈಗಲಾದರೋ ಹೀಗಾಯಿತು" ಎಂದು ಎಲ್ಲವನ್ನೂ ಅವನಿಗೆ ವಿವರವಾಗಿ ಹೇಳಿದರು. ಅವನು "ಇವರು ಸ್ವಲ್ಪವೂ ಕಪಟವನ್ನರಿಯದ ಒಳ್ಳೆಯ ಜನರು" ಎಂದು ತಿಳಿದು ಮನಮರುಗಿ, ಅವರನ್ನು ನೋಡಿ "ನನ್ನಲ್ಲಿ ಒಂದು ಕುಂಟಾದ ಮುದುಗುದುರೆ ಇದೆ. ಅದು ನಿಮ್ಮ ದಾರಿಯ ಪಯಣಕ್ಕೆ ಒದಗಬಹುದು. ಅದಕ್ಕಾಗಿ ನೀವು ಹಣಕಾಸು ಕೊಡಬೇಕಾದುದಿಲ್ಲ; ನಾನು ಸುಮ್ಮನೆ ಕೊಟ್ಟುಬಿಡುತ್ತೇನೆ. ನನ್ನ ಊರಿಗೆ ಬನ್ನಿ" ಎಂದು ಹೇಳಲು, ಅವರು ಬಹಳ ಸಂತಸಗೊಂಡು "ಮಾರಾಯಾ! ನಿನ್ನ ಹೊಟ್ಟೆ ತಣ್ಣಗಿರಲಿ. ನಡೆ, ನಿನ್ನೂರಿಗೆ ಹೋಗುವ" ಎಂದರು. ಅವನು ಅವರನ್ನು ಕರೆದುಕೊಂಡು ತನ್ನೂರಿಗೆ ಹೋದನು.

೭ನೆಯ ಪ್ರಕರಣ.

ಕುದುರೆಯನ್ನು ಏರಿಕೊಂಡು ಹೋದುದು.

ಆ ಮನುಷ್ಯನು ಹಣಗಾರನಲ್ಲದಿದ್ದರೂ ಧರ್ಮಿಷ್ಠನಾದುದರಿಂದ ತಾನು ಹೇಳಿದಂತೆ ಅವರನ್ನು ಹತ್ತಿರ ಇದ್ದ ತನ್ನೂರಿಗೆ ಕರೆದುಕೊಂಡು ಹೋಗಿ ಆ ದಿನ ಇರುಳು ಅವರಿಗೆ ತುಪ್ಪ, ಮಜ್ಜಿಗೆ, ಹಾಲು ಮೊದಲಾದುವು

ಗಳನ್ನು ಕೊಟ್ಟು ಯಾವ ಕೊರತೆಯೂ ಇಲ್ಲದಂತೆ ಊಟ ಉಪಚಾರಗಳನ್ನು ಮಾಡಿಸಿ ವೀಳೆಯವನ್ನು ಕೊಟ್ಟನು. ಮರುದಿನ ಬೆಳಗಾದ ಮೇಲೆ ಅವನು ತನ್ನ ಹೊಲದ ಹತ್ತಿರ ಮೇದುಕೊಂಡಿದ್ದ ನಾಡು ತಟ್ಟಾದ ಒಂದು ಕುದುರೆಯನ್ನು ಹಿಡಿದುಕೊಂಡು ಬಂದು ಗುರುಗಳ ಮುಂದೆ ನಿಲ್ಲಿಸಿ ಅದನ್ನು ಅವರಿಗೆ ಕಾಣಿಕೆಯಾಗಿ ಒಪ್ಪಿಸಿದನು. ಆ ಕುದುರೆ ವಯಸ್ಸಾದ ಮುದಿಯೂ, ಒಂದು ಕಣ್ಣು ಕುರುಡೂ, ಒಂದು ಕಿವಿ ಹರಕೂ, ಮುಂಗಾಲುಗಳಲ್ಲಿ ಒಂದು ಕಾಲು ಕುಂಟೂ, ಹಿಂಗಾಲುಗಳು ತಾಟುಗಾಲುಗಳೂ ಆದ ಕುರೂಪಿ ಜಂತುವಾಗಿದ್ದಿತು. ಆದರೂ ಮುದುಕರಾದ ಗುರುಗಳಿಗೆ ತಕ್ಕ ವಾಹನವೇ ಎಂದು ಹೇಳಬಹುದು. ಇದಲ್ಲದೆ "ಕಣ್ಣುಗುಡ್ಡೆಗಳು ಈಚೆಗೆ ಹೊರಟುಕೊಂಡು, ಮಂಡಿಗಳು ಒಂದಕ್ಕೊಂದು ಮಸೆಯುತ್ತ, ಲೆಕ್ಕವಿಲ್ಲದ ನೊಣಗಳು ಮೈಯಲ್ಲೆಲ್ಲಾ ಮುತ್ತಿಕೊಂಡು, ಹಗ್ಗದಿಂದ ಬಿಗಿದು ಕಟ್ಟಿದ ಕಾಲುಗಳಿಂದ ಕುಪ್ಪುತ್ತ, ಹೊರಗೆ ತೊಳಲಿ ಹೊಟ್ಟೆಯನ್ನು ತುಂಬಿಕೊಳ್ಳುವ ವಿದ್ವಾಂಸರ ಕುದುರೆ ಮೆರೆಯುತ್ತಿದೆ" ಎಂಬರ್ಥವುಳ್ಳ

ಗಳಚ್ಚಕ್ಷುರ್ವಿಶೀರ್ಣಜಾನು । ರ್ಮಕ್ಷಿಕಾಲಕ್ಷಸಂಯುತಃ ।
ಬದ್ಧಪಾದೋ ಬಹಿಶ್ಚಾರೀ । ವಿದ್ವದಶ್ವೋ ವಿರಾಜತೇ ॥

ಎಂಬ ಶ್ಲೋಕವನ್ನು ಮಾಡಿದ ಕಬ್ಬಿಗನು ಈ ಚೆಲುವಾದ ಕುದುರೆಯನ್ನು ನೋಡಿಯೇ ಆ ಶ್ಲೋಕವನ್ನು ಮಾಡಿದಂತೆ ತೋರುತ್ತದೆ. ಆದರೆ ಆ ಗುರುಗಳ ಶಿಷ್ಯರು "ಕುದುರೆ ಹೇಗಿದ್ದರೂ ಇರಲಿ. ಹಣವು ವೆಚ್ಚವಾಗದೆ ಸುಮ್ಮನೆ ಸಿಕ್ಕಿತಲ್ಲವೇ" ಎಂಬ ಮಿತಿಮೀರಿದ ಆನಂದವನ್ನು ಪಡೆದರು. ಮುದ್ದಿ ಕುದುರೆಯನ್ನು ಸುತ್ತಿ ಸುತ್ತಿ ಬಂದು ಸವರುತ್ತಲೂ, ಮಡೆಯನು ಅದರ ಕುಂಟುಗಾಲನ್ನು ಹಿಡಿದೆಳೆದು ನೀವುತ್ತಲೂ, ಮುಟ್ಠಾಳನು ಮೋಟು ಬಾಲವನ್ನು ಹಿಡಿದು ನೇವರಿಸುತ್ತಲೂ, ಮರುಳನು ಕುರುಡುಗಣ್ಣನ್ನು ಒರಸುತ್ತಲೂ, ಮಂಕನು ಗರುಕೆಹುಲ್ಲನ್ನು ತಂದು ಬಾಯಿಗೆ ಕೊಡುತ್ತಲೂ, ಈ ತೆರದಲ್ಲಿ ಹಲವು ಬಗೆಯಾಗಿ ಕುದುರೆಯನ್ನು ಎಲ್ಲರೂ ಪರಾಮರಿಸುತ್ತಿದ್ದರು. ಆಮೇಲೆ

ಕುದುರೆಯನ್ನು ಸವಾರಿಗೆ ಅನುಗೊಳಿಸಬೇಕೆಂದು ಕುದುರೆಯ ಸಾಮಾನುಗಳನ್ನು ಹುಡುಕಲಿಕ್ಕೆ ಹೊರಟರು. ಕುದುರೆ ಕೊಟ್ಟವನು ಹರಿದುಹೋಗಿದ್ದ ಒಂದು ಹಳೆಯ ತಡಿಯನ್ನು ಕೊಟ್ಟಿದ್ದನು. ಅದರಲ್ಲಿ ಕುದುರೆಯ ಬಾಲದ ಕೆಳಕ್ಕೆ ಸಿಕ್ಕಿಸುವ ಹಗ್ಗವು ಕಿತ್ತುಹೋಗಿದ್ದುದರಿಂದ ಅವರು ಅದಕ್ಕೆ ಪ್ರತಿಯಾಗಿ ಉಗುನಿಯ ಹಂಬನ್ನು ಹೊಸೆದು ಕಟ್ಟಿದರು. ಹಾಗೆಯೇ ಕಡಿವಾಳಕ್ಕೆ ಬಾರಿಲ್ಲದೆ ಇದ್ದುದರಿಂದ "ಹಾದಿಯಲ್ಲಿ ಕಂಡ ಕುದುರೆಗೆ ಹುಲ್ಲುಸರವಿಯ ಕಡಿವಾಳ" ಎಂಬ ಗಾದೆಗೆ ಸರಿಯಾಗಿ ಹುಲ್ಲು ಸರವಿಯನ್ನು ಗಂಟುಹಾಕಿ ಕಟ್ಟಿದರು. ಕುದುರೆಯ ತಂಗನ್ನು ಸಂಪಾದಿಸುವುದಕ್ಕೆ ಬಹಳ ತೊಂದರೆಪಟ್ಟರು. ಆದರೂ ಸಿಕ್ಕಲಿಲ್ಲ. ಆದುದರಿಂದ ಪೇಟೆಗೆ ಹೋಗಿ ಬಹಳ ಕಷ್ಟಪಟ್ಟು ತಂಗನ್ನೂ ಕುದುರೆಯ ಮುಂಗಾಲು ಹಿಂಗಾಲುಗಳಿಗೆ ಕಟ್ಟುವ ಅಗಾಡಿಪಿಚಾಡಿ ಹಗ್ಗಗಳನ್ನೂ ತೆಗೆದುಕೊಂಡು ಬಂದರು. ಅಂಕವಣಿಗಳಿಲ್ಲದೆ ಕುದುರೆಯ ಸವಾರಿಯಾಗಲಾರದೆಂದು ಆಲೋಚಿಸಿ, ಅದನ್ನು ಸಂಪಾದಿಸುವುದು ಹೇಗೆ ಎಂದು ಬಹಳ ಹೊತ್ತು ಎಣಿಕೆಗೊಂಡು ಒಬ್ಬರ ಮೊಗವನ್ನೊಬ್ಬರು ನೋಡುತ್ತ ನಿಂತಿದ್ದರು. ಆಗ ಮಡೆಯನು ಗುರುಗಳ ದೊಣ್ಣೆಯನ್ನು ನೋಡಿ ತನ್ನ ಜತೆಗಾರರೊಂದಿಗೆ "ಏಕೆ ಎಣಿಕೆಗೊಳ್ಳುವಿರಿ? ಅಂಕವಣಿಗಳು ಸಿಕ್ಕಿದುವು! ಸಿಕ್ಕಿದುವು!" ಎಂದು ಕುಣಿದಾಡತೊಡಗಿದನು. ಅವರೆಲ್ಲಾ "ಎಲ್ಲಿ ಅಂಕವಣಿಗಳು?" ಎಂದು ತವಕದೊಡನೆ ಕೇಳಲು, ಮಡೆಯನು "ಗುರುಗಳ ದೊಣ್ಣೆಗೆ ಹಾಕಿರುವ ಎರಡು ಹಿತ್ತಾಳೆಯ ಕಟ್ಟುಗಳನ್ನು ತೆಗೆದು ಉಪಯೋಗಿಸುವುದಕ್ಕೆ ಏನಡ್ಡಿ?" ಎಂದನು. ಅವರು "ಇದು ಒಳ್ಳೆಯ ಯುಕುತಿ; ನಮಗೆ ಯಾರಿಗೂ ತೋರದೆ ಹೋಯಿತು" ಎನ್ನುತ್ತ ಕೂಡಲೆ ದೊಣ್ಣೆಯಿಂದ ಕಟ್ಟುಗಳನ್ನು ಕಳಚುವುದಕ್ಕೆ ಉಜ್ಜುಗಿಸಿದರು. ಕಟ್ಟುಗಳು ಬಹಳ ಬಿಗಿಯಾಗಿದ್ದುದರಿಂದ ಕಳಚಲಿಕ್ಕೆ ಅಸದಳವಾಗಿದ್ದಿತು. ಆಗ ಮಡ್ಡಿ "ಈ ಕೆಲಸಕ್ಕೆ ಇಷ್ಟು ಕಷ್ಟಪಡಬೇಕೇ?" ಎಂದು ಹೇಳಿ, ಒಂದು ದೊಡ್ಡ ಕಲ್ಲನ್ನು ತೆಗೆದುಕೊಂಡು ಬಂದು ದೊಣ್ಣೆಯ ಮೇಲೆ ಎತ್ತಿ ಹಾಕಿದನು. ದೊಣ್ಣೆ ಚೂರುಚೂರಾಯಿತು. ಬಳಿಕ ಕಟ್ಟುಗಳನ್ನು ಕಳಚಿಕೊಂಡು

ಅವಕ್ಕೆ ಗುರುಗಳ ಬಳಿ ಇದ್ದ ಪಾಗಿನಲ್ಲಿ ಅರ್ಧವನ್ನು ಹರಿದು ಪೋಣಿಸಿ ಕಟ್ಟಿ ಕುದುರೆಯ ಮೇಲೆ ಹಾಕಿದರು. ಆಗ ಮುಟ್ಠಾಳನು "ಈ ಅಂಕವಣಿಗಳಲ್ಲಿ ಕಾಲಿಟ್ಟು ಗುರುಗಳು ಕುದುರೆಯನ್ನು ಹೇಗೆ ಏರಿ ಸವಾರಿ ಮಾಡಾರು?" ಎಂದು ಕೇಳಲು, ಮರುಳನು "ಅಂಕವಣಿಗಳಲ್ಲಿ ಕಾಲಿಟ್ಟುಕೊಂಡೇ ಏರಿ ಸವಾರಿಮಾಡಬೇಕೆಂಬ ನಿಯಮವೇನೂ ಇಲ್ಲ; ಉಂಗುಟಗಳನ್ನು ಮಾತ್ರ ಇಟ್ಟುಕೊಂಡೂ ಸವಾರಿಯಾಗಬಹುದು" ಎಂದು ಹೇಳಿದನು. ಅದಕ್ಕೆ ಎಲ್ಲರೂ ಒಪ್ಪಿಕೊಂಡರು. ಹೀಗೆ ಕುದುರೆಯ ಸಾಮಾನುಗಳನ್ನೆಲ್ಲಾ ಒದಗಿಸಿಕೊಂಡಮೇಲೆ, ಮಂಕನು ಒಬ್ಬ ಜೋಯಿಸನ ಮನೆಗೆ ಹೋಗಿ ಗುರುಗಳು ಕುದುರೆ ಸವಾರಿ ಮಾಡುವುದಕ್ಕೆ ಶುಭ ಮುಹೂರ್ತವನ್ನು ಕಟ್ಟಿಸಿಕೊಂಡು ಬಂದನು. ಬಳಿಕ ಊರ ಜನರೆಲ್ಲಾ ಜಾತ್ರೆಗೆ ಬಂದು ನೆರೆವಂತೆ ಗುಂಪು ಕೂಡಿ ಗಜಬಜಿಸುತ್ತಿರಲು, ಮುಹೂರ್ತಕಾಲಕ್ಕೆ ಸರಿಯಾಗಿ ಗುರುಗಳನ್ನು ಕುದುರೆಯಮೇಲೆ ಹತ್ತಿಸಿದರು. ಆಗ—ಹಿಂದೆ ಇಬ್ಬರು ನಿಂತುಕೊಂಡು ಬಲವಾಗಿ ನೂಕುತ್ತಿರಲು, ಮುಂದುಗಡೆ ಮೂವರು ಕಡಿವಾಳದ ಹಗ್ಗವನ್ನು ಹಿಡಿದು ಮುಕ್ಕಿ ಎಳೆಯುತ್ತಿರಲು, ಆ ದೊಡ್ಡ ಜಾತಿಯ ಕುದುರೆ ತಿಂಗಳಿಗೆ ಒಂದು ಗಾವುದಕ್ಕೆ ಕಡಮೆಯಿಲ್ಲದೆ ವೇಗವಾಗಿ ಹಾರಿಹೋಯಿತು—ಎಂಬ ಅರ್ಥವುಳ್ಳ

ಪಿಂಗಡೆಯಿರ್ವರ್ ನೂಂಕಲ್ ।
ಮುಂಗಡೆಯೊಳ್ ಕೀಳ ನೇಣಸೆಳೆಯಲ್ ಮೂವರ್ ॥
ತಿಂಗಳ್ಗೊ ಗಾವುದಮಾ ।
ತುಂಗತುರಂಗಂ ಕಡಂಗಿ ಪರಿದತ್ತಾಗಳ್ ॥

ಎಂಬ ಪದ್ಯಕ್ಕೆ ಸರಿಯಾಗಿ ಐವರು ಶಿಷ್ಯರಲ್ಲಿ ಒಬ್ಬನು ಮುಂದೆ ಕಡಿವಾಳವನ್ನು ಹಿಡಿದು ಎಳೆಯಲು, ಮತ್ತೊಬ್ಬನು ಹಿಂದೆ ಇದ್ದು ಬಾಲವನ್ನು ಹಿಡಿದು ನುಲಿಚಿ ಗದರಿಸಿಕೊಂಡು ಓಡಿಸಲು, ಇನ್ನಿಬ್ಬರು ಪಕ್ಕಗಳಲ್ಲಿದ್ದು ಗುರುಗಳ ಕಾಲುಗಳನ್ನು ಕೈಲಾಗುಕೊಟ್ಟು ಒಂದು ಕೈಯಲ್ಲಿ ಆತುಕೊಂಡು ಮತ್ತೊಂದು ಕೈಯಿಂದ ಕುದುರೆಯ ಅಳ್ಳೆಯನ್ನು ನೋಡಿ

ಗುಪ್ಪಲು, ಉಳಿದವನು 'ಗಾಂಪರೊಡೆಯರು ಬರುವರು! ಹೋ! ಪರಾಕು!' ಎಂದು ಗುರುಗಳ ಬಿರುದುಗಳನ್ನು ಉಗ್ಗಡಿಸುತ್ತ ಮುಂದುಗಡೆ ಹೋಗಲು, ಗುರುಗಳು ಬಹಳ ಸಂಭ್ರಮದೊಡನೆ ಕುದುರೆ ಸವಾರಿಯನ್ನು ಮಾಡಿದರು.

ಇಂತು ಸಂತಸದಿಂದ ಮೈಯುಬ್ಬಿ ಗುರುಗಳು ಸ್ವಲ್ಪದೂರ ಸವಾರಿಮಾಡಿಕೊಂಡು ಊರ ಉಕ್ಕಡದ ಹತ್ತಿರ ಬರಲು, ಅಲ್ಲಿದ್ದ ಸುಂಕದವನು ಇವರುಗಳನ್ನು ಕಂಡು ಓಡಿಬಂದು ಅಡ್ಡಹಾಕಿದನು. ಇವರು 'ಏಕಯ್ಯಾ ಅಡ್ಡಹಾಕುತ್ತೀಯೆ?' ಎಂದು ಕೇಳಲು, ಅವನು "ಕುದುರೆಗೆ ಐದು ಹಣ ಸುಂಕ ಕೊಡಬೇಕು; ಕೊಡದೆ ಮುಂದಕ್ಕೆ ಅಡಿಯಿಡಕೂಡದು' ಎಂದು ಕುದುರೆಯನ್ನು ಹಿಡಿದು ನಿಲ್ಲಿಸಿದನು. ಆಗ ಇವರು 'ಇದೇನು ಸೋಜಿಗವಾಗಿದೆ? ಗುರುಗಳೇರಿದ ಕುದುರೆಗೂ ಸುಂಕವುಂಟೇ? ನಾವು ಮಾಡುವುದು ವ್ಯಾಪಾರವೇ? ಅಥವಾ ಉದ್ಯೋಗವೇ? ಇದು ಯಾವುದೂ ಅಲ್ಲವಲ್ಲ. ನಮ್ಮ ಗುರುಗಳು ಮುದುಕರಾಗಿ ಮೈಯೆಲ್ಲಾ ತಗ್ಗಿರುವುದರಿಂದ ಅವರು ಕಾಲುನಡೆಯಾಗಿ ಪಯಣ ಮಾಡುವುದು ಅಸದಳವೆಂದು ಒಬ್ಬ ಪುಣ್ಯಾತ್ಮನು ಧರ್ಮಾರ್ಥವಾಗಿ ಕೊಟ್ಟ ಕುದುರೆ ಇದು. ಇದಕ್ಕೆ ಸುಂಕ ತೆಗೆದುಕೊಳ್ಳುವುದನ್ನು ನಾವು ಎಲ್ಲಿಯೂ ಕಂಡೂ ಇಲ್ಲ, ಕೇಳಿಯೂ ಇಲ್ಲ. ಆದರೂ ಈ ಅನ್ಯಾಯವುಂಟೇ? ಅಯ್ಯೋ ದೈವವೇ!' ಎಂದು ಕೂಗಿಕೊಳ್ಳಲು, ಅವನು "ಸುಂಕದವನೊಂದಿಗೆ ಸುಖದುಃಖವೇ?' ಎಂಬ ಗಾದೆಗೆ ಸರಿಯಾಗಿ ಅನ್ಯಾಯವೋ ನ್ಯಾಯವೋ ನನಗೇನೂ ತಿಳಿಯದು; ಹಣವನ್ನು ಕೊಟ್ಟುಬಿಟ್ಟೇ ಮುಂದೆ ಹೋಗಬೇಕು' ಎಂದು ಹೇಳಿ, ಘಡಿವಗಲವರೆಗೂ ಅವರನ್ನು ತಡೆದು ಅಲ್ಲಿಯೇ ನಿಲ್ಲಿಸಿ, 'ನಿಮ್ಮನ್ನು ಬಿಡುವುದಿಲ್ಲ; ನೀವು ಕೂಗಿಕೊಂಡರೆ ಯಾರು ಕೇಳುತ್ತಾರೆ?' ಎಂದನು. ಅವರು ತಪ್ಪಿಸಿಕೊಂಡು ಹೋಗುವುದಕ್ಕೆ ಬೇರೆ ದಾರಿಯನ್ನು ಕಾಣದೆ 'ನಾವು ಕೊಡೆವು, ಅವನು ಬಿಡನು. ಅಯ್ಯೋ! ಸುಮ್ಮನೆ ದಂಡತೆರಬೇಕಾಯಿತಲ್ಲಾ!' ಎನ್ನುತ್ತ ನಿಟ್ಟುಸಿರು ಬಿಟ್ಟುಕೊಂಡು ಐದು ಹಣವನ್ನು ತೆಗೆದು ಕೊಡಲು, ಅವನು ಮುಂದಕ್ಕೆ ಬಿಟ್ಟನು.

ಗುರುಗಳು 'ಈ ಹಾಳುಕುದುರೆ ಇಲ್ಲದಿದ್ದರೆ ಈ ಜಂಜಡವು ಬರುತ್ತಿರಲಿಲ್ಲವಲ್ಲವೇ?' ಎಂದು ತಮ್ಮೊಳಗೆ ತಾವೇ ಎಂದುಕೊಂಡು ಸ್ವಲ್ಪ ದೂರ ಮುಂದಕ್ಕೆ ಹೋಗಿ, ಬಳಿಕ ದಣಿವಾರಿಸಿಕೊಳ್ಳಲು ಶಿಷ್ಯರೊಡನೆ ಹತ್ತಿರ ಇದ್ದ ಒಂದು ಚಾವಡಿಗೆ ಹೋಗಿ ಸೇರಿದರು. ಅಲ್ಲಿ ಎಲ್ಲರೂ ಕುಳಿತುಕೊಂಡ ಸ್ವಲ್ಪಹೊತ್ತಿನಮೇಲೆ ಒಬ್ಬ ದಾರಿಗನು ಆ ಮಾರ್ಗವಾಗಿ ಬರಲು, ಅವನನ್ನು ಕೂಗಿ ಗುರುಗಳು ತಾವೇ ಒತ್ತಾಯದಿಂದ ಹೀಗೆ ಅವನೊಡನೆ ಮೊರೆಯಿಡತೊಡಗಿದರು:—ಅಪ್ಪಾ! ನಾನು ಹುಟ್ಟಿದಂದಿನಿಂದ ಇದುವರೆಗೆ ಒಂದುಬಾರಿಯೂ ಕುದುರೆ ಹತ್ತಿದವನಲ್ಲ. 'ಎಂದೂ ಇಲ್ಲದ ಮಾಣಿ ಅಮಾಸೆಯ ದಿನ ಓದ ಕುಳಿತನು' ಎಂಬಂತೆ ಈ ಹೊತ್ತೇ ಮೊದಲು ಮೊದಲು ಕುದುರೆಯೇರಿ ಬಂದೆನು. ಬಂದಕಡೆ ಈ ಅನ್ನೆಯವು ನಡೆಯಿತು. ಹೀಗೆ ನೀತಿಯಿಲ್ಲದೆ ದಾರಿಯಲ್ಲಿ ಸುಲಿಗೆ ಮಾಡುವ ಕಳ್ಳನಂತೆ ಅಳಿಸಿ ಗಳಿಸಿದ ಹಣವು ಯಾರಿಗೇ ಆಗಲಿ ಒಳ್ಳೆಯದನ್ನು ಮಾಡುವುದೇ? ನನ್ನ ಹೊಟ್ಟೆ ಉರಿವಂತೆ ತೆಗೆದುಕೊಂಡ ಹಣವು ಅವನಿಗೆ ದಕ್ಕುವುದೇ? ಬೆಂಕಿಯಾಗಿ ಅವನನ್ನು ಸುಡದೇ? ಅಯ್ಯೋ ದೇವರೇ! ಲೋಕದಲ್ಲಿ ಹೀಗೆಯೂ ಉಂಟೇ? ನನ್ನ ಹೊಟ್ಟೆ ಉರಿಯುತ್ತದಲ್ಲಾ! ನನ್ನ ಎದೆ ಕುದಿಯುತ್ತದಲ್ಲಾ! ಏನುಮಾಡಿ ಸಾಯಲಿ!

ಈ ರೀತಿಯಾದ ಗುರುಗಳ ಮೊರೆಯನ್ನು ಕೇಳಿ, ದಾರಿಗನು ಮನಮರುಗಿ, "ಸ್ವಾಮೀ! ಗುರುಗಳೇ! ಏಕೆ ಸಂಕಟ ಪಡುತ್ತೀರಿ? ಇದು ಕಾಲಸ್ವಭಾವ; ಈ ಕಾಲದಲ್ಲಿ ಹಣವೇ ಗುರು, ಹಣವೇ ದೇವರು. 'ಹಣವೆಂದರೆ ಹೆಣವೂ ಬಾಯಿ ಬಿಡುತ್ತದೆ' ಎಂದು ಕೇಳಿದ್ದೀವು. ಈಗ 'ಹಣ ಹಂತಿಯಲ್ಲಿ, ಕುಲ ಹಿತ್ತಿಲಲ್ಲಿ' ಎಂಬುವಕ್ಕೆ ಸರಿಯಾಗಿ ಹಣವನ್ನು ಬಿಟ್ಟರೆ ಬೇರೆ ನಂಟತನವೂ ಕೆಳೆತನವೂ ಇಲ್ಲವೇ ಇಲ್ಲ" ಎಂದನು. ಅದಕ್ಕೆ ಗುರುಗಳು "ಅಹುದಪ್ಪಾ, ನೀನು ಹೇಳಿದುದು ನಿಜ. ಈ ಕಾಲದಲ್ಲಿ ಜನರು ತಿಪ್ಪೆಯಲ್ಲಿ ಅರೆಕಾಸು ಬಿದ್ದಿರುವುದನ್ನು ಕಂಡರೆ ಅದನ್ನು ನಾಲಗೆಯಿಂದ ನಕ್ಕಿ ಎತ್ತಿಕೊಳ್ಳಲೂ ಹೇಸರು" ಎಂದು ನುಡಿದರು. ದಾರಿಗನು "ಸ್ವಾಮೀ! ಅದಕ್ಕೆ ಸಂದೇಹವೇ? ಹಾಗೆ ನಕ್ಕಿ ಎತ್ತಿ

ಕೊಳ್ಳುವಾಗ ಆ ಕಾಸು ಅವರಿಗೆ ನಾರುವುದೇ ಇಲ್ಲ. ಇದಕ್ಕೆ ಒಂದು ದೃಷ್ಟಾಂತವನ್ನು ಹೇಳುತ್ತೇನೆ ಕೇಳಿ " ಎಂದು ಹೀಗೆ ಹೇಳತೊಡಗಿದನು :—ಹಿಂದೆ ಒಬ್ಬ ದೊರೆ ಇದ್ದನು. ಆತನು ಹಣದಾಸೆಯಿಂದ ತನ್ನ ಸೀಮೆಯಲ್ಲಿ ಎಂದೂ ಇಲ್ಲದ ತೆರಿಗೆಗಳನ್ನೆಲ್ಲಾ ಏರ್ಪಡಿಸಿ ಅವುಗಳಿಂದ ತೃಪ್ತಿಯೊಂದದೆ ಉಚ್ಚೆಯ ತೆರಿಗೆ ಎಂಬ ಒಂದು ಹೊಸತೆರಿಗೆಯನ್ನು ಏರ್ಪಡಿಸಿದನು. ಇದು ದೊರೆಯ ಮಗನಿಗೆ ಒಡಂಬಡಲಿಲ್ಲ. ಆದುದರಿಂದ ಆತನು ತಂದೆಯನ್ನು ಕುರಿತು 'ಅಪ್ಪಾ! ನಾವು ಪ್ರಜೆಗಳಲ್ಲಿ ಈ ನಾರುವ ತೆರಿಗೆಯನ್ನು ಕೇಳಿ ತೆಗೆದುಕೊಳ್ಳುವುದು ನಾಚಿಕೆಗೇಡಲ್ಲವೇ?' ಎನ್ನಲು, ತಂದೆ ಮಗನಿಗೆ ಆಗ ಯಾವ ಮರುಮಾತನ್ನೂ ಹೇಳದೆ ಸುಮ್ಮನಿದ್ದು ಹಲವು ದಿನ ಕಳೆದಮೇಲೆ ಆ ತೆರಿಗೆಯ ಹಣವು ಬೊಕ್ಕಸ ತುಂಬ ಸೇರಿದಾಗ, ಮಗನನ್ನು ಕರೆಯಿಸಿ ಆ ಹಣವನ್ನು ತೋರಿಸಿ ಮೂಸಿನೋಡಹೇಳಿ, 'ಮಗುವೇ! ಈ ಹಣವು ನಾರುತ್ತದೆಯೇ?' ಎಂದು ಕೇಳಿದನು. ಮಗನು ಮೂಸಿನೋಡಿ, 'ನಾರುವುದು ಎಂದರೇನು? ಮಗಮಗಿಸುತ್ತದಲ್ಲಾ' ಎಂದನು. ದೊರೆ 'ಮಗುವೇ! ಇದು ಉಚ್ಚೆಯ ತೆರಿಗೆಯ ಹಣ. ಇದನ್ನು ನಾರುವ ತೆರಿಗೆಯೆಂದು ಹೇಳಿದೆಯಲ್ಲಾ, ನೆನೆಪಿದೆಯೋ?' ಎಂದನು. ಕೇಳಿದಿರೋ ಸ್ವಾಮಿ! ಈ ಕಾಲದಲ್ಲಿ ಹಣ ಬಂದರೆ ಸರಿ, ಅದು ಹೇಗೆ ಬಂದರೂ ಚಿಂತೆಯಿಲ್ಲ.

ಹೀಗೆ ಗುರುಗಳೂ ದಾರಿಗನೂ ಹಲವು ಮಾತುಗಳನ್ನಾಡುತ್ತಿದ್ದು ಹೊತ್ತು ಕಳೆದಬಳಿಕ, ಗುರುಗಳು ಸಂಜೆಯಲ್ಲಿ ಆ ಸ್ಥಳವನ್ನು ಬಿಟ್ಟು ಕುದುರೆಯೇರಿಕೊಂಡು ಶಿಷ್ಯರೊಡನೆ ಮುಂದಕ್ಕೆ ಹೋಗಿ ಒಂದು ಹಳ್ಳಿಯಲ್ಲಿ ತಂಗಿಕೊಂಡರು. ಶಿಷ್ಯರು ಆ ಇರುಳು ಕುದುರೆಯನ್ನು ಕಟ್ಟಿಹಾಕದೆ ಹಾಗೆಯೇ ಮೇಯಬಿಟ್ಟಿದ್ದರು. ಬೆಳಗಾದಮೇಲೆ ಪಯಣಕ್ಕೆ ಕುದುರೆಯನ್ನು ಹುಡುಕಲು ಅದು ಸಿಕ್ಕಲಿಲ್ಲ. ಮಡ್ಡಿ ಆ ಹಳ್ಳಿಯ ಮನೆಮನೆಗೂ ನುಗ್ಗಿ ನೋಡಿದನು. ಕಡೆಗೆ ಒಬ್ಬ ಒಕ್ಕಲಿಗನ ಮನೆಯ ಹಿತ್ತಿಲಲ್ಲಿ ಕುದುರೆ ಕಟ್ಟಿಹಾಕಿದ್ದಿತು. ಆ ಒಕ್ಕಲಿಗನನ್ನು ಮಡ್ಡಿ 'ಕುದುರೆಯನ್ನು ಬಿಟ್ಟುಕೊಡಬೇಕು' ಎಂದು ಕೇಳಿಕೊಳ್ಳಲು, ಅವನು 'ಈ ಹಾಳಾದ ಕುದುರೆ ಇರುಳು ಮೂವತ್ತು ಗಳಿಗೆಯೂ

ನನ್ನ ಪೈರನ್ನು ಮೇದು ನನಗೆ ಬಹಳ ನಷ್ಟವನ್ನು ಉಂಟುಮಾಡಿದೆ. ಆದುದರಿಂದ ನಾನು ಅದನ್ನು ಖಂಡಿತವಾಗಿಯೂ ಬಿಡುವುದಿಲ್ಲ' ಎಂದು ಹಲ್ಲು ಕಚ್ಚಿಕೊಂಡು ಹೇಳಿದನು. ಅದನ್ನು ಕೇಳಿ ಮಡ್ಡಿ ಆ ಸಂಗತಿಯನ್ನು ಮರುಳ ಮುಂತಾದವರೊಡನೆ ಹೇಳಿ, ಅವರನ್ನು ಜತೆಯಲ್ಲಿ ಕರೆದುಕೊಂಡು ಆ ಊರಿನವರಲ್ಲಿ 'ಹೇಗಾದರೂ ಕುದುರೆಯನ್ನು ಬಿಡಿಸಿಕೊಡಬೇಕು. ನಮ್ಮ ಗುರುಗಳು ಬಹಳ ವೃದ್ಧರು; ಕಾಲು ನಡೆಯಿಂದ ಪಯಣಮಾಡಲಾರರು' ಎಂದು ಬೇಡಿಕೊಳ್ಳಲು, ಅವರಲ್ಲಿ ಮುಖಂಡನಾದ ಒಬ್ಬನು ಒಕ್ಕಲಿಗನ ಬಳಿಗೆ ಹೋಗಿ ನಯಭಯಗಳನ್ನು ತೋರಿಸಿ ಉಪಾಯವಾಗಿ ಹೇಳಿ ನೋಡಿದನು. ಆತನು 'ಏನಾದರೂ ಆಗಲಿ, ಬಂದುದೆಲ್ಲಾ ಬರಲಿ, ಪೈರಿನ ನಷ್ಟವನ್ನು ಕೊಟ್ಟ ಹೊರತು ಕುದುರೆಯನ್ನು ಬಿಡೆನು' ಎಂದು ಖಂಡಿತನಾಗಿ ಹೇಳಿಬಿಟ್ಟನು. ಬಳಿಕ ಊರಿನವರಲ್ಲಿ ನಾಲ್ವರು ಮುಖಂಡರು ಸೇರಿ, ಕುದುರೆ ಮೇದ ಗದ್ದೆಯನ್ನು ಹೋಗಿ ನೋಡಿ, "ತುಳಿದುದು, ಮೇದುದು ಎಲ್ಲಾ ಸೇರಿ ಎಂಟು ಹತ್ತು ಹಣದ ನಷ್ಟವಾಗಿರಬಹುದು" ಎಂದರು. ಅವರ ತೀರುಮಾನವನ್ನು ಕೇಳಿ ಶಿಷ್ಯರು 'ಅಯ್ಯೋ ಅಷ್ಟು ಎಲ್ಲಿಯಾದರೂ ಉಂಟೇ?' ಎಂದು ಗೋಳಾಡಿ ಕಾಲು ಹಿಡಿದುಕೊಳ್ಳಲು, ಬಹಳ ಹೊತ್ತು ವಿಚಾರವಾಗಿ ಕೊನೆಗೆ ಒಕ್ಕಲಿಗನು ನಾಲ್ಕು ಹಣವನ್ನು ತೆಗೆದುಕೊಂಡು ಕುದುರೆಯನ್ನು ಬಹಳ ದಾಕ್ಷಿಣ್ಯದಿಂದ ಬಿಟ್ಟುಕೊಟ್ಟನು.

ಗುರುಗಳು ಬಹಳವಾಗಿ ನೊಂದುಕೊಂಡು 'ನಮಗೆ ಈ ಹಾಳು ಕುದುರೆ ಏತಕ್ಕೆ? ಇದು ಬಂದಂದಿನಿಂದ ದಂಡತೆತ್ತ ಹಣವೆಷ್ಟು? ಜಂಜಡವೆಷ್ಟು? ನಾಚಿಕೆಗೇಡೆಷ್ಟು? ಇದೆಲ್ಲಾ ನಮ್ಮ ಮೈಮೆಗೆ ತಗದು' ಎಂದು ಹೇಳಿ, ಕಾಲುನಡೆಯಾಗಿ ಪಯಣಮಾಡತೊಡಗಿದರು. ಅದನ್ನು ಕಂಡು ಶಿಷ್ಯರು 'ಹೋ! ಹೋ! ಆಗದು! ಆಗದು! ಅದು ಸರಿಯಲ್ಲ' ಎಂದೂ, 'ಅಯ್ಯಯ್ಯೋ! ನಡೆಯಲಿಕ್ಕೆ ನಿಮ್ಮಿಂದಾದೀತೇ?' ಎಂದೂ, 'ಆಹಾ! ಸರಿ! ನಡೆದರೆ ನಿಮ್ಮ ಮೈಮೆಗೆ ತಡೆದೀತೆ?' ಎಂದೂ ಹೇಳುತ್ತಿರಲು, ಆ ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ತಮ್ಮಡಿ ಇವರ ಮಾತುಗಳನ್ನು ಕೇಳಿ ಹತ್ತಿರ ಬಂದು "ಅಯ್ಯಾ! ಏಕೆ ಕಳವಳಿಸುತ್ತೀರಿ?

ಮೂಲಕಾರಣವನ್ನು ಕಂಡುಹಿಡಿಯದೆ ಸುಮ್ಮನೆ ಮಾತನಾಡಿದರೆ ಫಲವೇನು? ನಿಜಸ್ಥಿತಿಯನ್ನು ಹೇಳುತ್ತೇನೆ, ಕೇಳಿ. ನಿಮ್ಮ ಈ ಕಷ್ಟನಷ್ಟಗಳೆಲ್ಲಾ ಕುದುರೆಯನ್ನು ಹಿಡಿದಿರುವ ಗ್ರಹದಿಂದ ಬಂದಿವೆ. 'ವೆಚ್ಚದೊಂದಿಗೆ ವೆಚ್ಚ' ಎಂದು ತಿಳಿದುಕೊಂಡು ನನಗೆ ನೀವು ಐದು ಹಣ ಕೊಟ್ಟರೆ ಗ್ರಹಶಾಂತಿಮಾಡಿ ಆ ಗ್ರಹವನ್ನು ಓಡಿಸಿ ಬಿಡುತ್ತೇನೆ. ಆ ಮೇಲೆ ಎಂದೆಂದಿಗೂ ನಿಮಗೆ ಕಷ್ಟ ಬರುವುದಿಲ್ಲ" ಎಂದು ನುಡಿದನು. ಅವನ ಮಾತನ್ನು ಕೇಳಿ ಶಿಷ್ಯರು 'ಈ ಕೆಲಸವು ಯುಕ್ತವಾಗಿ ಕಾಣುತ್ತದೆ. ವ್ಯಯವಾಗುತ್ತದಲ್ಲಾ ಎಂದು ಅಂಜಿ ಹಿಂದೆಗೆವುದು ಕೆಲಸವಲ್ಲ' ಎಂದು ನಿಶ್ಚಯಿಸಿ ತಮ್ಮಡಿಗೆ ಹಣಕೊಡಲು ಒಪ್ಪಿಕೊಂಡು, ಅವನನ್ನು ಕುರಿತು, 'ಅಯ್ಯಾ! ನೀನು ದಯೆಯಿಟ್ಟು ಬೇಗನೆ ಗ್ರಹವನ್ನು ಓಡಿಸಿ ನಮಗೆ ಉಪಕಾರವನ್ನು ಮಾಡಬೇಕು. ನಾವು ನಿನಗೆ ಹಣಕೊಡುವುದು ಹೆಚ್ಚಲ್ಲ' ಎಂದರು.

ತಮ್ಮಡಿ 'ಇವರು ನನ್ನ ಬಲೆಗೆ ಸಿಕ್ಕಿದರು; ಇವರನ್ನು ಮೋಸಗೊಳಿಸುವುದು ಕಷ್ಟವಲ್ಲ, ಬಾಳೆಯಹಣ್ಣು ತಿನ್ನುವ ಹಾಗೆ' ಎಂದು ಎಂದುಕೊಂಡು, 'ಹಾಗೆಯೇ ಆಗಲಿ; ನೀವು ಇಷ್ಟು ಹೇಳಿದ ಮೇಲೆ ನಾನು ಒಲ್ಲೆನೆಂಬುದು ಕ್ರಮವಲ್ಲ. ಆದರೆ ನೀವು ಕೊಡುವ ಹಣದಾಸೆಗೆ ನಾನು ಈ ಕಷ್ಟವಾದ ಕೆಲಸವನ್ನು ಮಾಡಲು ಒಪ್ಪಿಕೊಂಡೆನೆಂದು ಎಂದಿಗೂ ತಿಳಿಯಬೇಡಿ. ನಿಮ್ಮ ಗುಣಕ್ಕೋಸ್ಕರ ಕಷ್ಟಪಡುತ್ತೇನೆಯೇ ಹೊರತು ಬೇರೆ ಅಲ್ಲ' ಎಂದು ನುಡಿದು, ಹಣವನ್ನು ಮುಂದೆ ಕೊಡ ಹೇಳಿ ತೆಗೆದುಕೊಂಡು, ಆಮೇಲೆ ಅವರ ಕಣ್ಣೆದಿರಿಗೆ ಸ್ವಲ್ಪ ಹೊತ್ತು ಕಣ್ಣುಮುಚ್ಚಿಕೊಂಡು ಏನೋ ಜಪಿಸುವಹಾಗೆ ತುಟಿಗಳನ್ನು ಅಲುಗಿಸುತ್ತ ಇದ್ದನು ಶಿಷ್ಯರು ಸ್ವಲ್ಪವೂ ಸದ್ದುಮಾಡದೆ ಕೈಮುಗಿದುಕೊಂಡು ನೋಡುತ್ತ ನಿಂತಿದ್ದರು. ಬಳಿಕ ತಮ್ಮಡಿ ಎದ್ದುಹೋಗಿ ಹಲವು ಬಗೆಯ ಹಸಿಯ ಎಲೆಗಳನ್ನು ಕಿತ್ತು ತಂದು ಮಂತ್ರಿಸಿ ಹಾಕುವ ಹಾಗೆ ಕುದುರೆಯ ಮೈಯಮೇಲೆ ಎಸೆದು, ಮೆಲ್ಲಗೆ ಮಣಮಣ ಎಂದು ಸದ್ದುಮಾಡುತ್ತ ಹಾ, ಹೂ, ಹೇ, ಹೈ, ಕಿಂ, ಕುಂ, ಓಂ, ಶೋಂ, ಎಂದು ಹಲವು ಸಾರಿ ಉಚ್ಚರಿಸಿ ಕುದುರೆಯನ್ನು ಮೂರುಬಾರಿ

ಬಲಸಂದು, ಬಾಲವೊದಲು ತಲೆಯವರೆಗೆ ಅದನ್ನು ಸವರಿ, ಅದರ ಒಂಟಿ ಗಿವಿಯನ್ನು ಕೈಯಿಂದ ಹಿಡಿದುಕೊಂಡು "ಈ ಕಿವಿಯಲ್ಲೀಗ ಗ್ರಹವು ನೆಲಸಿರುವುದು ; ಇಂತಹ ಗ್ರಹವನ್ನು ಓಡಿಸುವುದಕ್ಕಾಗಿಯೇ ಹಿಂದೆ ಆ ಕಿವಿಯನ್ನು ಕೊಯ್ದಿರಬೇಕು. ಈಗ ಈ ಕಿವಿಯನ್ನೂ ಕೊಯ್ದು ಹಾಕಿದರೆ ಈಗ ಬಂದಿರುವ ಗ್ರಹವೂ ಹಾರಿಹೋಗುವುದು. ಇದರಲ್ಲಿ ಏನೇನೂ ಸಂದೇಹವಿಲ್ಲ" ಎಂದನು. ಒಡನೆ ಶಿಷ್ಯರು ಕುಡುಗೋಲನ್ನು ತೀಡಿಕೊಂಡು ಬಂದು ಆ ಒಂಟಿಗಿವಿಯನ್ನು ಚರಕ್ಕನೆ ಕೊಯ್ದು ಗ್ರಹವು ತಗುಲಿಕೊಂಡು ಬಾರದಂತೆ ಆ ಕಿವಿಯನ್ನು ದೂರಕ್ಕೆ ಒಯ್ದು ಆಳವಾಗಿ ಹಳ್ಳ ತೋಡಿ ಅದರಲ್ಲಿ ಹೂತು, ಮೇಲೆ ಚೆನ್ನಾಗಿ ಮಣ್ಣು ಹಾಕಿ ಮುಚ್ಚಿ ಹಿಂದಕ್ಕೆ ಬಂದರು. ಆ ದಿನವೆಲ್ಲಾ ಈ ಕೆಲಸದಲ್ಲಿಯೇ ಕಳೆದುಹೋಯಿತು. ತಮ್ಮಡಿ ಹಣವನ್ನು ಗಂಟುಹಾಕಿಕೊಂಡು ಹೊರಟುಹೋದನು. ಮಾರನೆಯ ದಿನ ಗುರುಗಳೂ ಶಿಷ್ಯರೂ ಪಯಣ ಮಾಡಿ ದಾರಿಯಲ್ಲಿ ಬಹಳ ತೊಂದರೆಪಟ್ಟು ಸಂಜೆಗೆ ಮಠಕ್ಕೆ ಹೋಗಿ ಸೇರಿದರು.

೮ನೆಯ ಪ್ರಕರಣ.

ಬ್ರಾಹ್ಮಣನು ಜೋಯಿಸ ಹೇಳಿದುದು.

ಮಠವನ್ನು ಸೇರಿದ ಬಳಿಕ ಗುರುಗಳು ನಿದ್ದೆ, ಆಹಾರ, ಒಂದರ ಮೇಲೆಯೂ ಇಚ್ಛೆಯಿಲ್ಲದೆ ಕುದುರೆಯ ವಿಷಯವಾಗಿ ಯಾವಾಗಲೂ ಹಂಬಲಿಸುತ್ತಿದ್ದರು. ಒಂದು ದಿನ ಶಿಷ್ಯರನ್ನು ನೋಡಿ "ನಮಗೆ ಸಿಕ್ಕಿದ ಈ ಕುದುರೆ ಕುರೂಪಿಯಾಗಿದ್ದರೂ ಪುಕಸಟ್ಟೆ ದೊರೆಯಿತಲ್ಲಾ ಎಂದು ಮನಕ್ಕೆ ಸ್ವಲ್ಪ ಸಂತಸವುಂಟಾಗಿದ್ದಿತು. ಆದರೆ ಅದರಿಂದ ನಮಗೆ ದಾರಿಯಲ್ಲಿ ಉಂಟಾದ ತೊಂದರೆಗಳನ್ನೆಲ್ಲಾ ನೆನೆದರೆ ಮನದಲ್ಲಿ ಕಡೆಗಾಣದ ಬೇಗೆಯುಂಟಾಗುತ್ತದೆ. ದೈವವಿಲಾಸವು ಹೀಗೆಯೂ ಇರುತ್ತದಲ್ಲವೇ ?" ಎಂದು ಮನಮರುಗಿ, ಅವರನ್ನು ಕರೆದು ಹತ್ತಿರ ಕುಳ್ಳಿರಿಸಿಕೊಂಡು, "ತಮ್ಮಂದಿರಾ ! ತತ್ತ್ವದೃಷ್ಟಿಯಿಂದ ನೋಡಿದಲ್ಲಿ

ಈ ಪ್ರಪಂಚದ ಬಾಳು ಮೊಲದ ಕೋಡಿನಂತೆಯೂ ಬಿಸಿಲುಗುದುರೆಯ ನೀರಿನಂತೆಯೂ ಆಗಸದಲರಂತೆಯೂ ಶೂನ್ಯವಾಗಿ ಕಂಡುಬರುತ್ತದೆ. ಪೊಲ್ಲಮೆ ಬೆರಸದ ನಲ್ಮೆಯೂ, ಕಹಿ ಸೇರದ ಸಿಹಿಯೂ, ದುಗುಡವು ಬೆರೆಯದ ಸಂತಸವೂ ಇಲ್ಲಿ ಯಾರಿಗೂ ದೊರೆಯಲಾರವು. ಈ ವಿಷಯದಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಬೆಲೆಯಿಲ್ಲದೆ ಸುಮ್ಮನೆ ಕುದುರೆ ದೊರೆಯಿತೆಂದು ನಾವು ಆ ಹೊತ್ತು ಎಷ್ಟೋ ಸಂತಸಗೊಂಡೆವಲ್ಲವೇ! ಆ ಹೊತ್ತೇ ಈ ಭಾಗ್ಯವನ್ನು ಹಿಂದಟ್ಟಿ ಬಂದ ಸಂಕಟಪರಂಪರೆಯನ್ನೂ ಅನುಭವಿಸಿದೆವಲ್ಲವೇ! ಅಯ್ಯೋ! ಒಂದು ತೊಟ್ಟು ಜೇನನ್ನು ನಕ್ಕುವುದಕ್ಕಾಗಿ ಎಷ್ಟು ಕಹಿಯನ್ನು ನುಂಗಬೇಕೇ! ನೆಲ್ಲಿಗೂ ಹೊಟ್ಟಿರುತ್ತದೆ; ಯಾವ ಬಗೆಯ ಹಣ್ಣಿಗೂ ಸಿಪ್ಪೆಯೂ ಬೀಜವೂ ಉಂಟು; ಇದೆಲ್ಲಾ ಸ್ವಭಾವಸಿದ್ಧವೇ ಸರಿ. ಆದರೂ ನಾನು ಒಂದು ದಿವಸದಲ್ಲಿ ಪಟ್ಟಪಾಡು ಬಣ್ಣಿಸಲಸದಳವಾದುದು. ಕುದುರೆಯೇರುವುದಕ್ಕೆ ನನಗೆ ಅದೃಷ್ಟವಿಲ್ಲವೋ ಏನೋ. ವಿಧಿಯನ್ನು ಇದಿರಿಸಿ ನಡೆವುದಕ್ಕೆ ನನ್ನಿಂದಾದೀತೆ? ಎಂದಿಗೂ ಆಗಲಾರದು. ಆದುದರಿಂದ ಇನ್ನು ಆ ಕುದುರೆಯನ್ನು ಹಿಂದಕ್ಕೆ ಅಟ್ಟಿಬಿಡುವುದೇ ಉತ್ತಮವಾದ ಕೆಲಸ. ಇದಕ್ಕೆ ಯಾರೂ ಅಡ್ಡಿಮಾಡಬೇಡಿ. ಅದರ ಕೋಟಲೆಯನ್ನು ನಾನು ಸಹಿಸಲಾರೆನು; ಖಂಡಿತವಾಗಿಯೂ ಸಹಿಸಲಾರೆನು" ಎಂದು ಹೇಳಿದರು.

ಆ ಮಾತನ್ನು ಕೇಳಿ ಶಿಷ್ಯರು 'ಸ್ವಾಮೀ! ತಾವು ಹಾಗೆ ಹೇಳಕೂಡದು. ಸ್ವಲ್ಪ ಆಲೋಚನೆಮಾಡಿ ನೋಡಿರಿ. ಅದು ನೀವು ಬೆಲೆಕೊಟ್ಟು ಕೊಂಡುಕೊಂಡ ಕುದುರೆಯೇ? ಅಥವಾ ನಾವು ಹೋಗಿ ಕಷ್ಟಪಟ್ಟು ಹುಡುಕಿ ತಂದ ಕುದುರೆಯೇ? ಈ ಎರಡರಲ್ಲಿ ಒಂದೂ ಅಲ್ಲವಲ್ಲಾ. ದೈವಾಧೀನವಾಗಿ ತನ್ನಷ್ಟಕ್ಕೆ ತಾನೇ ಬಂದ ಕುದುರೆಯಲ್ಲವೇ? ಹೀಗಿರುವಾಗ ನಾವು ಇದನ್ನು ಹಿಂದಕ್ಕೆ ಅಟ್ಟಿಬಿಟ್ಟರೆ ದೈವದ ಬಗೆಗೆ ಇದಿರಿಸಿ ನಡೆದ ಹಾಗೆ ಆಗುವುದಲ್ಲಾ! ಇದೊಂದು ದೊಡ್ಡ ದೋಷವಾಗಿ ಪರಿಣಮಿಸುವುದಲ್ಲವೇ? ಕುದುರೆಯನ್ನು ಹಿಡಿದಿದ್ದ ಗ್ರಹವನ್ನು ಆ ತಮ್ಮಡಿ ಎಷ್ಟೋ ಕಷ್ಟಪಟ್ಟು ಓಡಿಸಿದ್ದಾನೆ. ಇನ್ನು ಮೇಲೆ

ನಾವು ಅಂಜತಕ್ಕದೇನಿದೆ? ಒಂದೂ ಇಲ್ಲವಲ್ಲಾ. ಏಕೆ ಹೀಗೆ ಕಳವಳ ಪಡುವಿರಿ?' ಎಂದು ಇವೇ ಅಲ್ಲದೆ ಇನ್ನೂ ಕೆಲವು ನ್ಯಾಯಗಳನ್ನು ಚಿತ್ರಿಸಿ ಹೇಳಲು, ಗುರುಗಳು ಸ್ವಲ್ಪ ಧೈರ್ಯವನ್ನು ತಂದುಕೊಂಡು, 'ಪ್ರಿಯ ಶಿಷ್ಯರಿರಾ! ನೀವು ಇಷ್ಟು ಹೇಳಿದಮೇಲೆ ನಿಮ್ಮ ಮನಸ್ಸಿನಂತೆಯೇ ಒಪ್ಪಿಕೊಳ್ಳುತ್ತೇನೆ. ಆದರೆ ಅಂದು ಬಂದ ಕೋಟಲೆ ಮುಂದೆಯೂ ಬಾರದಂತೆ ನೀವು ಚೆನ್ನಾಗಿ ನೋಡಿಕೊಳ್ಳಬೇಕು. ಇರುಳು ಕುದುರೆಯನ್ನು ಹೊರಗೆ ಮೇಯಬಿಡಕೂಡದು; ಮನೆಯಲ್ಲಿಯೇ ಕಟ್ಟಿಹಾಕಬೇಕು. ಇದನ್ನು ಕಟ್ಟಿಹಾಕುವುದಕ್ಕೆ ತಕ್ಕೆಡೆಯನ್ನು ಕಾಣೆನಲ್ಲಾ' ಎಂದರು. ಆಗ ಮಡೆಯನು 'ಸ್ವಾಮಿಾ! ಇದಕ್ಕೋಸ್ಕರ ನೀವೇಕೆ ಇಷ್ಟು ಆಲೋಚನೆ ಮಾಡುತ್ತೀರಿ? ಈಗಲೇ ನಾನು ಊರ ಮುಂದಣ ತೋಪಿಗೆ ಹೋಗಿ ಆಲದ ಕೊಂಬೆಗಳನ್ನು ಕಡಿದುಕೊಂಡು ಬಂದು ನಮ್ಮ ಮಠದ ಒಂದು ಮೂಲೆಯಲ್ಲಿ ನೋಡಿದವರು ಬೆಕ್ಕಸಬೆರಗಾಗುವಂತೆ ಸೊಗಸಾದ ಒಂದು ಲಾಯವನ್ನು ಅಚ್ಚುಕಟ್ಟಾಗಿ ಕಟ್ಟಿಬಿಡುವೆನು' ಎಂದು ನುಡಿದನು. ಆ ಮಾತಿಗೆ ಗುರುಗಳು ಮೆಚ್ಚಿ ಮಡೆಯನನ್ನು ಹರಸಿ ಕಳುಹಿಸಿಕೊಟ್ಟರು.

ಮಡೆಯನು ಗುರುಗಳಿಂದ ಅಪ್ಪಣೆಯನ್ನು ಪಡೆದು ಅಲ್ಲಿಂದ ವೇಗವಾಗಿ ಹೊರಟು ತೋಪಿಗೆ ಹೋಗಿ ದಾರಿಯರುಗಿನಲ್ಲಿದ್ದ ಒಂದು ದೊಡ್ಡ ಆಲದ ಮರದಮೇಲೇರಿ ನಿಂತುಕೊಂಡು, ನಳನಳಿಸಿ ನೆಟ್ಟಗೆ ಉದ್ದವಾಗಿ ಬೆಳೆದಿದ್ದ ಒಂದು ಕೊಂಬೆಯನ್ನು ಕೊಡಲಿಯಿಂದ ಕಡಿಯತೊಡಗಿದನು. ಇವನು ಕೊಂಬೆಯ ತುದಿಯಲ್ಲಿ ನಿಂತು ಬುಡವನ್ನು ಕಡಿಯುತ್ತಿರಲು, ದಾರಿಗನಾಗಿ ಅಲ್ಲಿಗೆ ಬಂದ ಒಬ್ಬ ಬ್ರಾಹ್ಮಣನು ಇವನನ್ನು ನೋಡಿ 'ಅಯ್ಯೋ! ಈ ಅರಿವಿಲ್ಲದವನು ಅನ್ಯಾಯವಾಗಿ ಸಾಯುತ್ತಾನಲ್ಲಾ' ಎಂದು ಎಂದುಕೊಂಡು ಸನಿಹಕ್ಕೆ ಬಂದು 'ಎಲೋ ತಮ್ಮಾ! ಹಾಗೆ ನಿಂತುಕೊಂಡು ಮರವನ್ನು ಕಡಿಯಬೇಡ; ಕೊಂಬೆಯೊಡನೆ ನೀನೂ ಬಿದ್ದು ಹೋಗುತ್ತೀಯೆ' ಎಂದನು. ಆ ಮಾತನ್ನು ಕೇಳಿ ಮಡೆಯನು ಬಹಳ ಕೋಪಗೊಂಡು, 'ಈ ಬ್ರಾಹ್ಮಣನು

ಬಹಳ ಕೊಬ್ಬಿದ್ದಾನೆ. ಇವನ ಕೊಬ್ಬನ್ನು ಮುರಿಯಬೇಕು' ಎಂದು ಎಂದುಕೊಂಡು, ಅವನನ್ನು ನೋಡಿ 'ಎಲೋ ಹಾರುವಯ್ಯಾ! ಕಂಡವರ ಮನೆಯ ಊಟ ಉಂಡು ಉಂಡು ಕೊಬ್ಬಿ ಮೈಯ ಮೇಲೆ ಜ್ಞಾನವಿಲ್ಲದೆ ತಲೆಯೆಲ್ಲಾ ಹರಟುತ್ತೀಯೆ. ಸ್ವಲ್ಪವೂ ಅಂಜಿಕೆಯಿಲ್ಲದೆ ಈ ಅಪಶಕುನವಾದ ಮಾತನ್ನು ನನಗೆ ಹೇಳಬಂದೆಯಾ? ನಾನೇನು ಅಂಡೆಯ ಕುರುಬನೆಂದು ತಿಳಿದುಕೊಂಡೆಯೋ? ಹೆಚ್ಚು ಮಾತನಾಡಿದರೆ ಹಲ್ಲನ್ನು ಮುರಿದು ಕೈಯಲ್ಲಿ ಕೊಟ್ಟೇನು. ನಿನ್ನ ಅದೃಷ್ಟ ಒಳ್ಳೆಯದು. ನಾನು ಮರದಮೇಲಿದ್ದೇನೆ' ಎಂದು ಹೇಳಿ ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಕುಡುಗೋಲನ್ನು ಎಳೆದುಕೊಂಡು ಆ ಬ್ರಾಹ್ಮಣನ ಮೇಲೆ ವೇಗವಾಗಿ ಎಸೆದನು. ಬ್ರಾಹ್ಮಣನು ಕುಡುಗೋಲಿನ ಏಟಿಗೆ ಸಿಕ್ಕದಂತೆ ಮೆಲ್ಲಗೆ ಹಾರಿ ತಪ್ಪಿಸಿಕೊಂಡು, "ಅಯ್ಯೋ! ಇಂತಹ ಮುಟ್ಠಾಳರೂ ಲೋಕದಲ್ಲಿ ಉಂಟೇ? ನಾನು ಬುದ್ಧಿಹೇಳಿದರೆ ನನ್ನನ್ನೇ ಹೊಡೆಯಲಿಕ್ಕೆ ಬರುತ್ತಾನಲ್ಲಾ, ಚೆನ್ನಾಯಿತು. ಈ ಮುಕ್ಕನು 'ಅಟ್ಟಮೇಲೆ ಒಲೆ ಉರಿಯಿತು, ಕೆಟ್ಟ ಮೇಲೆ ಬುದ್ಧಿ ಬಂದಿತು' ಎಂಬ ಹಾಗೆ ತಾನೇ ಅನುಭವಿಸಿ ತಿಳಿಯಲಿ. ನನಗೇನು" ಎಂದು ಎಂದುಕೊಂಡು ಬೇಗಬೇಗನೆ ಹೊರಟುಹೋದನು. ಮಡೆಯನು ಮುಂದೆ ನಿಂತುಕೊಂಡಿದ್ದ ಹಾಗೆಯೇ ನಿಂತುಕೊಂಡು ಮರವನ್ನು ಕಡಿಯುತ್ತ ಇದ್ದನು. ಸ್ವಲ್ಪ ಹೊತ್ತಾದ ಮೇಲೆ ಆ ಕೊಂಬೆ ಅರೆವಾಸಿಗೆ ಹೆಚ್ಚಾಗಿ ಕತ್ತರಿಸಿ ಹೋಗಿ ಚಟಚಟ ಎಂದು ಮುರಿದು ಧೊಪ್ಪೆಂದು ನೆಲಕ್ಕೆ ಬಿದ್ದಿತು. ಮಡೆಯನೂ ಅದರೊಡನೆ ಬಿದ್ದನು. ಸ್ವಲ್ಪ ಹೊತ್ತಿನಮೇಲೆ ಮೆಲ್ಲಗೆ ತಡವರಿಸಿಕೊಂಡೆದ್ದು ಕೈಕಾಲುಗಳನ್ನು ಸವರಿಕೊಂಡು, 'ಆಹಾ! ಆ ಬ್ರಾಹ್ಮಣನು ಮಹಾ ಜ್ಞಾನಿ. ದೊಡ್ಡ ಜೋಯಿಸನಾಗಿರಬೇಕು. ಅವನು ಹೇಳಿದ ಹಾಗೆಯೇ ಚ ಚು ತಪ್ಪದೆ ಆಯಿತಲ್ಲಾ. ಅವನನ್ನು ಹೇಗಾದರೂ ಹಿಡಿಯಬೇಕು' ಎಂದು ದೂರದಲ್ಲಿ ಬೇಗಬೇಗನೆ ಹೋಗುತ್ತಿದ್ದ ಬ್ರಾಹ್ಮಣನನ್ನು ಹಿಂದಟ್ಟಿ ಕೂಗಿಕೊಂಡು ಕೈಕಾಲುಗಳ ನೋವನ್ನು ನೋಡದೆ ಓಡಲಾರಂಭಿಸಿದನು. ಬ್ರಾಹ್ಮಣನು ಹಿಂದಿರುಗಿ ನೋಡಿ ಇವನು ತನ್ನಲ್ಲಿಗೆ ವೇಗವಾಗಿ ಓಡಿಬರುವುದನ್ನು ಕಂಡು, 'ಅಯ್ಯೋ!

ಕೆಟ್ಟೆನಲ್ಲಾ. ಈ ತಿಳಿವಿಲ್ಲದ ಮೃಗವು ಇನ್ನೇನು ಮಾಡುವುದೋ ತಿಳಿಯಲಿಲ್ಲವಲ್ಲಾ. ಅಯ್ಯೋ ದೇವರೇ!' ಎಂದು ಓಡತೊಡಗಿದನು. ಅದನ್ನು ಕಂಡು ಮಡೆಯನು ಮತ್ತಷ್ಟು ವೇಗವಾಗಿ ಓಡಲಾರಂಭಿಸಲು, ಬ್ರಾಹ್ಮಣನು 'ಇದು ಕೆಟ್ಟಸಹವಾಸ. ಓಡಿ ಫಲವಿಲ್ಲ. ಓಡಿದರೆ ಇವನಿಂದ ಬಾಧೆ ಇನ್ನೂ ಹೆಚ್ಚಾಗಬಹುದು. ದೇವರೇ ಗತಿ. ಏನು ಮಾಡುತ್ತಾನೆ ನೋಡುವ' ಎಂದು ಎದೆಯಲ್ಲಿ ಅಂಜಿಕೆಯಿದ್ದರೂ ಹೊರಗೆ ಧೈರ್ಯವನ್ನು ತೋರ್ಪಡಿಸುತ್ತ ನಿಂತನು. ಮಡೆಯನು ನಿಟ್ಟುಸಿರುಬಿಡುತ್ತ ಓಡಿಬಂದು ಏನುಮಾಡುವನೋ ಎಂದು ಅಂಜಿಕೊಂಡಿದ್ದ ಬ್ರಾಹ್ಮಣನ ಕಾಲಿಗೆರಗಿ 'ಅಯ್ಯಾ! ನೀವು ಮಹಾಜ್ಞಾನಿಗಳು, ದೊಡ್ಡ ಜೋಯಿಸರು. ಯಾರೋ ಏನೋ ಎಂದು ತಿಳಿದುಕೊಂಡಿದ್ದೆನು. ನಿಮ್ಮ ಮಾತೆಲ್ಲಾ ನಿಜವಾಯಿತು. ದಯೆಯಿಟ್ಟು ನನಗೆ ಇನ್ನೂ ಒಂದು ಪ್ರಶ್ನೆಯನ್ನು ಹೇಳಬೇಕು. ಅಸಡ್ಡೆ ಮಾಡಕೂಡದು. ನಾನು ನಾಡಾಡಿ ಎಂದು ತಿಳಿಯಬೇಡಿ. ಗಾಂಪರೊಡೆಯರು ಎಂಬವರನ್ನು ಕೇಳಿಬಲ್ಲಿರೋ? ನಾನು ಆ ಮಹಾನುಭಾವರ ಮುಖ್ಯಶಿಷ್ಯನು. ನನ್ನನ್ನು ಮಡೆಯ ಎಂದು ಕರೆಯುತ್ತಾರೆ. ನನಗೆ ಗಾಂಪರೊಡೆಯರಲ್ಲಿ ಬಹಳ ಮರುಕವುಂಟು. ಅವರಿಗೆ ಮುಪ್ಪಾಗಿರುವುದರಿಂದ ಯಾವಾಗ ಸತ್ತುಹೋಗುವರೋ ಎಂದು ನನಗೆ ಬಹಳ ಅಂಜಿಕೆಯುಂಟಾಗಿದೆ. ನನ್ನ ಮನಕ್ಕೆ ಸ್ವಲ್ಪ ನೆಮ್ಮದಿಯುಂಟಾಗುವಹಾಗೆ ನೀವು—ಅವರಿಗೆ ಸಾವು ಯಾವಾಗ ಬರುವುದು? ಸಾವಿಗೆ ಮುಂಚೆ ಕಾಣುವ ಗುರುತು ಏನು?— ಈ ವಿಷಯಗಳನ್ನು ಕರುಣಿಸಿ ನನಗೆ ತಿಳಿಸಬೇಕು' ಎಂದು ಹೇಳಿದನು. ಅದಕ್ಕೆ ಬ್ರಾಹ್ಮಣನು 'ಅಯ್ಯಾ! ನನಗೆ ನಿಜವಾಗಿಯೂ ಜೋಯಿಸ ತಿಳಿಯದು' ಎಂದನು. ಮಡೆಯನು 'ಸ್ವಾಮಿ! ಸುಳ್ಳುಹೇಳಿದುದರಿಂದ ಫಲವೇನು? ನಿಮಗೆ ಜೋಯಿಸ ಬರುತ್ತದೆ ಎಂಬುದಕ್ಕೆ ನಾನು ಮರ ಕಡಿಯುತ್ತಿದ್ದಾಗ ನೀವು ಹೇಳಿದ ಮಾತೇ ಸಾಕ್ಷಿಯಾಗಿದೆ. ಹೀಗಿರುವಾಗ ನೀವು ಸುಳ್ಳು ಹೇಳಿದರೆ ನಾನು ನಂಬುತ್ತೇನೆಯೇ? ನನಗೆ ಅಷ್ಟು ಮಟ್ಟು ಜ್ಞಾನವಿಲ್ಲವೇ? ಈ ಮಾತುಗಳನ್ನೆಲ್ಲಾ ಬಿಡಿ. ನಾನು ಕೇಳಿದ

ಪ್ರಶ್ನೆಗೆ ಉತ್ತರ ಕೊಡಿ' ಎಂದನು. ಈ ಮಾತನ್ನು ಕೇಳಿ ಬ್ರಾಹ್ಮಣನು 'ಇವನಿಗೆ ಮಡೆಯ ಎಂಬ ಹೆಸರು ಸಾರ್ಥಕವೇ ಸರಿ' ಎಂದು ಎಂದುಕೊಂಡು, ತಪ್ಪಿಸಿಕೊಳ್ಳುವುದಕ್ಕೆ ಹಲವು ಉಪಾಯಗಳನ್ನು ಮಾಡಿದರೂ ಅವನು ಕೇಳದೆಯೂ ಬಿಡದೆಯೂ ಹೋದುದರಿಂದ ಕೊನೆಗೆ 'ಏನಾದರೂ ಒಂದು ಹೇಳಿಬಿಡುವ' ಎಂದು ನಿಶ್ಚಯಿಸಿ 'ಪೃಷ್ಠಶೀತ, ಪ್ರಾಣನಾಶ' ಎಂದನು. ಅದನ್ನು ಕೇಳಿ ಮಡೆಯನು 'ಹಾಗೆಂದರೇನು ಸ್ವಾಮಿ? ಅದರರ್ಥವನ್ನು ಹೇಳಬೇಕು' ಎಂದು ತವಕಗೊಂಡು ಕೇಳಲು, ಬ್ರಾಹ್ಮಣನು 'ನಿನ್ನ ಗುರುಗಳಿಗೆ ಪೃಷ್ಠವು ಎಂದು ತಣ್ಣಗಾಗುವುದೋ ಅಂದು ಸಾವು ಸಮಿಾಪಿಸಿತು ಎಂದು ತಿಳಿದುಕೊಳ್ಳಬೇಕು; ಸಾವಿಗೆ ಅದೇ ಗುರುತು' ಎಂದು ಹೇಳಿದನು.

ಬಳಿಕ ಮಡೆಯನು ಬ್ರಾಹ್ಮಣನಿಗೆ ಕೈಮುಗಿದು ಅವನ ಅಪ್ಪಣೆಯನ್ನು ಪಡೆದು ಅಲ್ಲಿಂದ ಹೊರಟು ಕಡಿದುಹಾಕಿದ್ದ ಕೊಂಬೆಯನ್ನು ಮಠಕ್ಕೆ ಎಳೆದುಕೊಂಡು ಬಂದು ನಡೆದ ಸಂಗತಿಯನ್ನೆಲ್ಲಾ ವಿವರವಾಗಿ ಗುರುಗಳಿಗೆ ಹೇಳಿದನು. ಅವನ ಮಾತನ್ನು ಕೇಳಿ ಗುರುಗಳು ಬಹಳ ದುಗುಡದಿಂದ "ಜೋಯಿಸಹೇಳಿದ ಬ್ರಾಹ್ಮಣನು ಮಹಾಜ್ಞಾನಿ ಎಂಬುದರಲ್ಲಿ ಸಂದೆಗವಿಲ್ಲ. ನಿನಗೆ ಅವನು ಹೇಳಿದ ಮಾತೆಲ್ಲಾ ಒಡನೆ ಅಂಗೈಯ ನೆಲ್ಲಿಯಕಾಯ ಹಾಗೆ ತಾರ್ಕಣೆಗೆ ಬಂದಿತು. ಆದುದರಿಂದ ನನಗೆ ಅವನು ಹೇಳಿ ಕಳುಹಿರುವ ಜೋಯಿಸವೂ ತಪ್ಪಲಾರದು. ಇದನ್ನು ನಂಬಿಯೇ ನಂಬಬೇಕು. 'ಪೃಷ್ಠಶೀತ, ಪ್ರಾಣನಾಶ' ಎಂಬುದು ಯುಕುತಿಗೂ ಅನುಭವಕ್ಕೂ ತಕ್ಕ ಮಾತೇ ಸರಿ. ಇನ್ನು ಮೇಲೆ ನಾನು ಬಹಳ ಎಚ್ಚರಿಕೆಯಾಗಿರಬೇಕು; ಎಂದೂ ಕಾಲು ತೊಳೆಯಲಾಗದು. ಇದರ ಮೇಲೆ ದೇವರು ಬಿಟ್ಟ ದಾರಿಯಾಗಲಿ" ಎಂದರು.

೯ನೆಯ ಪ್ರಕರಣ.

ಗುರುಗಳು ಕುದುರೆಯಮೇಲಿಂದ ಬಿದ್ದುದು.

ಈ ರೀತಿಯಾಗಿ ಗುರುಗಳು 'ಪೃಷ್ಠಶೀತಕ್ಕೆ' ಅವಕಾಶಕೊಡದಂತೆ ಬಹಳ ಎಚ್ಚರಿಕೆಯಿಂದ ಕೆಲವು ದಿನಗಳನ್ನು ಕಳೆದರು. ಅವರ ಶಿಷ್ಯರಾದ ಪಂಚರತ್ನಗಳು ಊಟ ಉಪಚಾರ ಇವುಗಳ ಮೇಲೆ ವಿಶೇಷವಾಗಿ ದೃಷ್ಟಿಯಿಟ್ಟಿದ್ದರೇ ಹೊರತು ಮಠದ ವೆಚ್ಚಕ್ಕೆ ಹಣವನ್ನು ಒದಗಿಸಿಕೊಡಲು ಯಾವ ಬಗೆಯ ಪ್ರಯತ್ನವನ್ನೂ ಮಾಡುತ್ತಿರಲಿಲ್ಲ. ಮಠದ ವರುಮಾನವು ಕಡಮೆಯಾಗುತ್ತ ಬಂದಿತು; ವೆಚ್ಚವು ಮಾತ್ರ ದಿನ ದಿನವೂ ಹೆಚ್ಚಿತು. ಇದನ್ನು ನೋಡಿ ಗುರುಗಳು 'ನಾವು ನಾಡುಗಳ ಮೇಲೆ ಹೋಗದೆ ಮಠದಲ್ಲಿಯೇ ನೆಲಸಿದ್ದರೆ ಶಿಷ್ಯರಿಂದ ಬರಬೇಕಾದ ಕಾಣಿಕೆ ಮುಂತಾದುದು ಬರುವುದಿಲ್ಲ. ವೆಚ್ಚಕ್ಕೆ ಹಣವಿಲ್ಲದೆ ಪೇಚಾಡಬೇಕಾಗುತ್ತದೆ' ಎಂದರು. ಆ ಮಾತನ್ನು ಕೇಳಿ ಶಿಷ್ಯರು 'ಅಹುದು ಸ್ವಾಮಿ! ತಾವು ಹೇಳಿದುದು ನಿಜವೇ ಸರಿ. ಏಳಿ ಹೊರಡುವ' ಎನ್ನಲು, ಗುರುಗಳು ಶಿಷ್ಯಾರ್ಜನೆಗೋಸುಗ ತಮ್ಮ ಐವರು ಶಿಷ್ಯರನ್ನೂ ಕರೆದುಕೊಂಡು ಊರೂರು ಸುತ್ತಲಿಕ್ಕೆ ಹೊರಟರು. ಸ್ವಲ್ಪದೂರ ಪಯಣವು ಸಾಗಿತು. ಅಷ್ಟರೊಳಗೆ ತಲೆಬುರುಡೆ ಕಾಯ್ದು ಹೋಗುವಹಾಗೆ ಬಿಸಿಲೇರಿತು. ಗುರುಗಳು ಬಿಸಿಲ ಝಳವನ್ನು ತಡೆಯಲಾರದೆ ಆಕಡೆ ಈಕಡೆ ಒಲೆದಾಡಿಕೊಂಡು ಕುದುರೆಯ ಮೇಲೆ ಉಯ್ಯಾಲಾಡುತ್ತ ಹೋಗುತ್ತಿದ್ದರು. ಹೀಗೆ ಹೋಗುತ್ತಿದ್ದಾಗ ಕೆಳಗೆ ನೇಲುತ್ತಿದ್ದ ಒಂದು ಮರಗೊಂಬು ತಗುಲಿ ಅವರ ತಲೆಪಾಗು ನೆಲಕ್ಕೆ ಬಿದ್ದುಹೋಯಿತು. 'ಶಿಷ್ಯರು ಬುದ್ಧಿವಂತರು, ಹೇಗಿದ್ದರೂ ಪಾಗನ್ನು ಎತ್ತಿ ಇಟ್ಟುಕೊಳ್ಳುತ್ತಾರೆ. ನಾನು ಈ ಅಲ್ಪ ವಿಷಯವನ್ನು ಅವರಿಗೆ ಹೇಳಬೇಕೇ?' ಎಂದೆಣಿಸಿ ಗುರುಗಳು ಏನೂ ಮಾತನಾಡದೆ ಸ್ವಲ್ಪ ದೂರ ಮುಂದಕ್ಕೆ ಪಯಣಮಾಡಿದರು.

ಬಳಿಕ ಬಿಸಿಲ ಜಳದಿಂದ ತಲೆಯಮೇಲೆ ಬೆಂಕಿಯನ್ನು ಸುರಿದಹಾಗೆ ಆಗಲು, ಗುರುಗಳು ಶಿಷ್ಯರನ್ನು ನೋಡಿ, 'ನನ್ನ ತಲೆಪಾಗೆಲ್ಲಿ? ಕೊಡಿ' ಎಂದು ಕೇಳಿದರು. ಅವರು 'ತಮ್ಮ ತಲೆಪಾಗು ಬಿದ್ದ ಕಡೆಯಲ್ಲಿಯೇ ಬಹುಶಃ ಇರಬಹುದು' ಎಂದು ಹೇಳಲು, ಗುರುಗಳು ಕೋಪಗೊಂಡು, 'ಬಿದ್ದುದನ್ನೆಲ್ಲಾ ಎತ್ತಿಕೊಳ್ಳಬೇಡವೋ? ಇದನ್ನೂ ನಾನು ಹೇಳಬೇಕೋ? ನಿಮಗೆ ಇಷ್ಟರಮಟ್ಟಿಗೆ ಜ್ಞಾನ ಬೇಡವೇ?' ಎಂದರು. ಒಡನೆ ಮಡ್ಡಿ ವೇಗವಾಗಿ ಹಿಂದಕ್ಕೆ ಓಡಿಹೋಗಿ ಬಿದ್ದ ಪಾಗನ್ನು ಎತ್ತಿಕೊಂಡು ಬರುತ್ತಿದ್ದನು. ದಾರಿಯಲ್ಲಿ, ಕಳೆದ ರಾತ್ರಿ ಚೆನ್ನಾಗಿ ಬೆಳೆದಿದ್ದ ಹಸಿಯ ಹುಲ್ಲನ್ನು ಅಳತೆಯರಿಯದೆ ಮೇದಿದ್ದ ತಮ್ಮ ಕುದುರೆ ಉಚ್ಚಿದ್ದ ಲದ್ದಿಯನ್ನು ಕಂಡು, 'ಬಿದ್ದುದನ್ನೆಲ್ಲಾ ಎತ್ತಿಕೊಳ್ಳಬೇಡವೋ? ನಿಮಗೆ ಜ್ಞಾನವಿಲ್ಲವೇ?' ಎಂದು ಗುರುಗಳು ಆಗಲೇ ಕನಲಿದರು. 'ಇಲ್ಲಿ ಬಿದ್ದಿರುವ ಲದ್ದಿಯನ್ನು ಎತ್ತಿಕೊಂಡು ಹೋಗದೆ ಇದ್ದರೆ ತಿರುಗಿ ಮುಟ್ಟಾಳಪಟ್ಟವು ಬರುವುದರಲ್ಲಿ ಸಂದೇಗವಿಲ್ಲ. ಆದುದರಿಂದ ಗುರುಗಳು ಹೇಳುವುದಕ್ಕೆ ಮುಂದೆಯೇ ಈ ಕೆಲಸವನ್ನು ಮಾಡಿ ಅವರ ಮೆಚ್ಚಿಕೆಯನ್ನು ಪಡೆದರೆ ನನ್ನ ಬುದ್ಧಿಕೌಶಲವು ಸಫಲವಾಗುವುದು' ಎಂದು ಆಲೋಚಿಸಿ, ಆ ಲದ್ದಿಯನ್ನು ಗುರುಗಳ ತಲೆಪಾಗಿನಲ್ಲಿ ಎತ್ತಿಕೊಂಡು ಓಡಿಬಂದು ಬಹಳ ಮರ್ಯಾದೆಯೊಡನೆ ಅವರ ಕೈಗೆ ನೀಡಿದನು. ತಲೆಪಾಗೆಲ್ಲಾ ಉಚ್ಚೆಲು ಲದ್ದಿಯಿಂದ ಕಶ್ಮಲವಾಗಿರುವುದನ್ನು ನೋಡಿ ಗುರುಗಳು 'ಛಿ! ಛಿ!' ಎಂದು ಬಹಳವಾಗಿ ರೇಗಿಕೊಂಡರು. ಆಗ ಶಿಷ್ಯರೆಲ್ಲರೂ ಕೂಡಿ "ಇದೇನು ಸ್ವಾಮಿ! ತಮಗೆ ಬುದ್ಧಿ ಮಟ್ಟವಿಲ್ಲವೇ? ಬಿದ್ದುದನ್ನೆಲ್ಲಾ ಎತ್ತಿಕೊಳ್ಳಬೇಕೆಂದು ಹಿಂದೆ ಅಪ್ಪಣೆಮಾಡಿದಿರಿ. ಗುರುಗಳ ಮಾತನ್ನು ಎಂದಿಗೂ ಮೀರಕೂಡದೆಂದು ಭಯಭಕ್ತಿಯಿಂದ ತಮ್ಮ ಅಪ್ಪಣೆಯ ಮೇರೆಗೆ ಕೆಲಸಮಾಡಿದುದಕ್ಕೆ ಈಗ ಹೀಗೆ ಕೆರಳಿಕೊಳ್ಳುತ್ತೀರಿ. ನಾವು ಇನ್ನು ಹೇಗೆ ನಡೆದುಕೊಳ್ಳಬೇಕೋ ತಿಳಿಯಲಿಲ್ಲವಲ್ಲಾ" ಎಂದು ಕೂಗಿಕೊಂಡರು. ಆಗ ಗುರುಗಳು ಸಿಟ್ಟನ್ನು ಅಡಗಿಸಿಕೊಂಡು "ತಮ್ಮಂದಿರಾ! ಹಾಗಲ್ಲ. ಬಿದ್ದುದರಲ್ಲಿ ಎತ್ತಿಕೊಳ್ಳತಕ್ಕುದೂ ಎತ್ತಿಕೊಳ್ಳತಗದುದೂ ಉಂಟು. ಆವುದನ್ನೇ

ಆಗಲಿ ಚೆನ್ನಾಗಿ ನೋಡಿ ತಿಳಿದು ಕೆಲಸಮಾಡಬೇಕು. ಹಾಗೆ ಮಾಡದಿದ್ದರೆ ನಮಗೂ ಪಶುಗಳಿಗೂ ಏನು ಭೇದ?'' ಎಂದು ಮನನೊಂದುಕೊಂಡು ಹೇಳಿದರು. ಅದಕ್ಕೆ ಶಿಷ್ಯರು ``ಸ್ವಾಮೀ! ನಾವು ಅಷ್ಟು ತಿಳಿವಳಿಕೆಯವರಲ್ಲ. ಮುಂದೆ ಇಂಥ ತೊಂದರೆಗಳು ಉಂಟಾಗದಂತೆ ಎತ್ತಿಕೊಳ್ಳಬೇಕಾದುವನ್ನು ಮಾತ್ರ ಇಂಥವೆಂಬುದಾಗಿ ವಿಂಗಡಿಸಿ ಬರೆದುಕೊಡಬೇಕು'' ಎಂದರು. ಗುರುಗಳು 'ಹಾಗೆಯೇ ಆಗಲಿ' ಎಂದು ಒಂದು ಪಟ್ಟಿಯನ್ನು ಬರೆದುಕೊಟ್ಟರು.

ಬಳಿಕ ಎಲ್ಲರೂ ಮುಂದಕ್ಕೆ ಪಯಣಮಾಡಿ ಹಲವು ಗ್ರಾಮಗಳನ್ನೂ ನಗರಗಳನ್ನೂ ಸುತ್ತಿ ಅನೇಕ ಕಷ್ಟಗಳಿಗೆ ಗುರಿಯಾಗಿ ಅಲ್ಪಸ್ವಲ್ಪ ಹಣವನ್ನು ಗಳಿಸಿಕೊಂಡು ತಮ್ಮೂರಿಗೆ ಮರಳಿ ಬರುತ್ತಿದ್ದರು. ಹೀಗೆ ಬರುತ್ತಿರಲು, ದಾರಿಯಲ್ಲಿ ಒಂದುಕಡೆ ಮೊದಲು ದಿವಸ ಹೇರಳವಾಗಿ ಮಳೆಹೊಯ್ದು ನೆಲವು ಬಹಳ ಕೆಸರಾಗಿದ್ದಿತು. ಆ ಜಾರುನೆಲದಲ್ಲಿ ಕಾಲಮೇಲೆ ಕಾಲುಹಾಕುತ್ತ ಮೆಲ್ಲಗೆ ನಡೆದುಹೋಗುತ್ತಿದ್ದ ಗುರುಗಳ ಕುಂಟುಕಾಲುಕುದುರೆ ಒಂದೆಡೆಯಲ್ಲಿ ಕಾಲಿಗೆ ಹಿಡಿತವಿಲ್ಲದೆ ಹೋಗಿ ಜಾರಿ ಬಿದ್ದಿತು. ಆಗ ಅದರಮೇಲೆ ನಡುಗುತ್ತ ಕುಳಿತಿದ್ದ ಗುರುಗಳೂ ಹೊರಳಿಕೊಂಡು ಅರುಗಿನಲ್ಲಿದ್ದ ಹಳ್ಳದಲ್ಲಿ ತಲೆ ಕೆಳಗೆಯೂ ಕಾಲು ಮೇಲೆಯೂ ಆಗಿ ಬಿದ್ದರು. ಅವರ ಒಂದು ಕಾಲು ಅಂಕವಣಿಯಲ್ಲಿ ಸಿಲುಕಿಕೊಂಡಿದ್ದುದರಿಂದ ಏಳಲು ಅವಕಾಶವಿಲ್ಲದೆ ಹೋ! ಎಂದು ಒರಲುತ್ತ 'ಪ್ರಿಯಶಿಷ್ಯರೇ! ಬೇಗನೆ ಬಂದು ನನ್ನನ್ನು ಎತ್ತಿ. ಅನ್ಯಾಯವಾಗಿ ಸತ್ತುಹೋಗುತ್ತೇನೆ. ತಡಮಾಡಬೇಡಿ' ಎಂದು ಅರಚಿಕೊಂಡರು. ಶಿಷ್ಯರು ಥಟ್ಟನೆ ಓಡಿಬಂದು, 'ಸ್ವಾಮೀ! ಸ್ವಲ್ಪ ನಿಧಾನಿಸಿ. ಏತಕ್ಕೆ ಹೀಗೆ ಒಂದೇ ಉಸಿರಿನಲ್ಲಿ ಕೂಗಿಕೊಳ್ಳುತ್ತೀರಿ. ನೀವು ಹಿಂದೆ ಬರೆದುಕೊಟ್ಟಿರುವ ಪಟ್ಟಿಯನ್ನು ನೋಡದೆ ನೀವು ಹೇಳಿದ ಮಾತ್ರಕ್ಕೆ ಎತ್ತಿಬಿಟ್ಟರೆ ಆದೀತೇ? ಇರಿ, ಪಟ್ಟಿಯನ್ನು ನೋಡುವ. ಹಿಂದೆ ನಿಮ್ಮ ಅಪ್ಪಣೆಯಮೇರೆಗೆ ನಡೆದು ನಿಮ್ಮ ಕೋಪಕ್ಕೆ ಗುರಿಯಾದುದು ಇನ್ನೂ ನೆನೆಪಿನಲ್ಲಿದೆ. ಆತುರಪಡಬೇಡಿ' ಎಂದು ಹೇಳಿ ಮರುಳನನ್ನು ನೋಡಿ, 'ಹಿಂದೆ ಗುರುಗಳು ಬರೆದುಕೊಟ್ಟಿರುವ ಪಟ್ಟಿ

ಯನ್ನು ತೆಗೆದುಕೊಂಡು ಓದು' ಎಂದರು. ಅವನು ಓದತೊಡಗಿದನು. "ಬಿದ್ದ ತಲೆಪಾಗನ್ನು ಎತ್ತಬೇಕು; ಬಿದ್ದ ದೋತ್ರವನ್ನೂ ಬೈರವಾಸವನ್ನೂ ಎತ್ತಬೇಕು; ಬಿದ್ದ ಕವಚ, ಅಂಗಿ, ಉಳ್ಳುಡೆ ಇವುಗಳನ್ನು ಎತ್ತಬೇಕು" ಎಂದು ಅವನು ಓದಿದಹಾಗೆಲ್ಲಾ ಅವರು ಗುರುಗಳ ಮೈಯಿಂದ ಒಂದೊಂದಾಗಿ ಆ ಪದಾರ್ಥಗಳನ್ನೆಲ್ಲಾ ಬಿಚ್ಚಿ ತೆಗೆದು ಒಂದುಕಡೆ ಇಟ್ಟರು. ಗುರುಗಳು ಮಾತ್ರ ಜಿನ್ನದೇವರಂತೆ ಬತ್ತಲೆಯಾಗಿ ಅಲ್ಲಿಯೇ ನರಳುತ್ತ ಬಿದ್ದಿದ್ದರು.

ಹೀಗೆ ಹಳ್ಳದಲ್ಲಿ ಬಿದ್ದು ನರಳುತ್ತ ತಮ್ಮನ್ನು ಎತ್ತಹೇಳಿ ಎಷ್ಟು ಬೇಡಿಕೊಂಡರೂ ಎಷ್ಟು ಬೇಸರಪಟ್ಟರೂ ಎಷ್ಟು ಕಡಿದಾಗಿ ಮಾತನಾಡಿದರೂ ಎಷ್ಟು ಹಲುಬಿದರೂ ಕೇಳದೆ, ಅವರು "ಸ್ವಾಮಿ! ಕೂಗಿಕೊಂಡೇನು ಫಲ? ಇದು ಪಟ್ಟಿಯಲ್ಲಿಲ್ಲ. ಆದುದರಿಂದ ನಮಗೆ ಎತ್ತುವುದಕ್ಕೆ ಅಧಿಕಾರವಿಲ್ಲ" ಎಂದು ಒಂದೇ ಹಿಡಿತವಾಗಿ ಹೇಳಿ, ಮರಳಿ "ಸ್ವಾಮಿ! ಎತ್ತಲಿಲ್ಲವೆಂದು ಸುಮ್ಮನೆ ನಿರಪರಾಧಿಗಳಾದ ನಮ್ಮ ಮೇಲೆ ಕನಲುತ್ತೀರಲ್ಲಾ. ಒಳ್ಳೆಯದು, ಪಟ್ಟಿಯನ್ನು ನಿಮ್ಮ ಕಣ್ಣಿಂದಲೇ ನೋಡಿ. ನಿಮ್ಮನ್ನೂ ಎತ್ತಬೇಕು ಎಂದು ಎಲ್ಲಿ ಬರೆದಿದೆ? ತೋರಿಸಿ, ನೋಡುವ. ನಾವು ಪಟ್ಟಿಯಲ್ಲಿ ಬರೆದಿರುವ ಮೇರೆಗೆ ಮಾಡುವೆವೇ ಹೊರತು ಬರೆಯದೆ ಇರುವುದನ್ನು ತಿಳಿಯದವರ ಹಾಗೆ ಹದ್ದುಮೀರಿ ಮಾಡಲು ಎಂದಿಗೂ ಒಪ್ಪೆವು. ಹಾಗೆ ಹದ್ದುಮೀರಿ ಮಾಡಿ ಛೀ! ಎನಿಸಿಕೊಳ್ಳುವುದು ನಮಗೆ ತಕ್ಕುದಲ್ಲ" ಎಂದರು. ಗುರುಗಳು ಅವರ ಒರಟುತನವನ್ನೂ ಬೆಪ್ಪುತನವನ್ನೂ ನೋಡಿ, ಜೀವವನ್ನು ಉಳಿಸಿಕೊಳ್ಳಲು ಬೇರೆ ದಾರಿಯನ್ನು ಕಾಣದೆ 'ತಮ್ಮಂದಿರಾ! ಓಲೆಯನ್ನೂ ಕಂಠವನ್ನೂ ಕೊಡಿ' ಎಂದು ಕೇಳಿ ಈಸಿಕೊಂಡು ಬಿದ್ದಿದ್ದ ಎಡೆಯಲ್ಲಿಯೇ 'ನಾನು ಬಿದ್ದರೂ ನನ್ನನ್ನೂ ಎತ್ತಬೇಕು' ಎಂದು ಕೈಕಾಲುಗಳನ್ನು ನಡುಗಿಸಿಕೊಂಡೇ ಓಲೆಯಲ್ಲಿ ಬರೆದುಕೊಟ್ಟರು.

ಬಳಿಕ ಶಿಷ್ಯರು ಗುರುಗಳು ಬರೆದುದನ್ನು ಚೆನ್ನಾಗಿ ಓದಿನೋಡಿಕೊಂಡು ಒಟ್ಟಿಗೆ ಹೋಗಿ ಅವರನ್ನು ಎತ್ತಿದರು. ಅವರು ಬಿದ್ದ ಹಳ್ಳ

ದಲ್ಲಿ ಕೆಸರು ಬಹಳವಾಗಿ ತುಂಬಿದ್ದುದರಿಂದ ಅವರ ಮೈಯೆಲ್ಲಾ ಕೆಸರಾಗಿ ಕೊಳೆಯಾಗಿದ್ದಿತು. ಬಿದ್ದು ಬಹಳ ಹೊತ್ತಾಗಿದ್ದುದರಿಂದ ಮೈಯಲ್ಲಿ ಕೆಲವುಕಡೆ ಕೆಸರು ಅಂಟಿಕೊಂಡು ಒಣಗಿಹೋಗಿ ಬಿಗಿತವನ್ನು ಉಂಟುಮಾಡಿತು. ಇದನ್ನು ಸೈರಿಸಲಾರದೆ ಗುರುಗಳು ನರಳುತ್ತಿರಲು, ಶಿಷ್ಯರು ಅವರನ್ನು ಒತ್ತಂಬದಿಂದ ಎತ್ತಿಕೊಂಡು ಹೋಗಿ ಪಕ್ಕದಲ್ಲಿದ್ದ ಕೊಳದಲ್ಲಿ ಮುಳುಗಿಸಿ ಮೈಯನ್ನು ಚೆನ್ನಾಗಿ ತೊಳೆದರು. ತರುವಾಯ ಎಂದಿನಂತೆ ಅವರಿಗೆ ಉಡಿಗೆಯನ್ನೆಲ್ಲಾ ಉಡಿಸಿ ಒಂದು ಕಡೆ ಕುಳ್ಳಿರಿಸಿದರು. ಆಮೇಲೆ ಎಲ್ಲರೂ ಸೇರಿ ಬಹಳ ಸಾಹಸಮಾಡಿ ಕುದುರೆಯನ್ನು ಮೇಲಕ್ಕೆ ಎಬ್ಬಿಸಿ ಅದರ ಮೈಯನ್ನು ತೊಳೆದು ಸ್ವಲ್ಪ ದೂರ ನಡೆಯಿಸಿಕೊಂಡು ಹೋಗಿ ನಿಲ್ಲಿಸಿ, ಗುರುಗಳನ್ನು ಎತ್ತಿಕೊಂಡು ಬಂದು ಅದರ ಮೇಲೆ ಕುಳ್ಳಿರಿಸಿದರು. ಗುರುಗಳು ಕೆಸರಿಲ್ಲದ ಕಡೆಯಲ್ಲಿಯೇ ಕುದುರೆಯನ್ನು ಬಿಡುತ್ತ ಪಯಣಮಾಡಿದರು. ಕುದುರೆ ಮೆಲ್ಲಗೆ ಕುಂಟುಕಾಲು ಹಾಕುತ್ತ ನಡೆಯಿತು. ಆ ದಿನ ಸಂಜೆಗೆ ಸರಿಯಾಗಿ ಎಲ್ಲರೂ ಮಠಕ್ಕೆ ಹೋಗಿ ಸೇರಿದರು.

---

೧೦ ನೆಯ ಪ್ರಕರಣ.

ಗುರುಗಳನ್ನು ಒಪ್ಪಮಾಡಿದುದು.

ಗುರುಗಳು ಹಳ್ಳದಲ್ಲಿ ಬಿದ್ದು ಏಳುವುದಕ್ಕಾಗದೆ ಕೆಡೆದಿದ್ದಾಗ ಶಿಷ್ಯರು ಪಟ್ಟೆಯಮೇಲೆಯೇ ಜ್ಞಾನವಾಗಿ ಕಳವಳಗೊಂಡಿದ್ದುದರಿಂದ ಹಿಂದೆ ಆ ಬ್ರಾಹ್ಮಣನು ಹೇಳಿದ್ದ ಜೋಯಿಸವು ಅವರ ನೆನೆಪಿಗೆ ಬರಲಿಲ್ಲ. ಕುದುರೆಯೇರಿಸಿದಮೇಲೆ, ಪೃಷ್ಠವು ತಣ್ಣಗಾಯಿತೆಂದು ಗುರುಗಳಿಗೆ ಮಾತ್ರ ತಿಳಿಯಿತು. ಆದರೂ ಅವರು ಆ ಸಂಗತಿಯನ್ನು ಒಬ್ಬರಿಗೂ ಹೇಳದೆ ತಮ್ಮ ಮನದಲ್ಲಿಯೇ ಕೊರಗುತ್ತಿದ್ದರು. ಮಠದ ಬಾಗಿಲಿಗೆ ಬಂದ ಕೂಡಲೆ ಕುದುರೆಯನ್ನಿಳಿದು 'ಬದುಕು ಬಡಜೀವವೇ!' ಎಂದು ಎಂದುಕೊಂಡು ಒಳಗೆ ಹೋಗಿ ಮಲಗಿಕೊಂಡರು. ಶಿಷ್ಯರು ತಮ್ಮ

ತಮ್ಮ ಕೆಲಸವನ್ನು ಗಮನಿಸುತ್ತಿದ್ದರು. ಮುಂದೆಯೇ ಮುಪ್ಪಿನಿಂದ ಕುಗ್ಗಿಹೋಗಿದ್ದ ಗುರುಗಳಿಗೆ "ಅಪಿ ಚ ಪಿಶಾಚಗ್ರಸ್ತಃ" ಎಂಬಂತೆ ಬಿದ್ದಾಗ ಪೆಟ್ಟು ತಗುಲಿ ಮೈಯೆಲ್ಲಾ ಜಜ್ಜಿಹೋದುದರಿಂದ ಆ ಇರುಳೆಲ್ಲಾ ಕಣ್ಣಿಗೆ ನಿದ್ದೆಯೇ ಹತ್ತಲಿಲ್ಲ. ಮೈಯನ್ನು ಮುಟ್ಟಿ ಮುಟ್ಟಿ ನೋಡಿಕೊಂಡು ಹೊರಳಾಡುತ್ತ ಆ ಬ್ರಾಹ್ಮಣನು ಹೇಳಿದ ಜೋಯಿಸವನ್ನು ನೆನೆನೆನೆದು ಅಳ್ಳಿ ಬಳ್ಳಿ ಬೆಚ್ಚಿ ಬೆದರಿ ಒಂದು ನಿಮಿಷವೂ ಕಣ್ಣು ಮುಚ್ಚದೆ ತತ್ತರಗೊಂಡು ನಿಟ್ಟುಸಿರುಬಿಡುತ್ತ ಇರುಳನ್ನು ಕಳೆದರು. ಈ ಬೇಳಂಬದಿಂದ ಅವರಿಗೆ ಉಂಟಾಗಿದ್ದ ಅಲ್ಪಸ್ವಲ್ಪ ಆಯಾಸವು ಹತ್ತು ಮಡಿ ಹೆಚ್ಚಾಯಿತು. ಹಳ್ಳಕ್ಕೆ ಬಿದ್ದುದರಿಂದ ಮೈಯೆಲ್ಲಾ ಜಜ್ಜಿ ಹೋಗಿ ಹೀಗೆ ಆಯಾಸವುಂಟಾಗಿದೆ ಎಂದು ಅವರು ಎಣಿಸಲೇ ಇಲ್ಲ. ಪೃಷ್ಠವು ತಣ್ಣಗಾಗಿ ಸಾವಿನ ಕಾಲವು ಸಮಿಾಪಿಸಿದುದರಿಂದಲೇ ಹೀಗಾಗಿದೆ ಎಂದು ಮನದಲ್ಲಿ ನಿಶ್ಚಯಿಸಿಕೊಂಡರು. ಬೆಳಗಿನ ಜಾವವು ಎಷ್ಟು ಹೊತ್ತಿಗೆ ಆಗುವುದು ಎಂದು ಇದಿರುನೋಡುತ್ತ ಇದ್ದು ಶಿಷ್ಯರನ್ನು ಕರೆಯಿಸಿದರು. ಶಿಷ್ಯರು ಬಂದು ಅವರ ಕಣ್ಣು ಗುಳಿಬಿದ್ದು ಮಂಜಾಗಿರುವುದನ್ನೂ ಮೊಗವೆಲ್ಲಾ ಕಂದಿ ಕುಂದಿ ಬತ್ತಿ ಸುಕ್ಕುಗೊಂಡು ಬಿಳುಪೇರಿರುವುದನ್ನೂ ತುಟಿಯೊಣಗಿ ನಾಲಗೆಯಲ್ಲಿ ದ್ರವವಿಲ್ಲದೆ ಮಾತು ತೊದಲುವುದನ್ನೂ ಮರುಳುಹಿಡಿದಂತೆ ನಾಲ್ಕು ಕಡೆಯೂ ದಿಟ್ಟಿಸಿ ದಿಟ್ಟಿಸಿ ನೋಡುವುದನ್ನೂ ಮೇಲುಸಿರು ತೆಗೆವುದನ್ನೂ ಕಂಡು ಬೆಚ್ಚಿ ಬೆಗಡುಗೊಂಡು, "ಸ್ವಾಮಿಾ! ನಮ್ಮೊಡೆಯಾ! ಇದೇನು ಹೀಗಿದ್ದೀರಿ" ಎಂದು ಕೇಳಿದರು.

ಆಗ ಗುರುಗಳು ನಿಟ್ಟುಸಿರುಬಿಟ್ಟು "ತಮ್ಮಂದಿರಾ! ನನಗೆ ಸಾವು ಸಮಿಾಪಿಸಿತು. ಇನ್ನು ಪ್ರಾಣವು ಒಡಲನ್ನು ಬಿಟ್ಟು ಹಾರಿ ಹೋಗುವಂತೆ ತೋರುತ್ತದೆ. ನೀವು ಒಂದು ಹಳ್ಳವನ್ನು ತೋಡಿ ಅದರಲ್ಲಿ ನನ್ನನ್ನು ಹೊತ್ತುಕೊಂಡುಹೋಗಿ ಇಟ್ಟು ಹೆಣವನ್ನು ಹೂಳುವ ಹಾಗೆ ಹೂತುಬಿಡಿ" ಎಂದರು. ಆ ಮಾತನ್ನು ಕೇಳಿ ಶಿಷ್ಯರು ನಡುಗುತ್ತ 'ಇದೇನು ಸ್ವಾಮಿಾ! ಹೀಗೆ ಅಪ್ಪಣೆಕೊಡುತ್ತೀರಿ' ಎನ್ನಲು,

ಗುರುಗಳು "ಓಹೋ! 'ಪೃಷ್ಠಶೀತ, ಪ್ರಾಣನಾಶ' ಎಂಬುದನ್ನು ನೀವು ಮರೆತೇ ಬಿಟ್ಟಹಾಗೆ ಕಾಣುತ್ತದೆ. ನಿನ್ನೆ ನಾನು ಬಿದ್ದ ಹಳ್ಳದಲ್ಲಿ ನೀರೂ ಕೆಸರೂ ಇದ್ದುದರಿಂದ ನನ್ನ ಪೃಷ್ಠಕ್ಕೆ ಶೀತವು ತಗುಲಿತು. ಆದರೂ ಆಗ ಉಂಟಾದ ಕಳವಳದಿಂದ ಅದು ನನಗೆ ತೋರದೆ ಹೋಯಿತು. ಸ್ವಲ್ಪಹೊತ್ತಿನಮೇಲೆ ಪೃಷ್ಠವು ತಣ್ಣಗಾದುದನ್ನು ಚೆನ್ನಾಗಿ ತಿಳಿದೆನು. ಬ್ರಾಹ್ಮಣನು ಹೇಳಿದ ಮಾತೂ ನೆನೆಪಿಗೆ ಬಂದಿತು. ಇರುಳೆಲ್ಲಾ ವ್ಯಸನವೂ ಹೊರಳಾಟವೂ ಹೆಚ್ಚಿ ತುಸವೂ ನಿದ್ದೆ ಬರಲಿಲ್ಲ. ಆಯಾಸವು ಮಾತ್ರ ಹೆಚ್ಚಾಗುತ್ತ ಬಂದುದರಿಂದ ಸಾವು ಸಮೀಪಿಸಿತು ಎಂದು ತಿಳಿದೆನು. ಇನ್ನು ಬೇರೆ ಮಂತಣವೇನಿದೆ? ಬೇಗನೆ ನನ್ನನ್ನು ಹೂಳುವುದಕ್ಕೆ ಸಮಾಧಿಯನ್ನು ಅನುಗೊಳಿಸಿರಿ" ಎಂದು ಹೇಳಿದರು.

ಅವರ ಮಾತನ್ನು ಕೇಳಿ ಶಿಷ್ಯರು ಬ್ರಾಹ್ಮಣನು ಹೇಳಿದ ಆ ಅಪಶಕುನವಾದ ಗುರುತನ್ನು ನೆನೆದುಕೊಂಡು ಮನಮರುಗಿ, ತಮ್ಮ ದುಗುಡವನ್ನು ಹೊರಗೆ ತೋರಿಸಿಕೊಳ್ಳದೆ ಒಳಗೆ ಅಡಗಿಸಿಕೊಂಡು, ಹಲವು ಬಗೆಯಿಂದ ಗುರುಗಳ ಮನಕ್ಕೆ ಧೈರ್ಯವುಂಟಾಗುವಂತೆ ಹಲವು ಮಾತುಗಳನ್ನಾಡಿ ಸಂತೈಸಲು ಪ್ರಯತ್ನಪಟ್ಟರು. ಆದರೆ ಅವರ ಪ್ರಯತ್ನವು ಸಫಲವಾಗಲಿಲ್ಲ. ಎಷ್ಟು ಸಂತೈಸಿದರೂ ಗುರುಗಳ ಮನದ ಬೇಗೆ ಆರಲಿಲ್ಲ. ಅವರ ಕಳವಳವು ಹೆಚ್ಚುತ್ತ ಬಂದಿತು. ಅಡಿಗಡಿಗೆ 'ಪೃಷ್ಠಶೀತ, ಪ್ರಾಣನಾಶ; ಸಾವು ಸಮೀಪಿಸಿತು. ಸಮಾಧಿಯನ್ನು ಸಿದ್ಧಪಡಿಸಿರಿ' ಎಂಬ ಮಾತುಗಳನ್ನೇ ಹೇಳುತ್ತ ಇದ್ದರು. ಇದನ್ನು ನೋಡಿ ಶಿಷ್ಯರು ದಿಗಿಲುಬಿದ್ದು 'ಇವರನ್ನು ಹೀಗೆ ಬಿಡಕೂಡದು. ಏನಾದರೂ ಒಂದುಪಾಯವನ್ನು ಮಾಡಿ ಈ ಬೇಳಂಬವನ್ನು ತಪ್ಪಿಸಿ ಇವರನ್ನು ಹಿಡಿದಿರುವ ಶನಿಯನ್ನು ತೊಲಗಿಸಬೇಕು' ಎಂದಾಲೋಚಿಸಿ, ಮಂಕನನ್ನು ಕುರಿತು 'ಎಲೋ ತಮ್ಮಾ! ಈ ಊರಿನಲ್ಲಿ ಹಿಂದೆ ಜೋಯಿಸನಾಗಿದ್ದ ಗಾವಿಲಯ್ಯನನ್ನು ಬಲ್ಲೆಯಷ್ಟೆ. ಅವನ ಮಗನಾದ ಸಬ್ಬವಕಾರನನ್ನು ಕರೆದುಕೊಂಡು ಬಾ. ಅವನಾದರೆ ಗುರುಗಳನ್ನು ಮೆಟ್ಟಿರುವ ಶನಿಯನ್ನು ಓಡಿಸಿ, ಅವರ ಮನಕ್ಕೆ ಧೈರ್ಯವನ್ನು ಉಂಟುಮಾಡಬಲ್ಲನು. ತಡಮಾಡಬೇಡ. ಓಡಿಹೋಗು'

ಎಂದು ಹೇಳಿ ಕಳುಹಿಸಿದರು. ಮಂಕನು ಒಂದೇ ಓಟವಾಗಿ ಓಡಿ ಹೋಗಿ ಸಬ್ಬವಕಾರನನ್ನು ಕರೆದುಕೊಂಡು ಬಂದನು.

ಸಬ್ಬವಕಾರನು ಬಂದಕೂಡಲೆ ಶಿಷ್ಯರು ಅವನನ್ನು ಸ್ವಲ್ಪ ದೂರಕ್ಕೆ ಕರೆದುಕೊಂಡು ಹೋಗಿ ನಡೆದ ಸಂಗತಿಗಳನ್ನೆಲ್ಲಾ ವಿವರವಾಗಿ ಹೇಳಿ 'ಅಯ್ಯಾ! ನೀನು ಹೇಗಾದರೂ ನಮ್ಮ ಗುರುಗಳ ಮನಕ್ಕೆ ಧೈರ್ಯ ವನ್ನು ಉಂಟುಮಾಡಿ ಕಾಪಾಡಬೇಕು' ಎಂದು ಬೇಡಿಕೊಂಡರು. ಅವನು 'ಹಾಗೆಯೇ ಆಗಲಿ, ನೋಡುವ' ಎಂದು ಹೇಳಿ, ಗುರುಗಳ ಸಮೀಪಕ್ಕೆ ಬಂದು, 'ಸ್ವಾಮಿ! ನನ್ನ ಗುರುವೇ! ನನ್ನಪ್ಪನೇ! ನನ್ನ ತಂದೆಯೇ! ನನ್ನ ದೇವರೇ! ನಿಮಗುಂಟಾಗಿರುವ ಕೊರತೆಯೇನು? ಬಂದಿರುವ ಬೇನೆಯೇನು? ಮನದಲ್ಲಿ ನೆಲೆಗೊಂಡಿರುವ ಮರುಕವೇನು? ತೊಲಗದ ದುಗುಡವೇನು? ಈಗಲೇ ಹೇಳಿ' ಎಂದು ಕಣ್ಣೀರು ಬಿಡುತ್ತ ತುಟಿಯಲುಗಿಸುತ್ತ ಮೊಗದಲ್ಲಿ ಬೆವರುಸುರಿಸುತ್ತ ಕೇಳಿದನು. ಇದಕ್ಕೆಲ್ಲಾ ಗುರುಗಳು "ಪೃಷ್ಠಶೀತ, ಪ್ರಾಣನಾಶ" ಎಂಬ ಒಂದು ಮಾತನ್ನು ಹೊರತು ಬೇರೆ ಆವ ಮರುಮಾತನ್ನೂ ಹೇಳಲಿಲ್ಲ. ಆಗ ಸಬ್ಬವಕಾರನು "ಒಳ್ಳೆಯದು; 'ಪೃಷ್ಠಶೀತ, ನಿಮಗೆ ಪ್ರಾಣನಾಶ' ಎಂದು ಬ್ರಾಹ್ಮಣನು ಹೇಳಿದನಲ್ಲಾ. ನಾನು ಅವನ ಪೃಷ್ಠೋಷ್ಣವು ಅವನಿಗೆ ನಾಶಕರವಾಗುವ ಹಾಗೆ ಮಾಡುತ್ತೇನೆ. ಆ ಬ್ರಾಹ್ಮಣನನ್ನು ನನಗೆ ತೋರಿಸಿರಿ. ಅವನಿಗೆ ಒನಕೆಯ ಪೂಜೆಮಾಡಿ ಪೃಷ್ಠೋಷ್ಣ ವನ್ನು ಹುಟ್ಟಿಸುವುದಲ್ಲದೆ ಅವನಿಂದ ಉಂಟಾಗಿರುವ ಕೇಡನ್ನೆಲ್ಲಾ ಬೇರೊಂದಿಗೆ ಕಿತ್ತುಹಾಕುತ್ತೇನೆ. ಅವನು ಸಿಕ್ಕಿದರೆ ಸಾಕು. ತೋರಿ ಸಿರಿ. ಬೇಗ ತೋರಿಸಿರಿ" ಎಂದನು.

ಅವನ ಮಾತನ್ನು ಕೇಳಿ ಗುರುಗಳಿಗೂ ಮನದಲ್ಲಿ ಸ್ವಲ್ಪ ಕುತುಕ ವುಂಟಾಗಿ, 'ಏನಯ್ಯಾ! ಒನಕೆಯ ಪೂಜೆಯೆಂದೂ ಒಂದು ಪೂಜೆ ಯುಂಟೇ? ನಾನು ಈ ಪೂಜೆಯನ್ನು ಎಂದೂ ಕಂಡೂ ಅರಿಯೆನು, ಕೇಳಿಯೂ ಅರಿಯೆನು. ಅದು ಎಂಥದು? ಹೇಳು' ಎಂದು ಕೇಳಿದರು. ಆಗ ಸಬ್ಬವಕಾರನು 'ಪೃಷ್ಠಶೀತ, ಪ್ರಾಣನಾಶ ಎಂಬ ಮಾತನ್ನೇ

ಆಡುತ್ತಿದ್ದ ಗುರುಗಳು ಇಷ್ಟುಮಟ್ಟಿಗೆ ದಾರಿಗೆ ಬಂದರಲ್ಲಾ.
ಇದು ನನ್ನ ಪುಣ್ಯವೇ ಸರಿ' ಎಂದು ಸಂತಸಗೊಂಡು, "ಸ್ವಾಮಿಾ!
ಒನಕೆಯಪೂಜೆ ಎಂಬುದು ಸಾಮಾನ್ಯವಾದುದಲ್ಲ. ಇದು ಜ್ಞಾನಿ
ಗಳು ಶಾಸ್ತ್ರಿಗಳು ಬ್ರಹ್ಮವಾದಿಗಳು ಎನಿಸಿಕೊಂಡಿರುವ ಜನಗಳಿಗೆ
ತಿಳಿದ ಸಂಗತಿಯಲ್ಲ. ತಾವು ಗಮನಿಸಿ ಕೇಳಿದರೆ ಹೇಳುತ್ತೇನೆ"
ಎಂದನು. ಗುರುಗಳು 'ಹೇಳಯ್ಯಾ! ನಿನ್ನಲ್ಲಿಯೇ ಜ್ಞಾನವಿಟ್ಟು
ಕೇಳುತ್ತೇನೆ' ಎನ್ನಲು, ಸಬ್ಬವಕಾರನು ಕೆಳಗಣ ಕಥೆಯನ್ನು ಹೇಳ
ತೊಡಗಿದನು:—

ಬಾಗೆವಾಡಿ ಎಂಬ ಊರಿನಲ್ಲಿ ಕಿಡಿಗಣ್ಣಪ್ಪ ಎಂಬ ಒಬ್ಬ ಸೆಟ್ಟಿ
ಇದ್ದನು. ಅವನು ಒಳ್ಳೆಯ ಶಿವಭಕ್ತನು. ನಿಚ್ಚವೂ ಜಂಗಮಯ್ಯ
ಗಳಿಗೆ ಉಣಲಿಕ್ಕಬೇಕೆಂಬ ಆಸೆಯಿಂದ ಅವರುಗಳನ್ನು ಎಲ್ಲಿ ಕಂಡರೂ
ಕಾಲಿಗೆರಗಿ 'ಸ್ವಾಮಿಾ! ಗುರುವೇ! ನನ್ನ ತನುಮನಧನವೆಲ್ಲಾ
ನಿಮ್ಮದು. ಕರುಣಿಸಿ ನನ್ನ ಮನೆಗೆ ದಾಸೋಹಕ್ಕೆ ದಯಮಾಡಿಸ
ಬೇಕು' ಎಂದು ಕರೆಯುತ್ತಿದ್ದನು. ಅವನಿಗೆ ಮಕ್ಕಳಿರಲಿಲ್ಲ. ಅವನ
ಹೆಂಡತಿಯಾದ ಸುಗ್ಗವ್ವೆ ನಿಚ್ಚವೂ ಜಂಗಮಯ್ಯಗಳಿಗೆ ಅಡಿಗೆ ಮಾಡಿ
ಮಾಡಿ ಬಡಿಸಿ ಬಹಳ ಬಳಲಿ ಬೇಸತ್ತು 'ಅಯ್ಯೋ ಶಿವನೇ! ಈ ಗೋಳು
ಎಂದಿಗೆ ತಪ್ಪೀತೋ ತಿಳಿಯಲಿಲ್ಲವಲ್ಲಾ. ಇದು ನನಗೆ ಒಪ್ಪಿತವಾಗಿಲ್ಲ
ಎಂದು ಗಂಡನಿಗೆ ತಿಳಿಸಿದರೆ ಅವನು ಬಹಳ ನೊಂದುಕೊಳ್ಳುತ್ತಾನೆ.
ಇದಕ್ಕೇನಾದರೂ ಒಂದುಪಾಯಮಾಡಬೇಕು. ಇಲ್ಲದಿದ್ದರೆ ನನ್ನುಳಿವೇ
ಕಷ್ಟವಾಗುವಹಾಗೆ ಕಾಣುತ್ತದೆ. ನೆರೆಹೊರೆಯವರು ನೆಮ್ಮದಿಯಾಗಿ
ತಮ್ಮ ತಮ್ಮ ಮನೆಯ ಕೆಲಸವನ್ನು ಮಾಡಿಕೊಂಡು ಸುಖಪಡುತ್ತ
ಇಲ್ಲವೇ? ನನ್ನ ಹಣೆಯಲ್ಲಿ ಮಾತ್ರ ಬೆಳಗಾಯಿತು ಎಂದರೆ ಜಂಗ
ಮಯ್ಯಗಳ ಊಟಕ್ಕೆ ಅಮರಿಸುವ ಸಡಗರವೊಂದೇ ಬರೆದಿರುವ ಹಾಗೆ
ತೋರುತ್ತದಲ್ಲಾ. ನನಗೆ ಬೇರೆ ಬದುಕೇ ಇಲ್ಲವೇ! ಗಂಡನಿಗೆ ತಿಳಿ
ಯದ ಹಾಗೆ ಈ ಕಷ್ಟದಿಂದ ಹೇಗಾದರೂ ಬಿಡುಗಡೆ ಮಾಡಿಕೊಳ್ಳ
ಬೇಕು' ಎಂದು ಆಲೋಚಿಸಿ ಒಂದು ಹೂಟವನ್ನು ಎತ್ತಿದಳು.

ಒಂದು ದಿನ ಕಿಡಿಗಣ್ಣಪ್ಪನು ಅಂಗಡಿಯಲ್ಲಿ ಕುಳಿತುಕೊಂಡು ವ್ಯಾಪಾರಮಾಡುತ್ತಿದ್ದನು. ಆಗ ಬೀದಿಯಲ್ಲಿ ಹೋಗುತ್ತಿದ್ದ ಒಬ್ಬ ಜಂಗಮಯ್ಯನನ್ನು ಕಂಡು ತಟ್ಟನೆ ಎದ್ದುಹೋಗಿ ಅವನ ಕಾಲಿಗೆರಗಿ 'ಸ್ವಾಮಿ! ಗುರುವೇ! ಇಂದು ನನ್ನ ಮನೆಗೆ ದಾಸೋಹಕ್ಕೆ ದಯೆ ಮಾಡಿಸಿ ನನ್ನನ್ನು ಕಾಪಾಡಬೇಕು' ಎಂದು ಬೇಡಿಕೊಂಡನು. ಹಸಿದಿದ್ದ ಜಂಗಮಯ್ಯನು ಶಿವಸ್ಮರಣೆಯನ್ನು ಮಾಡಿ 'ಹಾಗೆಯೇ ಆಗಲಿ' ಎಂದು ಒಪ್ಪಿಕೊಳ್ಳಲು, ಸೆಟ್ಟಿ 'ಗುರುವೇ! ನಾನು ಈಗ ಅಂಗಡಿಯಲ್ಲಿ ಕೆಲಸವಾಗಿದ್ದೇನೆ. ನನ್ನ ಮನೆ ಅಗೋ! ಆ ಬೇವಿನಮರದ ಪಕ್ಕದಲ್ಲಿದೆ. ನೀವು ಮನೆಗೆ ಹೋಗಿ ನನ್ನ ಹೆಂಡತಿಯನ್ನು ಕಂಡು ಅವಳಿಗೆ ಈ ಸಂಗತಿಯನ್ನು ಹೇಳಿ ನಾನು ಬರುವವರೆಗೂ ಎಲ್ಲಿಯೂ ಹೋಗದೆ ಅಲ್ಲಿಯೇ ಮೂರ್ತಮಾಡಿ ಇರಿ' ಎಂದನು. ಅಯ್ಯನು ಸಂತಸಗೊಂಡು ಕಿಡಿಗಣ್ಣಪ್ಪನ ಮನೆಗೆ ಹೋಗಿ ಅವನು ಹೇಳಿದ ಮಾತನ್ನು ಅವನ ಹೆಂಡತಿಯೊಡನೆ ಹೇಳಿದನು. ಅವಳು 'ಇವನು ಎಂದೂ ಇಲ್ಲಿಗೆ ಬಂದವನ ಹಾಗೆ ಕಾಣುವುದಿಲ್ಲ. ನನ್ನ ಉಪಾಯವು ಕೈಗೂಡುವ ಹಾಗೆ ತೋರುತ್ತದೆ' ಎಂದು ಎಂದುಕೊಂಡು, 'ಗುರುವೇ! ಬಹಳ ಒಳ್ಳೆಯದು. ಇಲ್ಲಿ ಮೂರ್ತವಮಾಡಿ' ಎಂದು ಮನೆಯ ಹಜಾರದಲ್ಲಿ ಚಾಪೆಯನ್ನು ತಂದು ಹಾಸಿದಳು. ಅಯ್ಯನು ಕುಳಿತುಕೊಂಡನು.

ತರುವಾಯ ಸುಗ್ಗವ್ವೆ ಮನೆಯ ಅಂಗಳವನ್ನು ಚೆನ್ನಾಗಿ ಗುಡಿಸಿ ಎಲ್ಲಾ ಕಡೆಯೂ ಸೆಗಣಿಯ ನೀರನ್ನು ಚಿಮುಕಿಸಿ ಸಾರಿಸಿದಳು. ಬಳಿಕ ಕೈಕಾಲುಗಳನ್ನು ತೊಳೆದುಕೊಂಡು ಮಡಿಯುಟ್ಟು ಹಣೆಗೆ ವಿಭೂತಿಯ ಬೊಟ್ಟನ್ನಿಟ್ಟು ಬತ್ತ ಕುಟ್ಟುವ ಒನಕೆಯನ್ನು ಕೈಯಲ್ಲಿ ತೆಗೆದುಕೊಂಡು ಅದಕ್ಕೆ ತುಂಬ ಬೂದಿಯನ್ನು ಸವರಿ ಮಿಕ್ಕ ಬೂದಿಯನ್ನು ಕೈಕಾಲುಗಳಿಗೆ ಬಳಿದುಕೊಂಡು ನಡುಬಾಗಿಲಲ್ಲಿ ಒನಕೆಯನ್ನಿಟ್ಟು ಅದರ ಇದಿರಿಗೆ ಮೂರು ಸೂಳು ಎರಗಿ ಬಾಯಿಬಿಟ್ಟು ಗಟ್ಟಿಯಾಗಿ ಹೇಳದೆ ಮಂತ್ರವನ್ನು ಜಪಿಸುವಂತೆ ತುಟಿಯನ್ನು ಮಾತ್ರ ಅಲುಗಿಸುತ್ತ ಮಿಣ ಮಿಣ ಎನ್ನುತ್ತಿದ್ದಳು. ಸ್ವಲ್ಪ ಹೊತ್ತಾದ ಮೇಲೆ

ಒನಕೆಯನ್ನು ಎತ್ತಿಕೊಂಡು ಬೂದಿಯೆಲ್ಲಾ ಹೋಗುವ ಹಾಗೆ ಬಟ್ಟೆಯಿಂದ ಚೆನ್ನಾಗಿ ಒರಸಿ ಮುಂದೆ ಇದ್ದ ಕಡೆಯಲ್ಲಿಯೇ ಅದನ್ನು ಇರಿಸಿ ಮಿಣಮಿಣ ಎನ್ನುತ್ತ ನಮಸ್ಕಾರಮಾಡಿ ಹಿಂದಿರುಗಿದಳು. ಇದನ್ನೆಲ್ಲಾ ದಿಟ್ಟಿಸಿ ನೋಡುತ್ತಿದ್ದ ಜಂಗಮಯ್ಯನು ಬಹಳ ಅಚ್ಚರಿಗೊಂಡು 'ಇದೇನಿರಬಹುದೋ ತಿಳಿಯಲಿಲ್ಲವಲ್ಲಾ' ಎಂದು ಬಹಳಹೊತ್ತು ಆಲೋಚಿಸಿ ನೋಡಿ ಬಗೆಹರಿಯದೆ, 'ಅಮ್ಮಾ! ನಾನು ಇಂದಿನವರೆಗೂ ಎಲ್ಲಿಯೂ ಕಾಣದ ಅಚ್ಚರಿಯನ್ನು ಈಗ ಇಲ್ಲಿ ಕಂಡೆನು. ಇದು ಯಾವ ಪೂಜೆಯಮ್ಮಾ?' ಎಂದು ಕೇಳಿದನು. ಅದಕ್ಕೆ ಅವಳು, ಗುರುವೇ! ಇದು ನಮ್ಮ ಮನೆಯ ದೇವರ ವಿಶೇಷಪೂಜೆ. ಮುಂದೆ ತಮಗೂ ಚೆನ್ನಾಗಿ ವೇದ್ಯವಾಗುವುದು' ಎಂದು ಒಳಗೆ ಹೋಗುತ್ತ 'ಇದು ನಿನ್ನ ತಲೆಯ ಮೇಲೆಯೇ ಬಂದು ಬೀಳುವುದು' ಎಂದು ತನ್ನಷ್ಟಕ್ಕೆ ತಾನೇ ಮೆಲ್ಲಗೆ ಹೇಳಿಕೊಳ್ಳುವಂತೆ ಆತನ ಕಿವಿಗೆ ಬೀಳುವಹಾಗೆ ಹೇಳಿಕೊಂಡು ಹೋದಳು. ಹಾಗೆ ಮೆಲ್ಲಗೆ ಹೇಳಿದರೂ ಆ ಮಾತು ಅವನಿಗೆ ಕೇಳಬೇಕೆಂದು ಅವಳು ಬಗೆದಂತೆಯೇ ಅದು ಅಯ್ಯನ ಕಿವಿಯಲ್ಲಿ ಬಿದ್ದಿತು. ಆಗ ಅವನು 'ನನ್ನ ಅದೃಷ್ಟವು ಬಹಳ ಒಳ್ಳೆಯದು. ನನ್ನ ಹಣೆಯ ಬರಹ ಚೆನ್ನಾಗಿದ್ದಂತೆ ತೋರುತ್ತದೆ. ಅದರಿಂದಲೇ ಬದುಕಿದೆನು' ಎಂದು ಎಣಿಸಿಕೊಂಡು, ಸೆಟ್ಟಿಯ ಹೆಂಡತಿ ಒಳಗೆ ಹೋದ ಕೂಡಲೆ ಎದ್ದು ತುಸವೂ ಸದ್ದಾಗದಂತೆ ಜೀವವನ್ನು ಎಡಗೈಯಲ್ಲಿಟ್ಟುಕೊಂಡು ಮೆತ್ತಗೆ ಕಾಲಮೇಲೆ ಕಾಲುಹಾಕುತ್ತ ನಡೆದು ಹೊರಗೆ ಹೋಗಿ, ಎದೆ ದಬದಬ ಎಂದು ಬಡಿದುಕೊಳ್ಳುತ್ತಿರಲು, 'ಬದುಕು ಬಡಜೀವವೇ!' ಎಂದು ಎಂದುಕೊಳ್ಳುತ್ತ ನಿಂತಕಡೆ ನಿಲ್ಲದೆ ಹಿಂದುರಿಗಿ ನೋಡದೆ, ಜಿಂಕೆಗೆ ರೆಕ್ಕೆ ಮೂಡಿದಂತೆ ಓಟವಾಗಿ ಓಡಿಹೋದನು.

ಜಂಗಮಯ್ಯನು ಆ ಕಡೆ ಹೋದಕೂಡಲೆ ಕಿಡಿಗಣ್ಣಪ್ಪನು ಅಂಗಡಿಯಿಂದ ಮನೆಗೆ ಬಂದು "ಎಲೇ! ನಾನು ಕಳುಹಿಸಿದ ಅಯ್ಯನವರೆಲ್ಲಿ?" ಎಂದು ಕೇಳಿದನು. ಅದಕ್ಕೆ ಸುಗ್ಗವ್ವೆ "ಸಾಕು ಬಿಡಿ. ಈ ಸಲ ಒಳ್ಳೆಯ ಅಯ್ಯಗಳನ್ನು ಕಳುಹಿದಿರಿ. ಅವರು ಬಂದ ಒಡನೆ, 'ಒನಕೆಯನ್ನು ಕೊಡು' ಎಂದು ಕೇಳಿದರು. ಅದಕ್ಕೆ ನಾನು

'ಗುರುವೇ! ಸ್ವಲ್ಪ ತಾಳಿ. ಈಗ ಸೆಟ್ಟಿಯವರು ಬರುವರು. ಅವರ ಅಪ್ಪಣೆಯಿಲ್ಲದೆ ನಾನು ಒನಕೆಯನ್ನು ಹೇಗೆ ಕೊಡಲಿ? ದಯೆಯಿಟ್ಟು ಸ್ವಲ್ಪಹೊತ್ತು ಮೂರ್ತಮಾಡಿ' ಎಂದು ಹೇಳಿ, ಇಗೋ ನೋಡಿ, ಚಾಪೆಯನ್ನೂ ತಂದು ಹಾಸಿದೆನು. ಅವರು ನನ್ನ ಮಾತನ್ನು ಕೇಳದೆ ತಟ್ಟನೆ ಮುನಿಸುಗೊಂಡು ಹೊರಟುಹೋದರು. ಎಷ್ಟು ಬೇಡಿಕೊಂಡರೂ ಕೇಳಲಿಲ್ಲ. ಕಾಲಿಗೆ ಬಿದ್ದು ಕೇಳಿಕೊಂಡರೂ ಕಿವಿಯಲ್ಲಿ ಹಾಕಿಕೊಳ್ಳದೆ ಹೊರಟೇ ಹೋದರು. ಇಂಥ ಅಯ್ಯಗಳನ್ನು ನಾನು ಎಂದೂ ನೋಡಲಿಲ್ಲ'' ಎಂದು ಕಣ್ಣನ್ನು ಒರಸಿಕೊಳ್ಳುತ್ತ ಹೇಳಿದಳು. ಆ ಮಾತನ್ನು ಕೇಳಿ ಕಿಡಿಗಣ್ಣಪ್ಪನು 'ಎಲೇ! ಅನ್ಯಾಯವಾಗಿ ಕೆಲಸವನ್ನು ಕೆಡಿಸಿದೆಯಲ್ಲಾ. ಅಯ್ಯಗಳು ಏನು ಕೇಳಿದರೂ ಕೊಡಬೇಕು. ಹಾಗೆ ಕೊಡುವುದು ನನಗೆ ಒಪ್ಪಿತ ಎಂಬುದು ನಿನಗೆ ತಿಳಿಯದೇ? ಅಯ್ಯೋ! ಅಯ್ಯಗಳು ಹಸಿದುಕೊಂಡು ಎಲ್ಲಿಗೆ ಹೊರಟುಹೋದರೋ ಕಾಣೆನಲ್ಲಾ. ಎಲ್ಲಿಯಾದರೂ ನೋಡಿ ಅವರನ್ನು ಹುಡುಕಿ ಒನಕೆಯನ್ನು ಅವರಿಗೆ ಕೊಟ್ಟು ಕರೆದುಕೊಂಡು ಬರುತ್ತೇನೆ' ಎಂದು ಹೇಳಿ, ಒನಕೆಯನ್ನು ಕೈಯಲ್ಲಿ ಎತ್ತಿಕೊಂಡು ಬೀದಿಗೆ ಬಂದು ಅಯ್ಯಗಳು ಹೋದ ದಾರಿಯನ್ನು ವಿಚಾರಿಸಿಕೊಂಡು ಬೇಗಬೇಗನೆ ನಡೆದುಹೋಗುತ್ತಿದ್ದನು.

ಜಂಗಮಯ್ಯನು ಸ್ವಲ್ಪದೂರ ಓಡಿಹೋಗಿ, 'ಇನ್ನು ಮೇಲೆ ಜೀವಭಯವಿಲ್ಲ. ಇದು ಹೇಗೆ ಪರ್ಯವಸಾನವಾಗುತ್ತದೆ ನೋಡುವ' ಎಂದು ಒಂದುಕಡೆ ಅವಿತುಕೊಂಡಿದ್ದನು. ಒನಕೆಯನ್ನು ಎತ್ತಿಕೊಂಡು ಸೆಟ್ಟಿ ವೇಗವಾಗಿ ಬರುವುದನ್ನು ಕಂಡು, "ಇವನು ನನ್ನ ತಲೆಯ ಮೇಲೆ ಪೂಜೆಯನ್ನು ಪೂರೈಸುವುದಕ್ಕೆ ಬರುವಂತಿದೆ. ಇಲ್ಲಿರುವುದು ಸರಿಯಲ್ಲ'' ಎಂದು ಅಂಜಿಕೊಂಡು ಎಡವಿ ಬೀಳುವುದನ್ನೂ ಕಾಣದೆ ಮರಳಿ ಓಡತೊಡಗಿದನು. ಜಂಗಮಯ್ಯನು ಓಡುವುದನ್ನು ಕಂಡು, ಕಿಡಿಗಣ್ಣಪ್ಪನು 'ಅಯ್ಯಗಳೇ! ಅಯ್ಯಗಳೇ! ಒನಕೆಯನ್ನು ಕೊಳ್ಳಿ, ಒನಕೆಯನ್ನು ಕೊಳ್ಳಿ' ಎಂದು ಕೂಗಿಕೊಳ್ಳುತ್ತ ಹಿಂದಟ್ಟಿಕೊಂಡು ಹೋಗಲು, ಅಯ್ಯನು ಮುಗ್ಗರಿಸುವುದನ್ನೂ ಕಾಣದೆ ಮತ್ತಷ್ಟು

ವೇಗವಾಗಿ ಓಡತೊಡಗಿದನು. ಸೆಟ್ಟಿ ದೊಳ್ಳುಹೊಟ್ಟೆಯನ್ನು ಎತ್ತಿಕೊಂಡು ಬಹಳ ಸಾಹಸಮಾಡಿ ಸ್ವಲ್ಪ ದೂರ ಓಡಿದನು. ಆಮೇಲೆ ಓಡಲಾರದೆ ಕಾಲು ತತ್ತರಿಸಿಹೋಗಿ ನಿಟ್ಟುಸಿರುಬಿಡುತ್ತ ನಿಂತುಬಿಟ್ಟನು. ಅಯ್ಯನು ಜಿಂಕೆಯಹಾಗೆ ಹಾರಿಹೋಗುತ್ತಿದ್ದನು. ಸೆಟ್ಟಿ 'ಅಯ್ಯೋ! ಅಯ್ಯಗಳು ಸಿಕ್ಕಲಿಲ್ಲವಲ್ಲಾ' ಎಂದು ಮರುಗುತ್ತ ಮನೆಗೆ ಬಂದು ಸೇರಿದನು.

"ಇದೇ ಸ್ವಾಮಿಾ! ಒನಕೆಯ ಪೂಜೆಯೆಂಬುದು. ನಿಮಗೆ ಜೋಯಿಸ ಹೇಳಿದ ಬ್ರಾಹ್ಮಣನ ಬೆನ್ನಿನಮೇಲೆ ನಾನು ಈ ಪೂಜೆಯನ್ನು ಪೂರೈಸಿದರೆ ಪೃಷ್ಠೋಷ್ಣ ಹುಟ್ಟಿ ಅವನಿಗೆ ನಾಶವುಂಟಾಗುವುದೇ ಹೊರತು ನಿಮಗೆ ಉಂಟಾಗಲಾರದು" ಎಂದು ಸಬ್ಬವಕಾರನು ಹೇಳಲು, ಗಾಂಪರೊಡೆಯರು ನಕ್ಕು "ತಮ್ಮಾ! ನಿನ್ನನ್ನು ಸಬ್ಬವಕಾರ ಎಂಬುದು ನ್ಯಾಯವೇ ಸರಿ. ನೀನು ಯಾವಾಗಲೂ ಕುಚೋದ್ಯಗಳನ್ನೇ ಮಾಡುತ್ತಿದ್ದೀಯೆ" ಎಂದರು. ಗುರುಗಳು ನಕ್ಕುದನ್ನು ಕಂಡು, ಸಬ್ಬವಕಾರನು 'ಹೋಗಲಿ, ಇವರು ಇಷ್ಟರಮಟ್ಟಿಗೆ ಇಳಿದರಲ್ಲಾ' ಎಂದು ಸಂತಸಗೊಂಡು ಕುಚೋದ್ಯವನ್ನು ಬಿಟ್ಟು "ಸ್ವಾಮಿಾ! ಬ್ರಾಹ್ಮಣನು ಹೇಳಿದ ಮಾತು ನಿಜವೇ ಸರಿ. ಆದರೆ ಅದರ ಅರ್ಥವನ್ನು ಚೆನ್ನಾಗಿ ಆರಯ್ದು ತಿಳಿಯಬೇಕು. 'ಪೃಷ್ಠದಲ್ಲಿ ತಂಪು ಹುಟ್ಟುವುದು ಸಾವಿಗೆ ಗುರುತು' ಎಂದು ಆತನು ಹೇಳಿದುದು ಸರಿಯೇ. ಆದರೂ, ಕಾರಣವಿಲ್ಲದೆ ಪೃಷ್ಠವು ತಣ್ಣಗಾದರೇನೇ ಅವನು ಹೇಳಿದಂತಾಗುವುದು. ನೀವು ನೀರಿನಲ್ಲಿಯೂ ಕೆಸರಿನಲ್ಲಿಯೂ ಬಿದ್ದಿರಿ. ಅದರಿಂದ ಪೃಷ್ಠವು ತಣ್ಣಗಾಗುವುದೊಂದಚ್ಚರಿಯಲ್ಲ; ತಣ್ಣಗಾಗದಿದ್ದರೇನೇ ಅಚ್ಚರಿ ಎಂದು ಹೇಳಬೇಕು. ಆದುದರಿಂದ ಈಗ ಈ ಕೆಲಸಕ್ಕೆ ಬಾರದ ಕಳವಳವನ್ನು ಬಿಟ್ಟು ಕಳೆಯಿರಿ. ಇನ್ನು ಮುಂದೆ ಕೆಸರಿನಮೇಲೆ ಕುಳ್ಳಿರದೆ ನೀರಿನಲ್ಲಿ ಬೀಳದೆ ಮತ್ತೊಂದು ಕಾರಣವೂ ಇಲ್ಲದೆ ಪೃಷ್ಠವು ತಣ್ಣಗಾದರೆ ಆಗ ಸಾವು ಸಮಿಾಪಿಸಿತೆಂದು ತಿಳಿದುಕೊಳ್ಳಬಹುದು" ಎಂದು ಹೇಳಿದನು. ಸಬ್ಬವಕಾರನು ಹೇಳಿದ ಮಾತು ಗುರುಗಳ ಮನಕ್ಕೆ ಹೊಕ್ಕು ನ್ಯಾಯವಾಗಿ ಕಂಡಿತು. ಅಂದಿ

ನಿಂದ ಅವರು ಸ್ವಲ್ಪ ತೆಪ್ಪತ್ತು ಕೊಂಡು ಎದ್ದು ಊಟಮಾಡಲೂ ಅಲ್ಲಲ್ಲಿ ತಿರುಗಲೂ ಅನುವಾದರು.

ಹೀಗೆ ಕೆಲವು ಕಾಲ ಕಳೆದ ಬಳಿಕ, ಒಂದಾನೊಂದು ದಿನ ಸರಿ ರಾತ್ರಿಯಲ್ಲಿ ಬಲವಾದ ಮಳೆ ಒಂದೇ ಉಸಿರಿಗೆ ಸುರಿಯಿತು. ಆಗ ಗುರುಗಳ ಹಾಸಿಗೆಯಮೇಲೆ ಅವರ ಪೃಷ್ಠಕ್ಕೆ ಪಕ್ಕದಲ್ಲಿ ಮಳೆಯ ಹನಿ ಸೋರಿತು. ನಿದ್ದೆ ಚೆನ್ನಾಗಿ ಹತ್ತಿದ್ದುದರಿಂದ ಅವರಿಗೆ ಅದು ತಿಳಿಯ ಲಿಲ್ಲ. ನಿದ್ದೆಯಲ್ಲಿ ಹೊರಳಿ ತಮ್ಮ ಪೃಷ್ಠಕ್ಕೆ ತಂಪು ಊರುವಹಾಗೆ ಮಲಗಿಕೊಂಡರು. ಸ್ವಲ್ಪ ಹೊತ್ತಿನಮೇಲೆ ಮಳೆ ನಿಂತುಹೋಯಿತು. ಗುರುಗಳು ತಟ್ಟನೆ ಎಚ್ಚತ್ತು ಪೃಷ್ಠವನ್ನು ಮುಟ್ಟನೋಡಿಕೊಂಡು ಬಹಳ ತಣ್ಣಗಿರುವುದನ್ನು ತಿಳಿದು 'ಈಗ ನನ್ನ ಪೃಷ್ಠಕ್ಕೆ ತಂಪು ಹುಟ್ಟಲು ಯಾವ ಕಾರಣವನ್ನೂ ಕಾಣೆನಲ್ಲಾ, ಸಬ್ಬವಕಾರನು ಹೇಳಿ ದಂತೆ ಕಾರಣವೇ ಇಲ್ಲದೆ ತಂಪು ಹುಟ್ಟಿರುವುದರಿಂದ ನನಗೆ ಸಾವು ಸಮಿಾಪಿಸಿತು ಎಂಬುದರಲ್ಲಿ ಸಂದೇಹವೇ ಇಲ್ಲ' ಎಂದು ನಿಶ್ಚಯ ಮಾಡಿಕೊಂಡರು. ಶಿಷ್ಯರೂ ಕೂಡ ತಂಪಿಗೆ ಕಾರಣವನ್ನು ಕಾಣದೆ ಹಾಸಿಗೆಯ ತಂಪೂ ಸಹ ಗುರುಗಳ ಪೃಷ್ಠದ ಶೀತದಿಂದ ಉಂಟಾಗಿದೆ ಎಂದು ತಿಳಿದುಕೊಂಡು ಹಿಂದೆ ಬ್ರಾಹ್ಮಣನು ಹೇಳಿದ ಜೋಯಿಸವು ನೆರವೇರುವ ಕಾಲ ಇದೇ ಸರಿ ಎಂದು ನಿಶ್ಚಯಿಸಿದರು. ಗುರುಗಳನ್ನು ನೋಡಬಂದ ಜನರಲ್ಲಿ ಹಲವರು ಈ ಶಿಷ್ಯರಂತೆಯೇ ಬುದ್ಧಿವಂತ ರಾದುದರಿಂದ ಅವರಂತೆಯೇ ಮಾತನಾಡಿದರು. ತಮ್ಮ ಮನದಲ್ಲಿ ಎಣಿಸುವಂತೆಯೇ ಹಲವರು ಮಾತನಾಡುವುದನ್ನು ನೋಡಿ, ಗುರು ಗಳಿಗೆ ಕಳವಳವು ಹೆಚ್ಚಿ ತಮ್ಮನ್ನು ವಿಚಾರಿಸುವುದಕ್ಕೆ ಬಂದವರಿಗೆಲ್ಲಾ "ಪೃಷ್ಠಶೀತಃ ಪ್ರಾಣನಾಶ" ಎಂಬ ಮಾತನ್ನೇ ಹೇಳುತ್ತಿದ್ದರು. ಬರುತ್ತ ಬರುತ್ತ ಈ ಕಳವಳದಿಂದ ಅವರ ಮೈ ಕುಗ್ಗಿಹೋಯಿತು. ಇಲ್ಲದ ಬೇನೆಗಳೆಲ್ಲಾ ಉಂಟಾದುವು. ಒಂದು ದಿನ ಒಡಲ ಬೇನೆ ಯನ್ನೂ ಮನದ ದುಗುಡವನ್ನೂ ತಾಳಲಾರದೆ ಗುರುಗಳು ಮಾತ ನಾಡುವುದಕ್ಕೂ ತ್ರಾಣವಿಲ್ಲದೆ ಮೈಕದಿಂದ ಸೊಪ್ಪಾಗಿ ಬಿದ್ದಿದ್ದರು.

ಆಗ ಅವರನ್ನು ನೋಡಿ ಶಿಷ್ಯರು "ಕುಯ್ಯೋ! ಮೊರೆಯೋ!" ಎಂದು ಕೂಗಿಕೊಂಡು ತಲೆಯಮೇಲೆ ಕೈಯಿಟ್ಟುಕೊಂಡು, "ಆ ಹಾಳು ಬ್ರಾಹ್ಮಣನು ಹೇಳಿದುದು ನಿಜವಾಯಿತಲ್ಲಾ. ಅಯ್ಯೋ! ನಮ್ಮ ಗುರುಗಳು ಒರಗಿದರಲ್ಲಾ. ಅಯ್ಯೋ! ನಮ್ಮ ಸ್ವಾಮಿಗಳು ಸತ್ತುಹೋದರಲ್ಲಾ. ಇನ್ನುಮೇಲೆ ನಮ್ಮನ್ನು ಕೇಳುವವರು ಯಾರೂ ಇಲ್ಲವಲ್ಲಾ. ನಮ್ಮೊಡೆಯಾ! ಹೋದೆಯಾ! ನಮ್ಮ ದೇವರೇ! ಮಾಯವಾದೆಯಾ!" ಎಂದು ಹಲವು ಬಗೆಯಿಂದ ಹಲುಬಿ ಗೋಳಾಡಿದರು. ಬಳಿಕ "ಅತ್ತು ಫಲವೇನು? ಮುಂದಣ ಕೆಲಸವನ್ನು ಮಾಡಿ" ಎಂದು ಬಂದು ಸೆರೆದ ಜನರು ಹೇಳಲು, ಶಿಷ್ಯರು ಹೂಳುವುದಕ್ಕೆ ಮುಂಚೆ ಗುರುಗಳನ್ನು ಮೀಯಿಸಬೇಕೆಂದು ಮಠದಲ್ಲಿದ್ದ ದೊಡ್ಡತೊಟ್ಟಿ ತುಂಬ ನೀರು ಹಾಕಿ ಗುರುಗಳನ್ನು ಬದುಕಿದ್ದ ಹಾಗೆಯೇ ಹೆಣವೆಂದು ಎಣಿಸಿ ಎತ್ತಿ ಅದರಲ್ಲಿ ಹಾಕಿ ಅಮುಕಿ ಸುತ್ತ ಎಲ್ಲರೂ ನಿಂತುಕೊಂಡು ಉಜ್ಜಿ ತೊಳೆದರು. ನೀರಿನೊಳಗೆ ಹಾಕಿದುದರಿಂದ ಗುರುಗಳಿಗೆ ಮೈಕವು ಸ್ವಲ್ಪ ಮಟ್ಟಿಗೆ ನೀಗಿತು. ಆದರೆ ಕೈಕಾಲುಗಳನ್ನು ಬಿಗಿಯಾಗಿ ಹಿಡಿದಿದ್ದುದರಿಂದ ಉಸಿರುಬಿಡುವುದಕ್ಕೂ ಅವಕಾಶವಿಲ್ಲದೆ ಆ ಗಾಂಪರ ಕೈಯಲ್ಲಿ ಸಿಕ್ಕಿ ಗಾಂಪರೊಡೆಯರು ಅನ್ಯಾಯವಾಗಿ ಸತ್ತುಹೋದರು.

ಬಳಿಕ, ಆ ಊರ ಜನವೆಲ್ಲಾ ಬಂದು ನೆರೆಯಲು, ಎಲ್ಲರೂ ದೊಡ್ಡ ಗುಂಪುಕೂಡಿ ಹೂದೇರುಕಟ್ಟಿ ಗುರುಗಳನ್ನು ಸಿಂಗರಿಸಿ ಕೈಕಾಲುಗಳನ್ನು ಮುರಿದು ಅದರಲ್ಲಿ ಕುಳ್ಳಿರಿಸಿದರು. ಸಂಕು, ತುತೂರಿ ಮೊದಲಾದ ವಾದ್ಯಗಳು ಮೊಳಗಿದುವು. ಬಹಳ ಸಡಗರದಿಂದ ಜನಗಳು ತೇರನ್ನು ಹೊತ್ತುಕೊಂಡು ಹೋದರು. ಶಿಷ್ಯರು ತೇರಿನ ಮುಂದೆಯೂ ಹಿಂದೆಯೂ ಎಡಬಲಗಳಲ್ಲಿಯೂ "ಪೃಷ್ಠಶೀತ, ಪ್ರಾಣನಾಶ" ಎಂದು ಉಗ್ಗಡಿಸುತ್ತ ಹೊರಟರು. ಹೀಗೆ ಬಹಳ ಸಂಭ್ರಮದಿಂದ ರುದ್ರಭೂಮಿಗೆ ಹೋಗಿ ಸೇರಿದಮೇಲೆ ಶಿಷ್ಯರು ಒಂದು ಗುಳಿಯನ್ನು ತೋಡಿ ಗುರುಗಳನ್ನು ಅದರಲ್ಲಿಟ್ಟು ಹೂತುಬಿಟ್ಟರು.

ಸಂಪೂರ್ಣಂ.

Extracts from Opinions on Volume III of the Karnataka-Kavi-charite

Let me offer you my most hearty congratulations on having completed the Kavi-charite, a monumental work for which your country must always be under a deep debt of obligation to you.

DR. L. D. BARNETT.

Most heartily do I congratulate you on having been able to complete the self-imposed, toilsome but interesting task which has occupied your available time for so many years. It has shed a flood of light on the literary history of the Kanarese people, and has made the lives of ancient scholars and poets stand out in vivid perspective. Your researches have been as exhaustive as the present state of knowledge permits, and the evidence ***pro*** and ***con*** on disputed points has been so clearly and impartially set forth that no better foundation could have been laid for future scholars to work upon. I am glad to think that it has already awakened in so many Kannadigas an interest in their past literature. I hope they may be able to bring to light fresh manuscripts of value and fuller information. They will always however need to draw from the mine of information which you have provided. These three volumes will themselves be the best monument of your patient labours.

REV. E. P. RICE. B.A.

Karnataka Kavi-charite, Volume III, marks the completion of the monumental work undertaken by you. I think you have placed the Kannadigas of British and Indian India

under eternal obligation by bringing together and publishing the best portions of Kannada Literature from the most ancient times down to the present day. I venture to think that you occupy the topmost place among Kannada scholars of research and renown and you enjoy a well deserved reputation not only in Mysore but in Bombay Karnatak in which our Brahmin and Lingayat brethren take a deep and patriotic interest in Kannadā.

SIR K. P. PUTTANNA CHETTI, KT., C. I. E.

Let me first of all congratulate you upon the completion of your labours upon this magnificent work, I think the first of its kind, in the Vernacular languages of South India. It has been a work which occupied many years of your time, and certainly it must be a matter for particular gratification to you.

Rao Bahadur

DR. S. KRISHNASWAMI AIENGAR,
M. A., Ph.D.

It is our treasure-house of information on Kannada Literature and we are deeply indebted to you for its completion.

PROFESSOR R. TATA, M. A., L. T.

Please allow me to tender my congratulations to you for having brought out Volume III of the Karnataka Kavicharite in your old age. Your valuable services to advance the interest of Kannada Literature can never be forgotten and all Kannadigas ought to feel grateful to you.

MR. P. MAHADEVAYYA, B. A., B. L.

Allow me to offer you my most sincere and respectful congratulations on the completion of your monumental work on the Kannada Poets. You have furnished to us a new source of inspiration, of pride and of encouragement. That there has been a continuous lineage of men of letters in the Karnataka from the earliest times down to our own, that there have at all times been men among us with some good or glad tidings to communicate to their fellow-men, men with faith in the power and charm of the Word, men eager to instruct and entertain their age—is a reflection surely of no ordinary import to the student of Literature and history ; and that is a reflection that cannot be resisted as one contemplates your three good-sized Volumes, enshrining the names and contributions of more than a thousand authors, in a thousand and five hundred lucid and scholarly pages. Which shall we admire and emulate most,—the magnificent learning, or the conscientious care and diligence, or the truly heroic patience and labour in seeking and in delving into musty old books, or the unflagging patriotic zeal that has carried you through all?

MR. D. V. GUNDAPPA.

I admit at once that some of the criticisms which you have urged against the statements that I have made in connection with Rudrabhatta, Mauktika-kavi, etc. are quite just. Other criticisms of yours need careful consideration ; and I think that, if, after such consideration the matter seems worth it, I shall publish my views of them, either refuting them and reaffirming my original opinions, or acknowledging that my original views are untenable and modifying them in the light of your criticisms.

I would like to be permitted to congratulate you on the completion of your self-imposed work which you have executed with such thoroughness and so well. The three

Volumes of the Karnataka Kavicharite are a standing monument to your learning, pains-taking industry and labour, a monument of which any Kannadiga might feel proud.

DR. A. VENKATASUBBIAH, M.A., Ph. D., LL.B.

What an amount of love and labour you have spent over it! It is a stupendous work, and being the first of its kind, will go down to posterity as the greatest work of a great Kanarese scholar. Allow me to congratulate you on the completion of the work.

Of course critics there are, and there should be for the healthy growth of the Literature of a Language; but whatever critics might say your work will never suffer from their hands. You have ably answered many of the points raised by Dr. Venkatasubbiah.

MR. UGRAN MANGESHA RAO, B.A.

This work brings to a close one of the most monumental works undertaken by you in the interests of Kannada Language and will stand as a living embodiment of your long, arduous and patient labours. The generations to come will ever cherish the great work you have done for Kannada Literature.

Mr. B. PUTTAIYA, B. A.

ತಾವು ಕರ್ಣಾಟಕ ಕವಿಚರಿತ್ರೆಯ ಭಾಗಗಳನ್ನು ಬರೆದು ಕರ್ಣಾಟಕ ಜನಾಂಗಕ್ಕೆ ಮಾಡಿದ ಉಪಕಾರವನ್ನು ಕರ್ಣಾಟಕ ಜನಾಂಗವು ಎಂದೂ ಮರೆಯಲಾರದು. ತಾವು ಮಾಡಿದ ಉಪಕಾರವು ಸುವರ್ಣಾಕ್ಷರಗಳಿಂದ ಕೆತ್ತಿಸಲರ್ಹವಾದುದು.

ಕರ್ಣಾಟಕಭಾಷಾಮಾತೆಯ ಅನುಪಮ ಸೇವಕರಲ್ಲಿ ಅಗ್ರತಾಂಬೂಲವನ್ನು ಹೊಂದಲರ್ಹರಾದ ತಮ್ಮ ಅಗಾಧ ಪರಿಶ್ರಮವು ಪ್ರಶಂಸನೀಯವಾದುದು. ಈ ಮಹದುಪಕಾರಕ್ಕಾಗಿ ಇಡೀ ಕರ್ಣಾಟಕವೇ ತಮಗೆ ಚಿರಋಣಿಯಾಗಬೇಕು.

ಕೆ. ಭುಜಬಲಿ ಶಾಸ್ತ್ರಿಗಳು, ಆರ.

ತಾವು ಕರ್ಣಾಟಕಭಾಷೆಯ ಪ್ರಾಚೀನತೆಯ ವಿಷಯದಲ್ಲಿಯೂ, ಮಾಧುರ್ಯ ವಿಷಯದಲ್ಲಿಯೂ, ಇನ್ನೂ ಅನೇಕ ವಿಷಯಗಳಲ್ಲಿಯೂ ಸಹ ಮೂರು ಸಂಪುಟಗಳ ಉಪೋದ್ಘಾತದಲ್ಲಿ ವಿಮರ್ಶಿಸಿರುವ ವಿಷಯಗಳನ್ನು ಅವಲೋಕಿಸಿದ ಮಾತ್ರಕ್ಕೇ ಎದೆಯು ಧಿಗಿಲ್ಲೆನ್ನುತ್ತದೆ. ಕರ್ಣಾಟಕ ಭಾಷೆಯ ಕೂಲಂಕಷವಾದ ಚರಿತ್ರೆಯನ್ನು ಸಪ್ರಮಾಣವಾಗಿ ಬರೆಯ ಬೇಕಾದರೆ—ಅದರಲ್ಲಿಯೂ ಲಲಿತ ಸುಮಧುರ ವಾಗ್ಝರೀ ವೈಖರೀ ವಿಶೇಷ ಗಳಿಂದ ತುಂಬಿ ತುಳುಕುವಂತೆ ಮಾಡಬೇಕಾದರೆ—ತಾವು ಮೂರ್ತಿ ಮತ್ತಾದ ಕನ್ನಡಭಾಷೆಯೇ ಆಗಿರಬೇಕೆನ್ನಲು ಆವ ಅಡ್ಡಿಯೂ ಇಲ್ಲ.

ಕರ್ಣಾಟಕ ಕವಿಚರಿತೆಯ ಮೂರು ಸಂಪುಟಗಳಲ್ಲಿಯೂ ಕನ್ನಡ ಭಾಷಾವೃಕ್ಷದ ವರ್ಣನೆ ಸುಮಧುರವಾಗ್ಝರೀ ವೈಭವ ವಿಲಾಸದಿಂದ ಒಪ್ಪು ತ್ತಿದೆ. ಎಲೆ ಹೂ ಹಣ್ಣುಗಳ ಸಹಿತವಾದ ಆ ವೃಕ್ಷವು ತನ್ನ ನೆಳಲಿನ ತಂಪಿನಿಂದಲೂ ಹೂವಿನ ಸುವಾಸನೆಯಿಂದಲೂ ಹಣ್ಣಿನ ಸುಸ್ವಾದ ದಿಂದಲೂ ಸಹ ಕನ್ನಡಿಗರಷ್ಟೇ ಅಲ್ಲದೆ ಇತರ ಭಾಷೆಯವರೂ ಸಹ ಮನೋಹರವಾದ ವಿಶ್ರಾಂತಿ ಸುಖವನ್ನು ಹೊಂದಿ ತಮ್ಮನ್ನು ಅಭಿನವ ಕನ್ನಡಸೀಮಾ ಪುರುಷರೆಂದು ಹೇಳುವಂತೆ ಮಾಡಿದೆ.

ಎತ್ತಗದ ಮಠದ ದೊಡ್ಡರಾಮಾರಾಧ್ಯರು.

ತಮ್ಮ ದಿವ್ಯಜ್ಞಾನ ಪ್ರಭಾಪುಂಜರಂಜಿತವಾದ ಕರ್ಣಾಟಕ ಕವಿ ಚರಿತೆಯ ಅಮೋಘವಾದ ಮೂರನೆಯ ಸಂಪುಟವೆಂಬ ಕೃತಿಚಂದ್ರನು ನನ್ನ ನೇತ್ರಚಕೋರಕ್ಕೆ ಗೋಚರನಾಗಲು ನನಗುಂಟಾದ ಆನಂದವನ್ನು ಉಲ್ಲೇಖಿಸಲು ಸಾಧ್ಯವಿಲ್ಲ.

ದಾವಣಗೆರೆ ನಿಶಾನಿಮಠದ ಶಾಂತವೀರಾರ್ಯರು.

ಅಮೆರಿಕವನ್ನು ಕಂಡುಹಿಡಿದ ಕೊಲುಂಬನು ಪಾಶ್ಚಾತ್ಯರ ಪೃಥ್ವೀ ಶೋಧನೆಯ ಮೂಲಸ್ತಂಭವನ್ನು ನಟ್ಟಂತೆ, ತಮ್ಮ ಕೃತಿಗಳಿಂದ ಸಾಹಿತ್ಯೇತಿಹಾಸದ ತಳಹದಿಯನ್ನು ತಾವು ಎಷ್ಟೋ ಭದ್ರವಾಗಿ ಹಾಕಿರು ವಿರಿ ಮಾತ್ರವಲ್ಲ, ಕಾಲನನ್ನು ಧಿಕ್ಕರಿಸುವ ಪ್ರಾಸಾದವನ್ನೂ ಎತ್ತಿರುವಿರಿ. ಕನ್ನಡ ಸಾಹಿತ್ಯೇತಿಹಾಸದಲ್ಲಿ ಈಗ ನಿರ್ಧಾರವೆಂದಾದ ಹಲವು ವಿಷಯ ಗಳು, ಹಲವು ಕವಿಗಳ ಕಾಲ, ದೇಶ, ಮತವಿಚಾರವೇ ಮೊದಲಾದುವು

ಕಾಲಕ್ರಮೇಣ ಇನ್ನು ಮುಂದೆ ಮಾರ್ಪಡದಿರವೆಂದಾದರೂ ಕನ್ನಡ ನುಡಿ ಇರುವಷ್ಟು ಕಾಲಕ್ಕೆ ಮುಗಿಯಲಾರದ ಈ ಜ್ಯೋತಿಷ್ಟೋಮದ ಪ್ರತಿಷ್ಠಾಪಕನಾರು? ಇದರ ಆದ್ಯ ಅಧ್ವರ್ಯುವಾರು? ಎಂಬಿವೇ ಮೊದಲಾದ ಪ್ರಶ್ನೆಗಳನ್ನು ಭವಿಷ್ಯಕಾಲವು ಕೇಳುವಲ್ಲಿ, ಅವಕ್ಕೆಲ್ಲ ಒಂದು ಪ್ರತ್ಯುತ್ತರವೆಂದರೆ ತಮ್ಮ ಹೆಸರೇ.

ನಶ್ವರನಾದ ಮನುಷ್ಯನು ತನಗೆ ಅಮರತೆಯನ್ನು ಸಂಪಾದಿಸಿಕೊಳ್ಳಬಲ್ಲನೆಂದಾದರೆ, ಸಾಹಿತ್ಯಸೇವೆ, ದೇಶಸೇವೆ, ಸಮಾಜಸೇವೆ ಮುಂತಾದ ನಿಃಸ್ವಾರ್ಥ ನಿಷ್ಕಾಮಕೃತ್ಯಗಳನ್ನು ತಾನೆಸಗುವುದರಿಂದಲೇ ಎಂಬುದರಿಂದ ತಮ್ಮ ಅಜರಾಮರ ಸಾಹಿತ್ಯ ಶರೀರವನ್ನು ಕಂಡು ಸಾಹಿತ್ಯ ಪ್ರೇಮವುಳ್ಳ ಕನ್ನಡಿಗನು ತನಗೂ ಬೇಕೆಂದು ಆಕಾಂಕ್ಷಿಸಿ ಪ್ರಯತ್ನಿಸುವನಾದರೆ, ಕನ್ನಡಿಗರ ಕಣ್ಣ ಮುಂದೆ ತಮ್ಮಿಂದ ಹೀಗೆ ಆವಿಷ್ಕೃತವಾದ ಸಾಹಿತ್ಯೇತಿಹಾಸವೆಂಬ ಗಗನದಲ್ಲಿ ಈ ಮುಂದಣ ಜಾಮದಲ್ಲಿ ತಾನೂ ನಕ್ಷತ್ರದಂತೆ ಬೆಳಗಬೇಕೆಂದು ಆತನು ಉದ್ಯಮಿಸಿದರೆ, ಆ ಬಗ್ಗೆ ಕೂಡ ಇಂದಿನವರೂ ಮುಂದಿನವರೂ ತಮಗೆ ಕೃತಜ್ಞರಾಗಿರಬೇಕು. ಇದಕ್ಕಿಂತ ಹೆಚ್ಚಿನ ಬಹುಮಾನ, ಇದಕ್ಕೆ ಮಿಕ್ಕ ಕೀರ್ತಿ ಬೇಕೆ?

ಮಂಜೇಶ್ವರದ ಗೋವಿಂದಪೈಯವರು.

ತಾವು ಶಾಸನದ ಇಲಾಖೆಯ ಅಧ್ಯಕ್ಷರಾಗಿದ್ದ ಕಾರಣ ಈ ದೇಶದಲ್ಲಿ ಅನೇಕ ಸ್ಥಲಗಳಲ್ಲಿದ್ದ ಅನೇಕ ಪ್ರಕಾರವಾದ ಗ್ರಂಥಗಳನ್ನು ವಿಚಾರದಿಂದ ತಿಳಿದು ಅನೇಕ ವರ್ಷಗಳಿಂದ ಶ್ರಮಪಟ್ಟು ಕವಿಚರಿತ್ರೆಯೆಂಬುದು ದೊಡ್ಡದಾದ ವಿಷಯವಾಗಿ ಲೋಕಕ್ಕೆ ಗೊತ್ತಾಗುವಂತೆ ಮಾಡಿದ್ದೀರಿ. ಈ ಕೆಲಸವು ಮತ್ತೆ ಯಾರಿಗೂ ಸಾಧ್ಯವಾಗತಕ್ಕುದಲ್ಲ.

ಮಹಾವಿದ್ವಾನ್ ಕವಿತಿಲಕ ಅಯ್ಯಾ ಶಾಸ್ತ್ರಿಗಳು.

With this Volume the labour of nearly thirty-five years is concluded and a service of the highest value to Kannada Literature reaches a happy consummation. In it are noticed 215 modern authors, as well as 352 earlier writers. True, few of these latterday votaries of the Muse are of striking merit, and not few of them are obscure and insignificant;

but some have been notable figures in their generation, and all of them have laboured according to their ability to keep alight the lamp of their literature either by following the ancient paths or by adapting it to the new claims of modern life. The notices begin with Appayya, C. 1705, and end with living authors, while a large mass of further information is added in appendices 1, 2, 4, 5 and 7, and in the introducions the author effectively replies to most of the criticisms of his previous volumes in Dr. Venkatasubbayya's ***Kelavu Kannada Kavigala Jivana-Kala-Vicara.*** The total number of authors who are noticed in the three Volumes is no less than 1148, a figure which bears striking testimony to the love of literature which has characterised Kannadigas from ancient times to the present day. We offer our congratulations to the Rao Bahadur on this happy completion of a masterwork in which neither the advance of years nor ill-health has lessened the skill of his craftsmanship, and which will be an enduring monument to the literary glories of his native land.

JOURNAL OF THE ROYAL ASIATIC SOCIETY OF GREAT BRITAIN AND IRELAND.

The Mysore University Publication of this book (Karnataka Kavicharite, Volume III) by Mr. R. Narasimhachar deserves to be in the hand of every lover of the Kannada language and of every one who wants to know something of the history of Kannada Literature. The third Volume is not merely an account of the authors belonging to the eighteenth and nineteenth centuries but contains an up-to-date introduction both in Kannada and in English on the Dravidian languages, with particular reference to the language of the Mysore country. Details based on frssh material available

have been given, and Mr. Narasimhachar has not neglected the bearing of the recent discoveries of an ancient civilization in Harappa and Mohanjo-Daro. Besides, the criticisms offered on the earlier volumes in the series are fully dealt with by the author.

MYTHIC SOCIETY JOURNAL.

The author needs no introduction to the Kannada-knowing public and research scholars. Mr. Narasimhachariar has placed the whole of the Karnataka country and the historians under a debt by his valuable publication of Karnataka Kavicharite in three Volumes which is the result of his persistent labours for nearly half a century. The present part continues the history of the poets from the beginning of the 18th century and brings it almost up-to-date, excluding the living authors. It starts with a scholarly introduction by the learned author on the Dravidian Culture, the five Dravidian Languages and their relationship with Sanskrit. The style of the book under review is simple and lucid and it expresses critical judgment in suggestive phrases. The author gives copious extracts from the works of the individual authors to indicate their place, scope and style of their works. None but our Praktana Vimarsa Vichakshana (Expert in Archæological Researches) could have completed this work, as few can have the Miltonic spirit in this ripe old age and the facilities for research work of this nature.

HINDU.

The people of Karnataka have been placed under a deep debt of gratitude to Mr. R. Narasimhachar for his having, in spite of advancing age, completed and published his monumental work on the History of Kannada Literature. No scholar has bestowed more thought and labour upon the

study of Kannada Literature and History than our revered author. The work is the fruit of a life-long labour and research into ancient manuscripts, coins, inscrictions, local traditions and other historical materials. It describes the lives and works of altogether 1148 poets and authors between the 4th and 19th centuries. Each Volume opens with a scholarly introduction (in English as well as Kannada) by the learned author on the history and antiquity of the Kannada Language and Literature. The Volume before us contains a learned introduction on the Dravidian Languages, based on the latest Archæological Researches. The whole work brings to light the vast hidden treasures of the Kannada Language, and enables the reader to follow the origin, growth and development of that language and its literature. To students of Karnataka History and Literature it indeed serves as an authoritative source-book. It is a pleasure to note that this valuable work has been published under the auspices of the Mysore University and dedicated to H. H. the Maharaja.

EVENING MAIL.

ಅಮೆರಿಕ ಖಂಡವನ್ನು ನಿರ್ಮಿಸಿದಾತನೇನೂ ಕೊಲುಂಬನಲ್ಲ; ಆತನಿಂದ ಎಷ್ಟು ಸಹಸ್ರಕಾಲಕ್ಕೆ ಹಿಂದಣಿಂದೇನೋ ಅದಿದ್ದಿತು ಎಂಬುದೆಷ್ಟು ಯಥಾರ್ಥವೋ, ಅದನ್ನು ಕಂಡುಹಿಡಿದು ಪಡುವಣಿಗರ ನಾಗರಿಕತೆಗೆ ಅದನ್ನು ಸವಡಿಸಿದವನು ಆತನೆಂಬುದು ಅಷ್ಟೇ ಯಥಾರ್ಥ. ಹಾಗೆಯೇ ಶ್ರೀಮಾನ್ ನರಸಿಂಹಾಚಾರ್ಯರಿಂದ ಎಷ್ಟು ಶತಕಗಳ ಹಿಂದೇನೋ ಉಂಟಾದ ಕನ್ನಡ ಸಾಹಿತ್ಯವೂ ಬೆಳೆಯುತ್ತಲೇ ಬರುತ್ತದೆಂಬುದೇನೂ ಹೊಸಮಾತಲ್ಲ; ಆದರೆ ಅದರ ಇತಿಹಾಸವನ್ನು ಎಷ್ಟು ಪ್ರಯತ್ನದಿಂದ, ಎಷ್ಟು ಪರಿಶ್ರಮದಿಂದ, ಎಷ್ಟು ತಾಳ್ಮೆಯಿಂದ, ಎಷ್ಟು ವೈದುಷ್ಯದಿಂದ ಗ್ರಂಥೀಕರಿಸಿ, ಇಷ್ಟು ವಿಪುಲವಾದ, ಇಷ್ಟು ಪ್ರಶಸ್ತವಾದ, ಇಷ್ಟು ಮನೋಜ್ಞವಾದ ಸಾಹಿತ್ಯವು ನಮಗಿದೆ ಎಂದು ಕನ್ನಡನಾಡಿನ

ಅವಗಾಹನೆಗೆ ತಂದವರೆಂದರೆ ಈ ವಿದ್ಯಾವೃದ್ಧರೇ. ಆದುದರಿಂದ ಕನ್ನಡಿಗರ ತಿಳಿವಳಿಕೆಯ ಬಗ್ಗೆ 'ಕರ್ಣಾಟಕ ಕವಿಚರಿತೆ' ಎಂಬೀ ಘಂಟಾಪಥವನ್ನು ರಚಿಸಿ, ನಮ್ಮಿಂದ ಅಗಲಿಹೋದಂತಿದ್ದ ನಮ್ಮ ಸಾಹಿತ್ಯದ ಪೂರ್ವಲೋಕವನ್ನು ನಮಗೆ ನೆರೆಗೊಳಿಸಿರುವ ಈ ವಿದ್ವಾಂಸರನ್ನು ಕನ್ನಡ ಸಾಹಿತ್ಯದ ಕೊಲುಂಬಸನೆಂದರೆ ಸರ್ವಥಾ ಯಥಾರ್ಹವಲ್ಲದೆ ಅತ್ಯುಕ್ತಿಯಾಗದು............ಕನ್ನಡ ಸಾಹಿತ್ಯೇತಿಹಾಸದಲ್ಲಿ ಶೋಧವು ಬೆಳೆಯುತ್ತ ಮಾರ್ಪಾಡುಗಳು ಆಗಬಹುದಾದರೂ ಗಿಬ್ಬನನ ರೋಮರಾಜ್ಯದ ವಿಧ್ವಂಸದ ಇತಿಹಾಸದಂತೆ ಕನ್ನಡ ಕವಿಚರಿತೆಯ ಈ ಮೂರು ಸಂಪುಟಗಳು ಕನ್ನಡ ಸಾಹಿತ್ಯೇತಿಹಾಸದಲ್ಲಿ ಚಿರಕಾಲ ಅಗ್ರಗಣ್ಯವಾಗಿರುವುವು ಎಂಬಲ್ಲಿ ಸಂದೇಹವಿಲ್ಲ.

ಪ್ರಬುದ್ಧ ಕರ್ಣಾಟಕ.

ಕರ್ಣಾಟಕ ಭಾಷಾಮಾತೆಯ ಅನುಪಮ ಸೇವೆಮಾಡಿರುವವರಲ್ಲಿ ಪ್ರಾಕ್ತನ ವಿಮರ್ಶವಿಚಕ್ಷಣ ರಾವ್ ಬಹಾದುರ್ ಆರ್. ನರಸಿಂಹಾಚಾರ್ಯರವರು ಎಂ.ಎ., ಎಂ. ಆರ್. ಎ. ಎಸ್., ಇವರು ಅಗ್ರಗಣ್ಯರೆಂದರೆ ಇದನ್ನು ಗುಣೈಕ ಪಕ್ಷಪಾತಿಗಳು ವಸ್ತುಸ್ಥಿತಿ ಕಥನವೆನ್ನುವರಲ್ಲದೆ ಪ್ರಶಂಸಾ ಕಥನವೆನ್ನರು. ಪುರಾತತ್ತ್ವಾನ್ವೇಷಣ ವಿಷಯದಲ್ಲಿಯೂ ಕರ್ಣಾಟಕ ಕವಿಗಳ ಕಾಲನಿರ್ಣಯದ ಮತ್ತು ಗ್ರಂಥವಿಮರ್ಶೆಯ ವಿಷಯದಲ್ಲಿಯೂ ಶ್ರೀ ಆಚಾರ್ಯರವರು ಕರ್ಣಾಟಕದಲ್ಲಿ ಒಂದು ನೂತನವಾತಾವರಣವನ್ನುಂಟುಮಾಡಿದವರಲ್ಲಿ ಪ್ರಥಮ ಸ್ಥಾನಾಪನ್ನರಾಗಿ ಮಾರ್ಗದರ್ಶಕರಾಗಿರುತ್ತಾರೆಂದರೆ ತಪ್ಪಾಗದು. ಈ ಮಹನೀಯರ ಅಗಾಧ ಪರಿಶ್ರಮದ ಫಲರೂಪವಾಗಿ ಕರ್ಣಾಟಕಕ್ಕಿಂದು, ರತ್ನತ್ರಯಗಳಂತೆ, ಕರ್ಣಾಟಕ ಕವಿಚರಿತ್ರೆಯ ಮೂರೂ ಸಂಪುಟಗಳು ದೊರಕಿವೆ. ಇವು ಕರ್ಣಾಟಕ ಸಾಹಿತ್ಯ ಸಮುದ್ರ ಮಥನದಿಂದ ಶ್ರೀ ಆಚಾರ್ಯರವರು ದೊರಕಿಸಿದ ಮೂರು ರತ್ನಗಳೆಂದರೆ ಕೆಲವರಿಗೆ "ಇದೇನು ಅತಿಪ್ರಶಂಸೆ" ಯೆಂದು ತೋರಬಹುದಾದರೂ, ನಾವು ಕೆಲವು ಕವಿಗಳ ವಿಷಯವನ್ನು ತಿಳಿಯಬೇಕೆಂದು ಪ್ರಯತ್ನಿಸಿದಾಗ ನಮಗೆ ಪ್ರಾಪ್ತವಾದ ಕಷ್ಟಪರಂಪರೆಯ ಅನುಭವವೂ ನಮಗೆ ಶ್ರೀ ಆಚಾರ್ಯರವರಲ್ಲಿರುವ ಗೌರವಬುದ್ಧಿಯೂ ಅವರ ನೈಜವಾದ ಶ್ರಮವನ್ನು ಪ್ರಶಂಸಿಸು

ವಂತೆ ಮಾಡುತ್ತವೆ. ಶ್ರೀ ಆಚಾರ್ಯರವರು ಕರ್ಣಾಟಕಕ್ಕೆ ಮಾಡಿರುವ ಉಪಕಾರಕ್ಕೋಸ್ಕರ ಅವರಿಗೆ ನಾವು ಅತ್ಯಂತ ಕೃತಜ್ಞರಾಗಿರುತ್ತೇವೆ.

ವಿಶ್ವಬಂಧು.

ಪ್ರಾಕ್ತನ ವಿಮರ್ಶವಿಚಕ್ಷಣ, ಕರ್ಣಾಟಕ ಪ್ರಾಚ್ಯವಿದ್ಯಾವೈಭವ ರಾವಬಹಾದ್ದೂರ ರಾ. ನರಸಿಂಹಾಚಾರ್ಯರವರು ಬರೆದಿರುವ ಕವಿಚರಿತೆಯ ಮೊದಲಿನವೆರಡು ಸಂಪುಟಗಳನ್ನು ಓದಿರುವ ಕನ್ನಡಿಗರಿಗೆ ಈ ಮೂರನೆಯ ಸಂಪುಟದ ವಿಷಯಕ್ಕೆ ಹೆಚ್ಚಿಗೆ ಹೇಳಬೇಕಾದ ಆವಶ್ಯಕತೆಯೇನೂ ತೋರದು. ೧೯೧೯ ರಲ್ಲಿ ಪ್ರಕಟವಾದ ದ್ವಿತೀಯ ಸಂಪುಟದ ಅವತರಣಿಕೆಯಲ್ಲಿ '೧೭ ನೆಯ ಶತಮಾನದಿಂದ ಈಚೆಗೆ ಬಾಳಿದ ಕವಿಗಳ ಚರಿತ್ರೆಯನ್ನು ೩ನೆಯ ಸಂಪುಟವಾಗಿ ಬರೆಯಬೇಕೆಂಬ ಕೋರಿಕೆ ಇದೆ. ಈ ಕೋರಿಕೆಯನ್ನು ದೇವರು ನೆರವೇರಿಸಬೇಕೆಂದು ಪ್ರಾರ್ಥಿಸುತ್ತೇನೆ' ಎಂದು ಬರೆದಿದ್ದ ಶ್ರೀಮಾನ್ ಆಚಾರ್ಯರವರ ಕೋರಿಕೆಯನ್ನು ಅವರ ಅವಿಚಲವಾದ ಕರ್ಣಾಟಕ ಭಾಷಾಭಕ್ತಿಯಿಂದ ಸಂತುಷ್ಟನಾದ ಭಗವಂತನು ಈಗ ನೆರವೇರಿಸಿದನು. ಅವತರಣಿಕೆಯಲ್ಲಿ ದ್ರಾವಿಡಭಾಷೆಗಳು, ಕನ್ನಡದ ಉಪಭಾಷೆಗಳು, ಕನ್ನಡ ನುಡಿಯ ಉತ್ಪತ್ತಿ, ಬೆಳವಣಿಗೆ, ವ್ಯಾಪ್ತಿ, ಪ್ರಾಬಲ್ಯ, ಕನ್ನಡಿಗರ ನಾಗರಿಕತೆ ಇವೇ ಮುಂತಾದ ಹಲವು ಅತ್ಯುಪಯುಕ್ತವಾದ ವಿಷಯಗಳು ವರ್ಣಿತವಾಗಿವೆ. ಕರ್ಣಾಟಕ ಪ್ರಾಚ್ಯ ವಿದ್ಯಾ ವೈಭವರೆನಿಸಿಕೊಂಡಿರುವ ಶ್ರೀ ಆಚಾರ್ಯರವರು ಕನ್ನಡಿಗರಿಗೆ ಒಪ್ಪಿಸಿರುವ ಈ ಕಾಣಿಕೆಯು ಅಮೌಲ್ಯವಾಗಿರುವುದು. ಕನ್ನಡಿಗರು ಕಾಣಿಕೆಯನ್ನು ಸ್ವೀಕರಿಸಿ ತಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕೆಂದು ಕೇಳಿಕೊಂಡಿರುವುದು ಆಚಾರ್ಯರ ವಿನಯಸಂಪನ್ನತೆಯ ಕುರುಹು. ಕನ್ನಡಿಗರು ಈ ಕಾಣಿಕೆಗಾಗಿ ಆಚಾರ್ಯರಿಗೆ ಅತ್ಯಂತ ಋಣಿಗಳಾಗಿರುವರು. ಕನ್ನಡ ನುಡಿಯ ಇತಿಹಾಸದಲ್ಲಿ ಹಿಂದೆ ಎಂದೂ ಆಗದಿರುವ ಇಂತಹ ಅಮೋಘವಾದ ಕಾರ್ಯವನ್ನು ಕೈಕೊಂಡು ಮೂರು ಸಂಪುಟಗಳನ್ನು ಸಂಪೂರ್ಣಗೊಳಿಸುವ ಪುಣ್ಯಶಾಲಿಗಳಾದ ಈ ಮಹನೀಯರನ್ನು ಆಧುನಿಕ ಬರೆಹಗಾರರೂ ಕವಿಗಳೂ, ಪೂರ್ವದ ಕವಿಗಳಾದ ವ್ಯಾಸ ವಾಲ್ಮೀಕಿಗಳನ್ನೂ ಪಾಣಿನಿ ಕೇಶಿರಾಜ ಭಟ್ಟಾಕಳಂಕರನ್ನೂ ಸ್ಮರಿಸುವಂತೆ, ಮೊದಲು ವಂದಿಸಿ ಆ ಬಳಿಕ ಕಾರ್ಯಾರಂಭಮಾಡಬೇಕು.

ವಾಗ್ಭೂಷಣ.

ಅನೇಕ ವರ್ಷಗಳಿಂದ ಕನ್ನಡಿಗರು ಮಹದಾಶೆಯಿಂದ ನಿರೀಕ್ಷಿಸುತಲಿದ್ದ ಕರ್ಣಾಟಕ ಕವಿಚರಿತೆಯ ಮೂರನೆಯ ಸಂಪುಟವು ಹೊರಬಿತ್ತು. ವೃದ್ಧಾಚಾರ್ಯರಿಗೆ ಅನಂತ ಧನ್ಯವಾದಗಳು. ಆಚಾರ್ಯರ ಕವಿಚರಿತಗಳೇ ಮೊಟ್ಟಮೊದಲು ಕನ್ನಡಿಗರಲ್ಲಿ ನಿಜವಾದ ಸಾಹಿತ್ಯೇತಿಹಾಸ ಸಂಶೋಧನಾ ಬುದ್ಧಿಯನ್ನು ಹುಟ್ಟಿಸಿದುವು. ಅಂದಿನಿಂದ ನಿಜವಾದ ಉತ್ಸಾಹವು ತಲೆದೋರಿ ಶಾಸ್ತ್ರೀಯವಾದ ಸಂಶೋಧನೆ ಮತ್ತು ವಿಮರ್ಶೆಗೆ ಆರಂಭವಾಗಿದೆ. 'ಬಲ್ಲವನೆ ಬಲ್ಲ ಬೆಲ್ಲದ ಸವಿಯ' ಎಂಬಂತೆ ಇಂತಹ ಕೆಲಸ ಮಾಡಿದವರಿಗೆ ಅದರ ಕಷ್ಟ ಸುಖಗಳು ಗೊತ್ತಲ್ಲದೆ ಇತರರಿಗೆ ಗೊತ್ತಾಗುವ ಹಾಗಿಲ್ಲ. ಅಲ್ಲದೆ ಕುಂದು ಕೊರತೆಗಳೂ, ಲೋಪದೋಷಗಳೂ, ಇಂತಹ ಗ್ರಂಥಗಳಿಗೆ ಅನಿವಾರ್ಯವಾದ ಲಕ್ಷಣಗಳು. ಇಂದಿನ ಆಧಾರಕ್ಕೆ ಸರಿಯಾಗಿ ಈ ಸಿದ್ಧಾಂತ, ನಾಳೆ ಇನ್ನೇನು ಹೊಸ ಆಧಾರ ಸಿಗುವುದೋ; ಯಾವ ಸಿದ್ಧಾಂತ ಎಷ್ಟುಮಟ್ಟಿಗೆ ನಿಲ್ಲುವುದೋ ಬಲ್ಲವರಾರು? ಅಲ್ಲದೆ ವ್ಯಕ್ತಿಗಳ ಸಾಹಸಕ್ಕೂ ಶಕ್ತಿಗೂ ಒಂದು ಮಿತಿಯುಂಟು. ಜನರು ಮಿತಿಮೀರಿ ನಿರೀಕ್ಷಿಸುವುದು ಶುದ್ಧ ಅನ್ಯಾಯ. ಈ ದೃಷ್ಟಿಯಿಂದ ನೋಡಿದರೆ, ಕವಿಚರಿತ್ರಕಾರರು ಕಷ್ಟತಮವಾದ ಕೆಲಸವನ್ನು ಅದ್ಭುತರೀತಿಯಿಂದ ನಿರ್ವಹಿಸಿರುವರೆಂದೇ ಹೇಳಬೇಕಾಗುತ್ತದೆ.

ವಿಶ್ವಕರ್ಣಾಟಕ.

ರಾವಬಹದ್ದೂರ ಆರ್. ನರಸಿಂಹಾಚಾರ್ಯರಿಂದ ರಚಿಸಲ್ಪಟ್ಟ ಈ ಬಗೆಯ ಗ್ರಂಥಗಳಲ್ಲಿ ಇದು ಮೂರನೆಯದಾಗಿದೆ. ಇದರಲ್ಲಿ ೧೮ನೇ ಮತ್ತು ೧೯ನೇ ಶತಮಾನದಲ್ಲಿ ಆಗಿಹೋದ ಕವಿಗಳ ಮತ್ತು ಗ್ರಂಥಕಾರರ ವಿವರಣೆಗಳು ಬಂದಿರುತ್ತವೆ. ಈ ಮೂರು ಗ್ರಂಥಗಳೆಂದರೆ ಹಿಂದಕ್ಕೆ ಕನ್ನಡಭಾಷಾ ಸೇವೆಯನ್ನು ಮಾಡಿಹೋದ ಗ್ರಂಥಕಾರರ ವಿಷಯಗಳನ್ನು ಬೋಧಿಸತಕ್ಕ ಅಪೂರ್ವರತ್ನಗಳಾಗಿವೆ. ಇವುಗಳು ಕನ್ನಡಿಗರ ವಾಙ್ಮಯವಾವುದು, ಅದರ ವಿಸ್ತಾರವೆಷ್ಟು, ಅವರ ಜಾಗ್ರತೆಯು ಯಾವ ಹಾದಿಯದು ಎಂಬದನ್ನು ಕಂಡುಹಿಡಿಯಲಿಕ್ಕೆ ಅತ್ಯಂತ ಉಪಯುಕ್ತ ಸಾಧನಗಳಾಗಿವೆ. ಈ ಅಮೌಲ್ಯ ಗ್ರಂಥಗಳನ್ನು ರಚಿಸಿ ರಾ|| ಬ|| ನರಸಿಂಹಾಚಾರ್ಯರು ಕನ್ನಡಿಗರಿಗೆಲ್ಲ ಅತ್ಯಂತ ಉಪಕಾರ ಮಾಡಿರುವರು. ಈ ಮೂರನೇ ಭಾಗವಾದರೂ ಹಿಂದಿನ

ಭಾಗಗಳಂತೆಯೇ ಅನೇಕ ವಿಷಯಗಳನ್ನು ಒಳಕೊಂಡಿರುತ್ತದೆ. ದ್ರಾವಿಡ ಭಾಷೆಗಳ ಬಗ್ಗೆ ಒಂದು ವಿಸ್ತೃತಪೀಠಿಕೆಯೂ ಇದರಲ್ಲಿ ಕೊಡಲ್ಪಟ್ಟಿದೆ. ಪ್ರತಿಯೊಬ್ಬ ಕನ್ನಡಿಗನು ಈ ಗ್ರಂಥವನ್ನು ಅವಶ್ಯವಾಗಿ ಸಂಗ್ರಹಿಸಬೇಕು.

ನವಕರ್ಣಾಟಕ.

EXTRACTS FROM OPINIONS ON
Nitivakyamanjari.

(Recognised for use in Kannada Primary Schools by the Directors of Public Instruction, Mysore and Madras, and as a Library book for Primary Schools by the Director of Public Instruction, Bombay.)

This is a small book of 42 pages written in lucid prose containing a collection of ethical maxims, adapted from the Tamil classics of Avvai, Tiruvalluvar, and others and the Puranas and other Sanskrit works like Bhartruhari's Nitisataka, classified in four graded parts. The maxims in the first part are arranged alphabetically and those in the third part are illustrated with suitable examples from life and nature while those in the last part are explained by a reference to Puranic incidents from which the morals are drawn. This book will be found useful in primary schools.

HINDU.

Nitivakyamanjari is a book of moral maxims gathered together from well-kown Sanskrit and Tamil poets such as Kshemendra, Bhartruhari, Avveyar and Tiruvalluvar. It is written in an easy simple and chaste Kannada style for the benefit of boys and girls reading in the Primary classes. There are 4 parts in this small book of 42 pages. The first part gives an alphabetical list of 116 short moral maxims. In the second part there are 120 longer moral sentences.

The third part consists of 80 maxims with appropriate trations. And in the fourth part there are 66 maxims illustrated and explained by means of Puranic stories. The book is admirably fitted to serve as a handbook of moral instruction of Primary and Middle Classes,

EVENING MAIL.

ನೀತಿಯನ್ನು ಬೋಧಿಸುವುದಕ್ಕೆ ಬಾಲ್ಯವೇ ಯುಕ್ತವಾದ ಕಾಲವಾದುದರಿಂದಲೂ, ಗ್ರಂಥವು ಬಹಳ ಸುಲಭವಾದ ವಾಕ್ಯಗಳಿಂದ ಬರೆಯಲ್ಪಟ್ಟಿರುವುದರಿಂದಲೂ ಬಾಲಕ ಬಾಲಿಕೆಯರಿಗೆ ಉಪಕಾರಕವಾಗುವಂತೆ ಕನ್ನಡ ಪ್ರಾಥಮಿಕ ಪಾಠಶಾಲೆಗಳಲ್ಲಿ ಈ ಪುಸ್ತಕವನ್ನು ಪಠ್ಯಪುಸ್ತಕವನ್ನಾಗಿ ನಿಯಮಿಸುವುದು ಬಹಳ ವಿಹಿತವೆಂದು ನಮ್ಮ ಅಭಿಪ್ರಾಯವು.

ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ.

ನೀತಿಮಯ ವಾಕ್ಯಗಳಿಂದ ರಂಜಿಸುವ ಚಿಕ್ಕ ಪುಸ್ತಕವಿದು, ಪ್ರಾಕ್ತನ ವಿಮರ್ಶ ವಿಚಕ್ಷಣ, ರಾವ್‌ಬಹಾದುರ್ ಆರ್. ನರಸಿಂಹಾಚಾರ್ಯರವರಿಂದ ವಿರಚಿತವಾದುದು. ಇದರಲ್ಲಿ ಬಾಲಕ ಬಾಲಕಿಯರಿಗೇ ಅಲ್ಲದೆ ಎಲ್ಲರಿಗೂ ಉಪಯುಕ್ತವಾದ ೩೮೨ ನೀತಿವಾಕ್ಯಗಳಿವೆ. ನಾಲ್ಕು ಭಾಗಗಳಿರುತ್ತವೆ. ಗ್ರಂಥಕರ್ತರು ಕೆಲವು ಪುರಾತನ ಕವಿಗಳ ನೀತಿವಾಕ್ಯಗಳನ್ನು ಉದ್ಧರಿಸಿರುವರಲ್ಲದೆ ತಮ್ಮ ಪರಿಪಕ್ವಾನುಭವದ ನೀತಿವಚನಗಳನ್ನೂ ಉದಾಹರಣ ಸಹಿತವಾಗಿ ಕೊಟ್ಟಿದ್ದಾರೆ. **ವಿಶ್ವಬಂಧು.**

ಮಕ್ಕಳಿಗೆ ನೀತಿಪಾಠ ಕಲಿಸಲು, ಪುರಾಣೇತಿಹಾಸಗಳ ಕತೆಗಳ, ಪಾತ್ರಗಳ, ರಹಸ್ಯಗಳ ಪರಿಚಯಮಾಡಿಕೊಡಲು, ಜಾಣ್ಣುಡಿಗಳನ್ನೂ ಒಣ್ಣುಡಿಗಳನ್ನೂ ಅವರಿಗೆ ತಿಳಿಸಲು ಇದಕ್ಕಿಂತ ರಮ್ಯವಾದ ಮಾರ್ಗವಿಲ್ಲ.

ವಿಶ್ವಕರ್ಣಾಟಕ.

ಇದು ತಮಿಳು ಸಂಸ್ಕೃತ ಕವಿಗಳ ಗ್ರಂಥಗಳ ಆಧಾರದಿಂದಲೂ ಇತಿಹಾಸ ಪುರಾಣಗಳ ಆಧಾರದಿಂದಲೂ ಬರೆಯಲ್ಪಟ್ಟಿದೆ. ಇದರಲ್ಲಿ ನಾನಾ ಬಗೆಯ ನೀತಿಬೋಧಕ ವಾಕ್ಯಗಳೂ, ಅವುಗಳ ಅರ್ಥವನ್ನೂ ಸ್ಪಷ್ಟ

...ಸಲು ಉಚಿತವಾದ ದೃಷ್ಟಾಂತಗಳೂ ನಿರೂಪಿಸಲ್ಪಟ್ಟಿವೆ. ಈ ಗ್ರಂಥವು ಪ್ರಥಮಿಕ ಶಾಲೆಗಳಲ್ಲಿ ನೈತಿಕ ಶಿಕ್ಷಣಕ್ಕೆ ಬಹು ಪ್ರಯೋಜನಕಾರಿಯಾಗಿ ಇತ್ತದೆ.

ನವಕರ್ಣಾಟಕ.

"ಕರ್ಣಾಟಕ ಕವಿಚರಿತೆ'' ಯಂತಹ ಗ್ರಂಥಗಳ ಕರ್ತರಾದ ನರಸಿಂಹಾಚಾರ್ಯರ ಪುಸ್ತಕಗಳನ್ನು ಕುರಿತು ಹೆಚ್ಚೇನೂ ಹೇಳುವ ಅಗತ್ಯವಿಲ್ಲ. ಪ್ರಕೃತದ ಪುಸ್ತಕವು ಚಿಕ್ಕಮಕ್ಕಳಿಗೆ ನೀತಿಬೋಧೆ ಮಾಡುವುದಕ್ಕೆ ಪ್ರಯೋಜನಕರವಾಗಿದೆ. ವಾಕ್ಯಗಳೆಲ್ಲವೂ ಗದ್ಯರೂಪವಾಗಿವೆ: ಪದ್ಯರೂಪವಾಗಿದ್ದರೆ ಮಕ್ಕಳಿಗೆ ಕಂಠಪಾಠಕ್ಕೂ ಅನುಕೂಲವಾಗುತ್ತಿತ್ತು. "ನೀತಿಮಂಜರಿ''ಯಲ್ಲಿ ತಮ್ಮ ಪದ್ಯರಚನಾ ಚಾತುರ್ಯವನ್ನು ಗ್ರಂಥಕರ್ತರು ಮೊದಲೇ ತೋರಿಸಿರುವುದರಿಂದ, ಪ್ರಕೃತದ ಪುಸ್ತಕದೊಳಗಿನ ವಾಕ್ಯಗಳಿಗೆ ಕೂಡ ಪದ್ಯರೂಪದ ಒಂದು ಮೆರುಗನ್ನು ಕೊಟ್ಟಿದ್ದರೆ ಬಹಳ ಚೆನ್ನಾಗುತ್ತಿತ್ತು ಎನಿಸುವುದು ಅಷ್ಟೆ. ಪುಸ್ತಕದ ಮುದ್ರಣ, ರೀತಿ, ಅಚ್ಚುಕಟ್ಟು ಮುಂತಾದುವೆಲ್ಲ ಸೊಗಸಾಗಿವೆ.

ಕರ್ಣಾಟಕ ಕೇಸರಿ.

ಪುಸ್ತಕವು ಅಚ್ಚುಕಟ್ಟಾಗಿದೆ. ಇದರಲ್ಲಿ ನಾಲ್ಕು ಭಾಗಗಳಿವೆ. ಮೊದಲನೇ ಭಾಗದಲ್ಲಿ ನೀತಿವಾಕ್ಯಗಳು ಅಕಾರಾದಿ ಕ್ರಮದಲ್ಲಿ ವರ್ಣಿಸಲ್ಪಟ್ಟಿವೆ. ಮುಂದೆ ಪ್ರತಿಯೊಂದು ಭಾಗದಲ್ಲಿ ನೀತಿವಾಕ್ಯಗಳಿಗೆ ಉದಾಹರಣೆಗಳು ಪುರಾಣಾದಿಗಳಿಂದ ತಕ್ಕೊಂಡು ಉದಹರಿಸಲ್ಪಟ್ಟಿವೆ. ಚಿಕ್ಕಮಕ್ಕಳು ಓದಲು ಉತ್ತಮವಾಗಿದೆ. ಇದರಿಂದ ಅಕ್ಷರಾಭ್ಯಾಸವೂ ನೀತಿಬೋಧೆಯೂ ಒಮ್ಮೆಲೇ ಆಗುವುದು. ಭಾಷೆ ಉತ್ತಮವಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಇನಾಮಿಗಾಗಿ ಉಪಯೋಗಿಸಲು ತಕ್ಕದ್ದಾಗಿದೆ. ಎಲ್ಲರೂ ಅವಶ್ಯವಾಗಿ ಓದಬೇಕಾದ ಪುಸ್ತಕ.

ಕರ್ಣಾಟಕ ಧುರೀಣ.

ಇದು ಮೈಸೂರ ಪ್ರಾಥಮಿಕಶಾಲೆಗಳಲ್ಲಿ ಪಠ್ಯಪುಸ್ತಕವಾಗಿದೆ. ಅವ್ವೈಯಾರ್, ತಿರುವಳ್ಳುವರ್ ಮೊದಲಾದ ತಮಿಳು ಕವಿಗಳ ಹಾಗೂ

ಕ್ಷೇಮೇಂದ್ರ, ಭರ್ತೃಹರಿ ಮುಂತಾದ ಸಂಸ್ಕೃತ ಕವಿಗಳ ಉಕ್ತಿಗಳಿಂ ಈ ನೀತಿವಾಕ್ಯಗಳನ್ನು ಸಂಗ್ರಹಿಸಿದೆ. ಅವು ಸುಲಭವೂ ಸ್ಪಷ್ಟವೂ ಆಗಿವೆ. ನರಸಿಂಹಾಚಾರ್ಯರು ಮಕ್ಕಳನ್ನು ಚಿರ ಋಣಿಗಳನ್ನಾಗಿ ಮಾಡಿದ್ದಾರೆ. ಚಿಕ್ಕಮಕ್ಕಳು ಹಾಗೂ ಪ್ರೌಢವಿದ್ಯಾರ್ಥಿಗಳ ಸಲುವಾಗಿ ಪ್ರತಿಯೊಬ್ಬರು ಇದನ್ನು ಸಂಗ್ರಹಿಸುವದವಶ್ಯವು.

ಕರ್ಮವೀರ.

ನೀತಿ ವಾಕ್ಯಗಳನ್ನು ಬರೆಯುವಲ್ಲಿ ನಾಲ್ಕು ಗುಂಪುಗಳನ್ನು ಮಾಡಿ ಕೊಂಡಿದ್ದಾರೆ. ಮೊದಲನೆಯ ಗುಂಪಿನಲ್ಲಿಯ ೧೧೬ ವಾಕ್ಯಗಳು ಹುಡುಗರಿಗೆ ತೀರ ಬೋಧಪ್ರದವಾಗಿವೆ. ವಾಕ್ಯಗಳು ಕಿರಿಯವಾಗಿಯೂ ಮಿತಶಬ್ದ ಯುಕ್ತವಾಗಿಯೂ ಇರುವುದರಿಂದ ಸುಲಭವಾಗಿವೆ. ಎರಡನೆಯ ಭಾಗದಲ್ಲಿ ದೊಡ್ಡದೊಡ್ಡ ವಾಕ್ಯಗಳು ೧೨೦ ಇವೆ. ಇದರಲ್ಲಿ ಎಷ್ಟೋ ವಾಕ್ಯಗಳು ಬಾಲಕರ ಬುದ್ಧಿಗೆ ನಿಲುಕದವುಗಳೂ ಉಂಟು. ಇವುಗಳು ಗುರುವಿನ ಸಹಾಯದಿಂದ ತಿಳಿಯುವಂತಹವಾಗಿವೆ. ಬಾಲಕರ ಮುಂದಿನ ಜೀವನಕ್ಕೆ ಸಹಾಯಕವಾಗುವಂತಹವು. ಮೂರನೆಯ ಗುಂಪಿನಲ್ಲಿ ೮೦ ವಾಕ್ಯಗಳು ಚಿಕ್ಕವಾಗಿ ಉತ್ತಮವಾಗಿವೆ. ಇವು ಉಪಮೆಗಳಿಂದೊಡಗೂಡಿರುವುದರಿಂದ ಹೆಚ್ಚು ಮನೋಹರಗಳಾಗಿವೆ. ನಾಲ್ಕನೆಯ ಗುಂಪಿನ ೬೬ ವಾಕ್ಯಗಳಾದರೂ ಚಿಕ್ಕವಾಗಿವೆ. ಪುರಾಣದೊಳಗಿನ ಉದಾಹರಣಗಳನ್ನು ಒಂದೆರಡು ಸಾಲು ಗಳಲ್ಲಿ ಪ್ರತಿವಾಕ್ಯಕ್ಕೂ ಜೋಡಿಸಿದ್ದಾರೆ. ಈ ಪುಸ್ತಕದಲ್ಲಿ ಅಲ್ಲಲ್ಲಿ ಪುನರುಕ್ತಿದೋಷಗಳಿವೆ. ಆದರೂ ವಾಕ್ಯರಚನೆಯಿಂದಲೂ ಉಪಮೆ ಗಳಿಂದಲೂ ಅವು ಎದ್ದು ತೋರದಂತಿದ್ದು ನೀತಿ ಬೋಧಕ್ಕೆ ಪೋಷಕ ವಾಗಿವೆ. ವಾಕ್ಯಗಳಲ್ಲಿ ಕೆಲವು ಸಂಸ್ಕೃತ ಶ್ಲೋಕಗಳ ಅನುವಾದಗಳೂ ಕನ್ನಡ ಕವಿತೆಗಳ ಅವತರಣಿಕೆಗಳೂ ಬೇರೆ ಗ್ರಂಥಗಳಿಂದ ಉದಾಹರಿಸಿ ಕೊಂಡಂಥವುಗಳೂ ಇವೆ. ಈ ಪುಸ್ತಕವನ್ನು ಮೈಸೂರ ವಿದ್ಯಾಶಾಖೆಯವರು ಕನ್ನಡ ಪ್ರೈಮರಿ ಸ್ಕೂಲುಗಳ ಉಪಯೋಗಕ್ಕಾಗಿ ಸ್ವೀಕರಿಸಿದುದು ಯಥಾಯೋಗ್ಯವಾಗಿದೆ.

ಜಯ ಕರ್ನಾಟಕ.